
ಪುಸ್ತಕ ಪ್ರಪಂಚ

ಸಂಪುಟ ೩೮ ೧೯೮೪ ಜುಲೈ ಸಂಚಿಕೆ ೧೨



ವಿಷಯ ಸೂಚಿ

ಮುಖಚಿತ್ರ : ರಂಜಾನ್

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆ

ಸಂಪುಟ ೩೮ ಜುಲೈ ೧೯೮೪ ಸಂಚಿಕೆ ೧೨

ಅದ್ಭುತ ನಾವಿಕರು: ವಲಸೆಗಾರ ಹಕ್ಕಿಗಳು

ಪ್ರತಿ ಶಿಶಿರದಲ್ಲೂ ಕೆನಡಾ ಮತ್ತು ಅಮೆರಿಕದ ಉತ್ತರ ಭಾಗದ ಕಾಡುಗಳಲ್ಲಿಯ ತನ್ನ ಗೂಡುಗಳಿಂದ ಹೊರಟ ಕೇವಲ ೧೧ ಸೆಂ.ಮೀ. ಉದ್ದ ಹಾಗೂ ೧೫ ಗ್ರಾಮ್ ಕೂಡ ತೂಕವಿರದ ಟೆನೆಸೀವಾರ್ಬ್ಲರ್ ಎಂಬ ಪುಟ್ಟ ಹಕ್ಕಿ, ೫೦೦೦ ಕಿ.ಮೀ.ಗಳಷ್ಟು ಭೂಪ್ರದೇಶದ ಮೇಲೆ ಹಾರಿ ಅಮೆರಿಕ ದೇಶದ ಮಧ್ಯಭಾಗ ಹಾಗೂ ದಕ್ಷಿಣ ಭಾಗಗಳಲ್ಲಿರುವ ಚಳಿಗಾಲದ ಸ್ಥಳಗಳನ್ನು ಸೇರುತ್ತದೆ. ಇತರೆ ಹಲವು ವಲಸೆಗಾರ ಹಕ್ಕಿಗಳಂತೆ ಇವೂ ಕೂಡ ಹಿಂದಿನ ವರ್ಷ ಬೀಡುಬಿಟ್ಟು ಗೂಡು ಕಟ್ಟಿದ್ದ ಅದೇ ಮರ, ಅದೇ ಸ್ಥಳವನ್ನು ಹುಡುಕಿ ಸೇರುತ್ತವೆ.

ಕಪ್ಪು ವಾರ್ಬ್ಲರ್ ಎಂಬ ಮತ್ತೊಂದು ಹಕ್ಕಿ ಕೂಡ ಅಮೆರಿಕದ ಉತ್ತರದ ಕಾಡುಗಳಿಂದ ಶಿಶಿರದಲ್ಲಿ ಹೊರಟು ಅಟ್ಲಾಂಟಿಕ್ ಸಾಗರದ ತೀರವನ್ನು ಸೇರುತ್ತದೆ. ಅಲ್ಲಿಂದ ಮುಂದೆ ೮೬ ಗಂಟೆಗಳ ಕಾಲ ಎಲ್ಲೂ ವಿಶ್ರಮಿಸದೆ ಸುಮಾರು ೩,೭೦೦ ಕಿ.ಮೀ.ಗಳಷ್ಟು ವಿಸ್ತಾರದ ಸಮುದ್ರಲಂಘನ ಮಾಡುತ್ತವೆ ಎಂಬುದು ನಂಬಲಸಾಧ್ಯವಾದ ಸತ್ಯ. ಇವು ಅನುಕೂಲವಾಗಿರುವ ಗಾಳಿಯ ಪ್ರವಾಹವನ್ನು ಹುಡುಕಿಕೊಂಡು ಭೂಮಿಯಿಂದ ಮೇಲೆ ಸುಮಾರು ೬೪೦೦ ಮೀ. ಎತ್ತರದಲ್ಲಿ ಹಾರುತ್ತವೆ. ಇದು ಸಣ್ಣ ಹಕ್ಕಿಗಳಲ್ಲೀ ಸತತವಾದ, ಅತಿ ಉದ್ದದ ಹಾಗೂ ಅತಿ ಎತ್ತರದ ಹಾರಾಟಕ್ಕೆಂದು ದಾಖಲಾಗಿರುವ ವಿಕ್ರಮ.

೧೯೮೧ ಏಪ್ರಿಲ್ ತಿಂಗಳ ರೀಡರ್ಸ್ ಡೈಜೆಸ್ಟ್ ಪತ್ರಿಕೆಯಲ್ಲಿ ಪ್ರಕಟವಾಗಿದ ಫ್ಯಾಂಟಾಸ್ಟಿಕ್ ವಾಯೇಜರ್ಸ್: ದಿ ಮೈಗ್ರೇಟಿಂಗ್ ಬರ್ಡ್ಸ್ ಎಂಬ ಲೇಖನದ ಭಾವಾನುವಾದ.

ಈ ವಿಕ್ರಮಗಳನ್ನೂ ಮೀರಿಸುವಂಥ ಅದ್ಭುತ ಸಾಹಸಗಳನ್ನು ವಲಸೆ ಹೋಗುವ ದೊಡ್ಡ ಹಕ್ಕಿಗಳು ಮಾಡುತ್ತವೆ. ಉತ್ತರ ಧ್ರುವದಲ್ಲಿರುವ ಟರ್ನ್ ಎಂಬ ಪಕ್ಷಿ ಈ ಸಾಹಸಗಳಲ್ಲಿ ತ್ರಿವಿಕ್ರಮ. ಇವುಗಳಲ್ಲಿ ಕೆಲವು ತಮ್ಮ ವಾಸಸ್ಥಳ ವಾದ ಉತ್ತರಧ್ರುವದಿಂದ ೭೦೦ ಕಿ.ಮೀ.ಗಳಷ್ಟು ಮಾತ್ರ ಪ್ರಯಾಣ ಮಾಡಿದರೆ, ಬಹುತೇಕ ಉಳಿದೆಲ್ಲಾ ಪಕ್ಷಿಗಳೂ ೨೦,೦೦೦ ಕಿ.ಮೀ.ಗಳಷ್ಟು ದೂರ ಕ್ರಮಿಸಿ ಭೂಮಿಯ ಮತ್ತೊಂದು ತುದಿಯಲ್ಲಿರುವ ದಕ್ಷಿಣಧ್ರುವ ಸೇರುತ್ತವೆ.

ತಡೆಯಲಾರದ ಚಳಿಯಿಂದ ತಪ್ಪಿಸಿಕೊಳ್ಳಲು ಅಥವಾ ಆಹಾರ ಸಂಪಾದನೆ ಗಾಗಿ ಈ ಪ್ರಯಾಣಗಳನ್ನು ಪಕ್ಷಿಗಳು ಕೈಗೊಳ್ಳುತ್ತವೆ ಎಂಬ ಉತ್ತರ "ಪಕ್ಷಿಗಳು ವಲಸೆ ಹೋಗುವುದೇಕೆ?" ಎಂದು ಪ್ರಶ್ನೆ ಹಾಕಿದಾಗ ಸಹಜವಾಗಿ ತೋರುತ್ತದೆ. ಆದರ ಒಳ್ಳೆಯ ಆಹಾರ ಹಾಗೂ ವಾತಾವರಣವನ್ನು ಹೊಂದಲು ಬೇಕಾದ್ದಕ್ಕಿಂತ ಹೆಚ್ಚು ದೂರ ವಲಸೆ ಹೋಗುವ ಪಕ್ಷಿಗಳನ್ನು ಕಂಡಾಗ ವಲಸೆ ಹೋಗುವುದರ ಮರ್ಮ ಅರ್ಥವಾಗುವುದಿಲ್ಲ. ಹಾಗೂ ಮೊದಲಿನ ಉತ್ತರ ಅಸಮಂಜಸ ಎನಿಸುತ್ತದೆ. ಬಲವಂತದ್ದೆನಿಸುವ ಈ ಬಗೆಯ ಪ್ರಯಾಣಗಳು ಯುಗಾಂತರಗಳಲ್ಲಿ ಹವೆಯಲ್ಲಿ ಉಂಟಾದ ತೀವ್ರ ಬದಲಾವಣೆ ಗಳಿಂದ ವಿಕಾಸಹೊಂದಿರಬೇಕು. ಕಾರಣ ಏನೇ ಇರಲಿ, ಭೂಮಿ ಇನ್ನೂ ಬಾಲ್ಯದಲ್ಲಿದ್ದಾಗಲೇ ಈ ರೀತಿಯ ವಲಸೆ ಹೋಗುವಿಕೆ ಪ್ರಾರಂಭವಾಗಿರಬೇಕು. ಮೇಲ್ನೋಟಕ್ಕೆ ಈ ರೀತಿ ವಲಸೆ ಹೋಗಲು ಬೇಕಾದ ಪ್ರಚೋದನೆ ಒಂದು ದಿನದಲ್ಲಿಯ ಹಗಲಿನ ಉದ್ದ ಅಥವಾ ರಾತ್ರಿಯ ಉದ್ದ ದೊರಕಿಸಿಕೊಡುತ್ತವೆ. ಹಗಲುಗಳು ಉದ್ದವಾಗುವಿಕೆ ಅಥವಾ ಕುಗ್ಗುವಿಕೆ ಮಿದುಳಿನಲ್ಲಿರುವ ಪಿಟ್ಯೂಟರಿ ಮತ್ತು ಪೀನಿಯಲ್ ಎಂಬ ಗ್ರಂಥಿಗಳ ಮೇಲೆ ಪರಿಣಾಮ ಬೀರುತ್ತದೆ. ಇದರಿಂದಾಗಿ ವಲಸೆ ಹೋಗುವ ಸಮಯ ಸಮೀಪಿಸಿದಂತೆಲ್ಲ ಹಕ್ಕಿಗಳಲ್ಲಿ ಒಂದು ರೀತಿಯ ಚಡಪಡಿಕೆ ಪ್ರಾರಂಭವಾಗುತ್ತದೆ. ಕಡೆಗೊಮ್ಮೆ ಒಟ್ಟಿಗೆ ಎಲ್ಲ ಹಕ್ಕಿಗಳೂ ಹಾರಲಾರಂಭಿಸಿ ವಲಸೆ ಹೋಗಲು ತಯಾರಾಗುತ್ತವೆ.

ದೇಹದ ಗಾತ್ರಕ್ಕೆ ಹೋಲಿಸಿದಾಗ ಹಕ್ಕಿಗಳ ಪಕ್ಕೆಗಳಲ್ಲಿರುವ ರೆಕ್ಕೆಯ ಸ್ನಾಯುಗಳು ಪರಿಮಾಣದಲ್ಲಿ ಸ್ತನಿಗಳಲ್ಲಿರುವುದಕ್ಕಿಂತ ದೊಡ್ಡದಾಗಿ ಹಾಗೂ ಬಲವಾಗಿ ಬೆಳವಣಿಗೆ ಹೊಂದಿರುತ್ತವೆ. ಹಕ್ಕಿಯ ಉಸಿರಾಟದ ಅಂಗಗಳೂ ವಿಶೇಷವಾಗಿ ವಿಕಾಸ ಹೊಂದಿದ್ದು, ಬೇರೆ ಯಾವುದೇ ಬೆನ್ನೆಲುಬುಳ್ಳ ಪ್ರಾಣಿ ಗಿಂತಲೂ ಮಿಗಿಲಾಗಿ ವಾತಾವರಣದಿಂದ ಶಕ್ತಿಜನಕ ಪ್ರಾಣವಾಯುವನ್ನು

ಸೆಳೆಯಬಲ್ಲವು. ಹಲವು ಗಂಟೆಗಳ ಕಾಲ, ಕೆಲವೊಮ್ಮೆ ಹಲವು ದಿನಗಳ ಕಾಲ ಅವಿರತವಾಗಿ ಹಾರಲು ಬೇಕಾದ ಶಕ್ತಿಯನ್ನು ಹಕ್ಕಿಗಳು ತಮ್ಮ ಶರೀರದಲ್ಲಿ ಕೊಬ್ಬಿನ ಪದರಗಳ ರೂಪದಲ್ಲಿ ಶೇಖರಿಸಿಟ್ಟುಕೊಂಡಿರುತ್ತವೆ. ಇದರಿಂದಾಗಿ ಅನ್ನಾಹಾರಗಳ ಆವಶ್ಯಕತೆಯಿಲ್ಲದೇ ಬಹುದೂರ ಹಾರಬಲ್ಲ ಚೈತನ್ಯಶಾಲಿಗಳಾಗುತ್ತವೆ. ಹಕ್ಕಿಗಳು ನಿಖರವಾದ ಸ್ಥಳಗಳಿಗೆ ಹಿಂದಿರುಗುವ ಅಥವಾ ವಲಸೆ ಹೋಗುವ ಈ ಪಕ್ಷಿಗಳಿಗೆ ದಿಕ್ಸೂಚಿ ಯಾವುದು ಎಂಬುದು ಮುಂದಿನ ಪ್ರಶ್ನೆ. ಬಹುಕಾಲದಿಂದಲೂ ಹಕ್ಕಿಗಳು ಮಾರ್ಗದರ್ಶನಕ್ಕಾಗಿ ಹಗಲಿನ ವೇಳೆ ನದಿ, ಸಮುದ್ರ ಪರ್ವತ, ಅರಣ್ಯಗಳಂಥ ಭೂಮಿಯ ಮೇಲ್ಮೈ ಲಕ್ಷಣಗಳನ್ನು ಅವಲಂಬಿಸುತ್ತವೆ ಎಂದು ನಂಬಲಾಗಿತ್ತು. ಇದು ನಿಜವೇ ಆಗಿದ್ದಿದ್ದರೆ ಹಕ್ಕಿಗಳನ್ನು ಅವುಗಳ ಸಾಮಾನ್ಯ ಪರಿಸರದಿಂದ ದೂರ ಕೊಂಡೊಯ್ದು ಅಪರಿಚಿತ ಸ್ಥಳಗಳಲ್ಲಿ ಬಿಟ್ಟಾಗ ಅವು ಗೊಂದಲಕ್ಕೊಳಗಾಗಬೇಕು. ಇದನ್ನು ಪರೀಕ್ಷಿಸುವುದಕ್ಕಾಗಿ ಬ್ರಿಟನ್ನಿನ ಲಾಕ್‌ಲಿ ಮತ್ತು ಡೇವಿಡ್‌ಲಾಕ್ ಎಂಬ ವಿಜ್ಞಾನಿಗಳು ಪ್ರಯೋಗಗಳನ್ನು ನಡೆಸಿದರು. ಶೀರ್‌ವಾಟರ್ ಎಂಬ ಹಕ್ಕಿಗಳು ಮೊದಲಿನ ತಮ್ಮ ವಾಸಸ್ಥಳಕ್ಕೇ ಹಿಂದಿರುಗುವಲ್ಲಿ ನಿಪುಣರು. ಲಾಕ್‌ಲಿ ಮತ್ತು ಲಾಕ್ ಈ ಹಕ್ಕಿಗಳನ್ನು ವೇಲ್ಸ್ ದ್ವೀಪದಲ್ಲಿದ್ದ ಅವುಗಳ ಗೂಡಿನಿಂದ ಹಿಡಿದು ದೂರದ ಬೇರೆ ಬೇರೆ ಸ್ಥಳಗಳಲ್ಲಿ ಬಿಟ್ಟುಬಂದರು. ಹೀಗೆ ಇತರೇ ಸ್ಥಳಗಳಲ್ಲಿ,ಸಾಗರದಾಚೆ ಕೊಂಡೊಯ್ದು ಬಿಟ್ಟರೂ ಈ ಹಕ್ಕಿಗಳು ಮತ್ತೆ ತಮ್ಮ ವಾಸಸ್ಥಳಕ್ಕೇ ಹಿಂದಿರುಗಿದ್ದವು. ಒಂದು ಹಕ್ಕಿಯಂತೂ ಫ್ರಾನ್ಸ್ ದೇಶದ ಮೇಲಿಂದ, ಆಲ್ಪ್ಸ್ ಪರ್ವತವನ್ನೂ ದಾಟಿ ಹಾರಿಬಂದಿತ್ತು. ಮತ್ತೊಂದು ಕೆನಡಾ ದೇಶದಿಂದ ಬ್ರಿಟನ್ನಿಗೆ ಕೇವಲ ಹನ್ನೆರಡೂವರೆ ದಿನಗಳಲ್ಲಿ ಮರಳಿ ಬಂದಿತ್ತು.

ತಮ್ಮ ಮಾರ್ಗದರ್ಶನಕ್ಕಾಗಿ ಈ ಹಕ್ಕಿಗಳು ಭೂಲಕ್ಷಣಗಳನ್ನು ಅವಲಂಬಿಸಿರುವುದು ಸಾಧ್ಯವಿರಲಿಲ್ಲ. ಆದ್ದರಿಂದ ಬೇರೆಯದೇ ರೀತಿಯ ಪ್ರಯೋಗಗಳನ್ನು ಕುತೂಹಲಿ ವಿಜ್ಞಾನಿಗಳು ಕೈಗೊಂಡರು. ಶಿಶಿರದಲ್ಲಿ ಪಕ್ಷಿಗಳು ವಲಸೆ ಹೋಗಲು ಪ್ರಾರಂಭಿಸುವ ಮೊದಲೇ ಅವನ್ನು ಸ್ಥಳಾಂತರಿಸಿಬಿಟ್ಟರು. ೧೯೫೭ ರಿಂದ ೧೦ ವರ್ಷ ಕಾಲ ನಡೆದ ಈ ಸಂಶೋಧನೆಯಲ್ಲಿ ೧೧,೦೦೦ ಗುರುತಿನ ಚೀಟಿ ಹಚ್ಚಲ್ಪಟ್ಟ ಸ್ಟಾರ್‌ಲಿಂಗ್ ಪಕ್ಷಿಗಳನ್ನು ನೆದರ್‌ಲ್ಯಾಂಡಿನಲ್ಲಿ ಹಿಡಿದು ದೂರದ ಸ್ವಿಟ್ಜರ್‌ಲೆಂಡಿನಲ್ಲಿ ಬಿಡುಗಡೆ ಮಾಡಲಾಯಿತು. ಅತ್ಯಂತ ಆಶ್ಚರ್ಯಕರವಾದ ಫಲಿತಾಂಶಗಳು ವಿಜ್ಞಾನಿಗಳಿಗಾಗಿ ಕಾದಿದ್ದವು. ಹೀಗೆ ಬಿಡಲ್ಪಟ್ಟವುಗಳಲ್ಲಿ ಹೆಚ್ಚಿನ ವಯಸ್ಕ ಹಕ್ಕಿಗಳು ಸ್ಥಳ ಬದಲಾವಣೆಯಿಂದ

ಸ್ವಲ್ಪವೂ ವಿಚಲಿತವಾಗದೇ ತಮ್ಮ ಹಾರಾಟದ ದಿಕ್ಕು ಬದಲಿಸಿಕೊಂಡ ಎಂದಿನಂತೆ ತಮ್ಮ ಚಳಿಗಾಲದ ವಾಸಸ್ಥಳಗಳಾದ ಇಂಗ್ಲೆಂಡ್ ಮತ್ತು ಫ್ರಾನ್ ದೇಶಗಳನ್ನು ಸೇರಿದವು. ಆದರೆ ಇನ್ನೂ ಬಾಲ್ಯ ಯೌವನದಲ್ಲಿದ್ದ ಹಕ್ಕಿಗ ಬದಲಾದ ಸ್ಥಳಗಳ ಅರಿವಿಲ್ಲದೇ ಮೊದಲಿನ ದಿಕ್ಕಿನಲ್ಲೇ ಹಾರಿ ದಾರಿತಪ್ಪಿದವ ಅನಂತರ ದಕ್ಷಿಣ ಫ್ರಾನ್ಸ್ ಹಾಗೂ ಐಬೀರಿಯಾ ಭೂಶಿರಗಳಲ್ಲಿ ಹೊ ವಸಾಹತುಗಳನ್ನು ಸ್ಥಾಪಿಸಿದವು. ಹೀಗಾಗಿ ಯೌವನಾವಸ್ಥೆಯಲ್ಲಿರುವ ಹಕ್ಕಿಗಳ ತಮಗೆ ಹುಟ್ಟಿನಿಂದಲೇ ಬಂದ ಯಾವುದೋ ವಿಶೇಷ ಸೂಚನೆಯನ್ನು ಅನ ಸರಿಸಿ ಹಾರುತ್ತವೆಂದೂ; ಇದಕ್ಕೆ ವ್ಯತಿರಿಕ್ತವಾಗಿ ವಯಸ್ಕ ಹಕ್ಕಿಗಳು ಅದ್ಭು ವಾದ ಯಾವುದೋ ದಿಕ್ಸೂಚಿಯನ್ನು ಹೊಂದಿದ್ದು, ಸ್ಥಳಾಂತರಿಸಲ್ಪಟ್ಟಾ ಹಾರಾಟದ ದಿಕ್ಕನ್ನು ಬದಲಿಸಿಕೊಳ್ಳಬಲ್ಲವೆಂಬುದೂ ಅರಿವಿಗೆ ಬಂದವು.

ಜರ್ಮನಿಯ ಪಕ್ಷಿಶಾಸ್ತ್ರಜ್ಞ ಗಸ್ತಾವ್ ಕ್ರೇಮರ್ ಈ ದಿಕ್ಸೂಚಿಗಳ ಏನಿರಬಹುದೆಂದು ಸೂಚಿಸುವ, ಪ್ರಯೋಗಗಳನ್ನು ೧೯೫೦ರ ಪ್ರಾರಂಭದ ಕೈಗೊಂಡ. ಯೂರೋಪಿನ ಸ್ಟಾರ್‌ಲಿಂಗ್ ಪಕ್ಷಿಗಳನ್ನು ಈತ ವೃತ್ತಾಕಾರ ಪಂಜರದಲ್ಲಿಟ್ಟು ಅವುಗಳ ಹಾರಾಟದ ಪಥವನ್ನು ಗಮನಿಸಿದನು. ವಸಂತದ ಚಡಪಡಿಸಿದ ಹಕ್ಕಿಗಳು ಈಶಾನ್ಯ ದಿಕ್ಕನ್ನು ನೋಡಿ ಹಾರಿದವು. ಶಿಶಿರದಲ್ಲಿ ಇವ ಹಕ್ಕಿಗಳು ವಿರುದ್ಧ ದಿಕ್ಕಿಗೆ ಮುಖಮಾಡಿದ್ದವು. ಅನಂತರ ಅವುಗಳ ದೃಷ್ಟಿ ಸೂರ್ಯನ ಬೆಳಕೊಂದನ್ನು ಬಿಟ್ಟು ಉಳಿದೆಲ್ಲವನ್ನು ಮರೆಮಾಚಿದಾಗ ಕೂ ಹಕ್ಕಿಗಳು ಸರಿಯಾದ ದಿಕ್ಕಿಗೇ ಮುಖಮಾಡಿದ್ದನ್ನು ಕ್ರೇಮರ್ ಗಮನಿಸಿದ ದರ್ಪಣಗಳ ನೆರವಿನಿಂದ ಬೆಳಕಿನ ದಿಕ್ಕನ್ನು ೯೦°ಗಳಷ್ಟು ಬದಲಿಸಿದಾಗ ಹಕ್ಕಿ ಗಳೂ ತಮ್ಮ ಪಥವನ್ನು ೯೦°ಗಳಷ್ಟು ಬದಲಿಸಿದ್ದು ಕಂಡು ಬಂತು. ಖಂಡಿತ ವಾಗಿಯೂ ಹಕ್ಕಿಗಳು ಸೂರ್ಯನ ಬೆಳಕಿನಿಂದ ಸೂಚನೆ ಪಡೆಯುತ್ತಿದ್ದವು.

ಇಂತಹುದೇ ಇತರ ಪ್ರಯೋಗಗಳನ್ನು ವೃತ್ತಾಕಾರದ ಪಂಜರ ಮತ್ತು ಸೂರ್ಯನ ಬದಲಾಗಿ ಕೃತಕ ಬೆಳಕನ್ನು ಉಪಯೋಗಿಸಿ ನಡೆಸಿದ ಕ್ರೇಮರ್ ಈ ಹಕ್ಕಿಗಳು ನಿಖರವಾದ ಸಮಯಪ್ರಜ್ಞೆ ಹೊಂದಿರುವುದನ್ನೂ ನಿರೂಪಿಸಿದ. ಇವು ಕೃತಕ ಸೂರ್ಯ ಚಲಿಸದಿದ್ದರೂ ತಮ್ಮ ಹಾರಾಟದ ದಿಕ್ಕನ್ನು ಬದಲಿಸು ತ್ತಿದ್ದವು. ಅವುಗಳ ಒಳಗಿನ ಗಡಿಯಾರಗಳು ನಿರೀಕ್ಷಿತ ಆದರೆ ಅಸ್ತಿತ್ವದಲ್ಲಿಲ್ಲದ ಸೂರ್ಯನ ಚಲನೆಯನ್ನು ಹೊಂದಿಕೊಂಡು ದಿಕ್ಕು ಬದಲಿಸುತ್ತಿದ್ದವು. ಕ್ರಮೇಣ ಈ ಜೈವಿಕ ಗಡಿಯಾರಗಳನ್ನು ಬೆಳಕಿನ ಉಗಮದ ಪಥ ಬದಲಿಸಿ ವಿಜ್ಞಾನಿಗಳು ಪುನಃ ಸಂಯೋಜಿಸಿದರು. ಹೀಗೆ ಬದಲಾಯಿಸಲ್ಪಟ್ಟ ಕೃತಕ

ವೇಳೆಗೆ ಹೊಂದಿಕೊಂಡು ಬೆಳೆದ ಹಕ್ಕಿಯೊಂದು (ಹೀಗೆ ವೇಳೆಯನ್ನು ಹೊಂದಿಸಲು ಕೃತಕ ಸೂರ್ಯನನ್ನು ಗಂಟೆಗೆ ೧೫° ಯಷ್ಟು ಕೋನದಲ್ಲಿ ಸ್ಥಳಾಂತರಿಸಲಾಗಿತ್ತು) ಸೂರ್ಯನ ಬೆಳಕಿಗೆ ಬಿಟ್ಟಾಗ ತಪ್ಪು ದಿಕ್ಕಿಗೆ ಹಾರಿತ್ತು. ಈ ಪ್ರಯೋಗಗಳಿಂದ ಹಕ್ಕಿಗಳು ಸೂರ್ಯನ ದಿಕ್ಸೂಚಿಯಾಗಿ ಉಪಯೋಗಿಸುವುದೇ ಅಲ್ಲದೆ ಸೂರ್ಯನ ಚಲನೆಯನ್ನು ಕೂಡ ಗಮನಕ್ಕೆ ತೆಗೆದುಕೊಳ್ಳುತ್ತವೆ ಎಂಬುದು ಸ್ಥಿರವಾಯಿತು.

ಸಾಧಾರಣವಾಗಿ ಹಕ್ಕಿಗಳು ರಾತ್ರಿ ಕಾಲದಲ್ಲೇ ವಲಸೆ ಹೋಗುತ್ತವೆ. ನಕ್ಷತ್ರಗಳಿಂದ ಕೂಡ ಅವು ಮಾರ್ಗದರ್ಶನ ಪಡೆಯಬಹುದೇ ಎಂಬುದನ್ನು ತಿಳಿಯಲು ಜರ್ಮನಿಯ 'ಸಾಯರ್' ಎಂಬ ವಿಜ್ಞಾನಿ ದಂಪತಿಗಳು ಪ್ರಯೋಗಗಳನ್ನು ನಡೆಸಿದರು. ಒಂದು ಪಂಜರದಲ್ಲಿ ಹಕ್ಕಿಗಳನ್ನು ಇಟ್ಟು ಅವಕ್ಕೆ ರಾತ್ರಿಯ ಆಗಸದ ಒಂದು ಭಾಗ ಮಾತ್ರ ಕಾಣುವಂತೆ ನಿಯಮಿಸಿದರು. ಹೀಗೆ ರಾತ್ರಿ ಆಕಾಶದ ಯಾವುದಾದರೊಂದು ಭಾಗ ಕಾಣುವವರೆಗೂ ಹಕ್ಕಿಗಳು ಸರಿಯಾದ ದಿಕ್ಕಿನತ್ತ ಮುಖಮಾಡುತ್ತಿದ್ದವು. ಮೋಡತುಂಬಿದ ರಾತ್ರಿಗಳಲ್ಲಿ ಚುಕ್ಕೆಗಳನ್ನು ಕಾಣದೇ ಹಕ್ಕಿಗಳು ಗೊಂದಲಕ್ಕೊಳಗಾಗಿ ಗುರಿಯಿಲ್ಲದೇ ಹಾರಲು ಪ್ರಾರಂಭಿಸುತ್ತಿದ್ದವು.

ಅನಂತರ ಸಾಯರ್ ದಂಪತಿಗಳು ವರ್ಷದ ಯಾವುದೇ ಕಾಲದಲ್ಲಿಯ ನಕ್ಷತ್ರಗಳ ಸ್ಥಾನಗಳನ್ನು ಅನುಕರಿಸಿ ಅದರಂತೆಯೇ ಪ್ರದರ್ಶಿಸಬಲ್ಲ ಗ್ರಹವೀಕ್ಷಣಾಲಯವೊಂದಕ್ಕೆ ಹಕ್ಕಿಗಳನ್ನು ಕೊಂಡೊಯ್ದರು. ವಸಂತದ ರಾತ್ರಿಗಳನ್ನು ಪ್ರದರ್ಶಿಸಿದಾಗ ವಾರ್ಬ್ಲರ್ ಹಕ್ಕಿಗಳು ಎಂದಿನಂತೆ ಈಶಾನ್ಯ ದಿಕ್ಕಿಗೆ ಹಾರಿದವು. ಶಿಶಿರದ ರಾತ್ರಿಗಳನ್ನು ಕಂಡಾಗ ಅವು ವಲಸೆ ಹೋಗುವಾಗ ಹಾರುವಂತೆ ವಿರುದ್ಧ ದಿಕ್ಕಿಗೆ ಹಾರಿದವು. ಹಕ್ಕಿಗಳು ಹೀಗೆ ವಿಸ್ಮಯವುಂಟುಮಾಡುವಂತೆ ಗ್ರಹ ನಕ್ಷತ್ರಗಳ ಸ್ಥಾನಗಳನ್ನು ಕೂಡ ದಿಕ್ಸೂಚಿಯಾಗಿ ಬಳಸುತ್ತವೆಂಬುದು ಸ್ಥಿರವಾಯಿತು. ಸ್ಟೀಫನ್ ಎಮ್ಲೆನ್ ಎಂಬಾತ ಈ ಶಕ್ತಿ ಹುಟ್ಟಿನಿಂದ ಬಂದದ್ದಲ್ಲವೆಂದೂ ಕಾಲಾನುಕ್ರಮದಲ್ಲಿ ಕಲಿಕೆಯಿಂದ ಮೈಗೂಡಿದ್ದೆಂದೂ ನಿರೂಪಿಸಿವೆ.

ಈ ರೀತಿಯ ಬಗೆ ಬಗೆಯ ಅನ್ವೇಷಣೆಗಳು ಹಕ್ಕಿಗಳ ಈ ಯಾನದ ರಹಸ್ಯವನ್ನು ಬಿಡಿಸುವುದಕ್ಕಿಂತಲೂ ಹೆಚ್ಚು ಮಾಡಿದವೆಂದೇ ಹೇಳಬೇಕು. ಹೆಚ್ಚು ಹೆಚ್ಚಿನ ಪ್ರಯೋಗಗಳಿಂದ ಹಕ್ಕಿಗಳು ಸೂರ್ಯ ಮತ್ತು ನಕ್ಷತ್ರಗಳನ್ನು ಕೇವಲ ದಿಕ್ಕುಗಳನ್ನು ಗುರುತಿಸುವುದಕ್ಕೆ ಮಾತ್ರ ಬಳಸುತ್ತವೆಂದು ನಿರ್ವಿವಾದವಾಗಿ ಸಿದ್ಧವಾಯಿತು. ಆದರೆ ಈ ಬಗೆಯ ಯಾನಗಳಲ್ಲಿ ದಿಕ್ಕನ್ನು ಗುರುತಿಸುವುದು

ರಂಜಾನ್ ಹಬ್ಬ

ಹಿಜರೀ ಸಂವತ್ಸರದ ಒಂಭತ್ತನೆಯ ತಿಂಗಳಾದ ರಂಜಾನ್ ತಿಂಗಳು ಮುಗಿದ ಮೂರನೆಯ ದಿವಸ ಬರುವ ಹಬ್ಬ. ಆ ತಿಂಗಳಿನ ಹೆಸರಿನಲ್ಲಿಯೇ ಅಂದರೆ ರಂಜಾನ್ ಹಬ್ಬ ಎಂದು ಪ್ರಸಿದ್ಧಿಯಾಗಿದೆ. ಈ ಹಬ್ಬವನ್ನು 'ಈದುಲ್-ಫಿತರ್' ಅಥವಾ 'ಉಪವಾಸವನ್ನು ಕೊನೆಗಾಣಿಸುವ ಹಬ್ಬ'ವೆಂದೂ ಕರೆಯುತ್ತಾರೆ. ಈ ಹಬ್ಬ ಇಸ್ಲಾಂ ಪೂರ್ವದ್ದಲ್ಲ. ಇಸ್ಲಾಂ ಮತ ಸ್ಥಾಪಕ ಮೊಹಮ್ಮದ್ ಪೈಗಂಬರ್ ಅವರು ಆರಂಭಿಸಿದ್ದು. ಹಿಂದೂಗಳ ದೀಪಾವಳಿ ಹಬ್ಬದಂತೆ ಮುಸ್ಲಿಮರಿಗೆ ರಂಜಾನ್ ಹಬ್ಬ ಸಂತೋಷದ ದೊಡ್ಡ ಹಬ್ಬ. ಎಲ್ಲಾ ಪಂಗಡದ ಮುಸ್ಲಿಮರು ಈ ಹಬ್ಬ ಆಚರಿಸುತ್ತಾರೆ.

ಇಸ್ಲಾಂ ಧರ್ಮದ ಐದು ಮೂಲಭೂತ ತತ್ವಗಳಲ್ಲಿ ರಂಜಾನ್ ತಿಂಗಳ 'ರೋಜಾ' ಅಥವಾ 'ಉಪವಾಸ ವ್ರತ'ವೂ ಒಂದು. ಮುಸ್ಲಿಮರು ಈ ಪವಿತ್ರ ಮಯವಾದ ರಂಜಾನ್ ತಿಂಗಳ ಮೂವತ್ತು ದಿವಸಗಳೂ ಉಪವಾಸ ಆಚರಿಸುತ್ತಾರೆ. ಪ್ರಾತಃಕಾಲದಿಂದ ಸೂರ್ಯಾಸ್ತದವರೆಗೆ ನಿಯತ್ತಿನೊಡನೆ ಅಂದರೆ ಮಂತ್ರದೊಡನೆ ಆಹಾರ ಪಾನೀಯಗಳನ್ನು ತ್ಯಜಿಸಿ ಕಾಮವಾಸನೆ ಇತ್ಯಾದಿಗಳಿಂದ ಮುಕ್ತರಾಗಿರುವುದಕ್ಕೆ 'ರೋಜಾ' ಎನ್ನುವರು. 'ರೋಜಾ' ಅಥವಾ ಈ 'ಉಪವಾಸ ವ್ರತ' ಸೂರ್ಯೋದಯಕ್ಕಿಂತ ಮುಂಚಿತ ಪ್ರಾರಂಭವಾಗಿ ಸೂರ್ಯಾಸ್ತದವರೆಗೆ ಅಂದರೆ ಸುಮಾರು ೧೪ ಗಂಟೆಗಳ ಕಾಲ ನಡೆಯುತ್ತದೆ. ಈ ಅವಧಿಯಲ್ಲಿ ಆಹಾರ ಏಕೆ ಒಂದು ನೀರಿನ ತೊಟ್ಟು ಸಹ ಹೊಟ್ಟೆಯೊಳಗೆ ಸೇರಬಾರದು. ಜೊಲ್ಲು ನುಂಗುವುದು ಸಹ ಧರ್ಮಬಾಹಿರವೆಂದು ಕೆಲವರು ಭಾವಿಸುವರು. ಅಂದರೆ ಇದು ಒಂದು ರೀತಿಯ ತಪಸ್ಸಿಗೆ ಹೋಲಿಸಬಹುದಲ್ಲವೆ? ರೋಗಿಗಳು, ಕುರುಡರು, ಇತರ ಅಂಗವಿಕಲರು, ಗುಲಾಮರು, ಯಾತ್ರಿಕರು, ಚಿಕ್ಕಮಕ್ಕಳು, ಗರ್ಭಿಣಿ ಅಥವಾ ಬಾಣಂತಿ ಸ್ತ್ರೀಯರು ಈ ಉಪವಾಸ ವ್ರತವನ್ನಾಚರಿಸುವುದು ಅನಿವಾರ್ಯವಲ್ಲ. ಆದರೆ ರೋಗಿಗಳು ತಮ್ಮ ರೋಗ ವಾಸಿಯಾದ ಮೇಲೆ ಮತ್ತು ಯಾತ್ರಿಕರು ತಮ್ಮ ಯಾತ್ರೆ ಮುಗಿದ ತರುವಾಯ ಒಂದು ತಿಂಗಳು ಈ ಉಪವಾಸ ವ್ರತವನ್ನು ಆಚರಿಸಬೇಕು. ಈ ವ್ರತವನ್ನು ನಾವು ಹಿಂದೂಗಳ ಏಕಾದಶೀ ವ್ರತಕ್ಕೆ ಹೋಲಿಸಬಹುದು. ಆದರೂ ಧಾರ್ಮಿಕ ರೀತಿಯಿಂದ ಆಚರಿಸುವ ರೋಜಾ ಸಾಧಾರಣ ವ್ರತ, ಉಪವಾಸಗಳಿಂದ ಹೆಚ್ಚು ಕಠಿಣವಾಗಿರುತ್ತದೆ. ಉಗುಳು ನುಂಗುವುದು, ಬೀಡಿ, ಸಿಗರೇಟು ಸೇದುವುದು, ಕಳ್ಳತನ ಮಾಡುವುದು, ಸುಳ್ಳು ಹೇಳುವುದು,

ಬಯ್ಯುವುದು ಇತ್ಯಾದಿ ಕೆಲಸಗಳಿಂದ ಈ ಉಪವಾಸ ವ್ರತ ಭಂಗವಾಗುತ್ತದೆ.

ನಿಜವಾದ ರೋಜಾ ಬಗ್ಗೆ ಮೊಹಮ್ಮದ್ ಪೈಗಂಬರ್ ಅವರು ಒಂದೆಡೆ ಹೀಗೆ ಹೇಳಿದ್ದಾರೆ. 'ರೋಜಾ' ಅಥವಾ ಉಪವಾಸ ವ್ರತ ಆಚರಿಸುವವರು ಅಸತ್ಯವನ್ನು ತ್ಯಜಿಸದಿದ್ದರೆ ಆಹಾರ ತೆಗೆದುಕೊಳ್ಳುವುದನ್ನು ನಿಲ್ಲಿಸಿದರೂ ದೇವರ ದೃಷ್ಟಿಯಲ್ಲಿ ಅದಕ್ಕೆ ಏನೂ ಬೆಲೆಯಿಲ್ಲ. ಈ ರೀತಿ ಉಪವಾಸ ವ್ರತ ಆಚರಿಸಿದವರಿಗೆ ಹಸಿವು ಮತ್ತು ಬಾಯಾರಿಕೆ ಬಿಟ್ಟು ಇನ್ನೇನೂ ಸಿಗುವುದಿಲ್ಲ. ಮಧ್ಯರಾತ್ರಿಯಲ್ಲಿ ಎದ್ದು ನಮಾಜ್ ಅಥವಾ ದೇವರ ಪ್ರಾರ್ಥನೆ ಮಾಡುವರಲ್ಲಿ ಅನೇಕರಿಗೆ ನಿದ್ದೆಗೆಟ್ಟದ್ದಷ್ಟೇ ಹೊರತು ಇನ್ನಾವ ಲಾಭವೂ ಆಗುವುದಿಲ್ಲ. ಶ್ರದ್ಧಾಳುಗಳಾದ ಅನೇಕ ಮುಸ್ಲಿಮರು ದಿನವಿಡೀ ಮಸೀದಿಯಲ್ಲಿ ಇದ್ದು ಕೊಂಡೇ ಈ ವ್ರತವನ್ನು ಆಚರಿಸುತ್ತಾರೆ ಹಾಗೂ ಅವರ ಪವಿತ್ರ ಗ್ರಂಥವಾದ 'ಖುರಾನ್'ನ ಪಾರಾಯಣದಲ್ಲೂ ದೇವರ ಪ್ರಾರ್ಥನೆಯಲ್ಲೂ ಮಗ್ನರಾಗಿರು ತ್ತಾರೆ. ಇನ್ನೊಂದು ಮಹತ್ವದ ಸಂಗತಿ ಎಂದರೆ ಈ ರಂಜಾನ್ ತಿಂಗಳೇ ಮುಸ್ಲಿಮರ ಪವಿತ್ರ ಗ್ರಂಥ 'ಖುರಾನ್' ಮೊದಲುಗೊಂಡದ್ದು. ಈ ತಿಂಗಳ ೨೬ನೆಯ ದಿವಸದ ಪವಿತ್ರ ರಾತ್ರಿಯೇ ಈ ಗ್ರಂಥ ಪರಿಪೂರ್ಣವಾದದ್ದು. ಆದುದರಿಂದ ಈ ರಾತ್ರಿಯನ್ನು ಮುಸ್ಲಿಮರು 'ಲೈಲತ್-ಉಲ್-ಖದರ್' ಅಥವಾ 'ಶಕ್ತಿಯ ರಾತ್ರಿ' ಎಂದು ಕರೆಯುತ್ತಾರೆ. ಹಿಂದೂಗಳ 'ಶಿವರಾತ್ರಿ' ಯನ್ನು ಈ ರಾತ್ರಿಗೆ ಹೋಲಿಸಬಹುದು. ಹಿಂದೂಗಳು ಶಿವರಾತ್ರಿಯ ಇಡೀ ರಾತ್ರಿ ಜಾಗರಣೆ ಹಾಗೂ ಶಿವನ ಪೂಜೆಯಲ್ಲಿ ಕಳೆಯುವಂತೆ ಮುಸ್ಲಿಮರು ಆ ಇಡೀ ರಾತ್ರಿ ಜಾಗರಣೆ ಹಾಗೂ ದೇವರ ಧ್ಯಾನದಲ್ಲಿ ಕಳೆಯುತ್ತಾರೆ.

ರಂಜಾನ್ ತಿಂಗಳಲ್ಲಿ ಸ್ವರ್ಗದ ಬಾಗಿಲು ತೆರೆದಿರುತ್ತದೆ ಎಂದೂ ನರಕದ ಬಾಗಿಲು ಮುಚ್ಚಿರುತ್ತದೆ ಎಂದೂ ಸೈತಾನಿನ (ಅಂದರೆ ದೆವ್ವದ) ಕಾಲಿಗೆ ಜೇಡಿ ಗಳು ಬೀಳುತ್ತದೆ ಎಂದೂ ಮುಸ್ಲಿಮರ ನಂಬಿಕೆ. ಈ ತಿಂಗಳಲ್ಲಿ ಉಪವಾಸವನ್ನು ಆಚರಿಸಿದ ಎಲ್ಲರ ತಪ್ಪುಗಳನ್ನು ದೇವರು ಕ್ಷಮಿಸುತ್ತಾನೆ ಎಂದು ಮುಸ್ಲಿಮರು ನಂಬುತ್ತಾರೆ. ಈ ತಿಂಗಳಲ್ಲಿ ಮುಸ್ಲಿಮರು 'ತರಾವಿ ನಮಾಜ್' ಅನ್ನು ಮಾಡು ತ್ತಾರೆ. ಇದು ಒಂದು ವಿಶಿಷ್ಟವಾದ ಪ್ರಾರ್ಥನೆ. ಇದು ಪ್ರತಿದಿನ ಸುಮಾರು ರಾತ್ರಿ ಎಂಟು ಗಂಟೆಯಿಂದ ಹತ್ತು ಗಂಟೆಯವರೆಗೆ ಸತತವಾಗಿ ನಡೆಯುತ್ತದೆ.

ರಂಜಾನಿನ ಉಪವಾಸ ೩೦ ದಿವಸಗಳ ನಂತರ ಮುಗಿಯುತ್ತದೆ. ಇಸ್ಲಾಂನ ಕಾಲಗಣನೆ ಚಂದ್ರದರ್ಶನವನ್ನು ಅವಲಂಬಿಸಿದೆ. ಅದರ ಪ್ರಕಾರ ಚಂದ್ರದರ್ಶನ ದೊಂದಿಗೆ ರಂಜಾನಿನ ಉಪವಾಸ ಪ್ರಾರಂಭವಾಗುತ್ತದೆ ಮತ್ತು ಚಂದ್ರದರ್ಶನ

ವಾದ ಮೇಲೆಯೇ ಮುಗಿಯುತ್ತದೆ. ಈ ಕಾರಣದಿಂದಾಗಿ ಕೆಲವು ವೇಳೆ ಹಬ್ಬದ ದಿವಸ ೨೪ ಗಂಟೆ ಮುಂದಕ್ಕೆ ಹೋಗುತ್ತದೆ. ಬಾಲಚಂದ್ರವನ್ನು ಕಂಡ ೩ ದಿವಸ ಈ ಹಬ್ಬವನ್ನು ಆಚರಿಸುತ್ತಾರೆ. ಆ ದಿವಸ ಬೆಳಿಗ್ಗೆ ಸ್ನಾನವಾದ ಕೂಡಲೇ 'ಸದಖಾ' ಅಥವಾ 'ದಾನ' ಕೊಡುತ್ತಾರೆ. ತಮ್ಮ ಸಂಪಾದನೆಯಲ್ಲಿ ನಲವತ್ತನೆಯ ಒಂದಂಶವನ್ನು ಧಾನ್ಯ, ಬಟ್ಟೆ ಅಥವಾ ಹಣದ ರೂಪದಲ್ಲಿ ಬಡ ಬಗ್ಗರಿಗೂ ಫಕೀರರಿಗೂ ದಾನ ಕೊಡಬೇಕೆಂಬ ನಿಯಮವಿದೆ. ದಾನ ಧರ್ಮ ಮಾಡಿದ ಮೇಲೆ ಗಂಡಸರು ಮತ್ತು ಮಕ್ಕಳು ನಗರದ ಹೊರಗಿರುವ 'ಈದ್‌ಗಾಹ್' ಅಂದರೆ "ಪ್ರಾರ್ಥನಾ ಸ್ಥಳ"ಕ್ಕೆ ನಮಾಜು (ಪ್ರಾರ್ಥನೆ) ಮಾಡುವುದಕ್ಕಾಗಿ ಮಡಿಬಟ್ಟೆ ಧರಿಸಿ ಹೋಗುತ್ತಾರೆ. ಬೆಳಿಗ್ಗೆ ಸುಮಾರು ಹತ್ತು ಗಂಟೆಯ ಸಮಯಕ್ಕೆ ಸಾಮೂಹಿಕ ಪ್ರಾರ್ಥನೆ ನಡೆಯುತ್ತದೆ. ಈ ಪ್ರಾರ್ಥನೆ ನಿಜವಾಗಿಯೂ ದರ್ಶನೀಯವಾಗಿರುತ್ತದೆ. ಇಮಾಮ್ ಅಥವಾ ಖಾಜೀ ಅವರ ಹಿಂದೆ ಸಾಲು ಸಾಲಾಗಿ ನಿಂತು 'ಅಲ್ಲಾಹು ಅಗ್ಬರ್' ಅಂದರೆ "ದೇವರು ದೊಡ್ಡವನು', 'ದೇವರು ದೊಡ್ಡವನು' ಎಂಬ ಘೋಷಣೆ ಮಾಡುತ್ತಾ ಸಂವ್ಯೂಹಕವಾಗಿ ಎಲ್ಲರೂ ತಲೆಬಾಗುವ, ದೇವರಿಗೆ ಶರಣು ಹೋಗುವ ಆ ಅಭೂತಪೂರ್ವ ದೃಶ್ಯ ರೋಮಾಂಚನಕಾರಿಯಾಗಿಯೂ ನಯನಮನೋಹರ ವಾಗಿಯೂ ಇರುತ್ತದೆ. ನಮಾಜಿನ ತರುವಾಯ 'ಇಮಾಮ್' ಅಥವಾ ಖಾಜೀ ಅವರು ಅರಬ್ಬಿ ಹಾಗೂ ಉರ್ದು ಭಾಷೆಗಳಲ್ಲಿ ಈ ಹಬ್ಬದ ಮಹತ್ವದ ಬಗ್ಗೆ ಉಪನ್ಯಾಸ ಮಾಡಿ ನೆರೆದ ಜನರಿಗೆ ಸದ್ಬೋಧನೆ ಮಾಡುತ್ತಾರೆ. ಇದಾದ ನಂತರ ಅಲ್ಲಿ ಸೇರಿದ ಜನರು ಒಬ್ಬರನ್ನೊಬ್ಬರು ಆಲಿಂಗನ ಮಾಡಿಕೊಳ್ಳುವುದು, ಕೈಕುಲುಕುವುದು, 'ಈದ್ ಮುಬಾರಕ್' ಅಂದರೆ 'ಈ ಹಬ್ಬ ನಿಮಗೆ ಶುಭ ವನ್ನುಂಟು ಮಾಡಲಿ' ಎನ್ನುವುದು ಗಮನಾರ್ಹ. ಈ ಸಂದರ್ಭದಲ್ಲಿ ಬಡವ-ಬಲ್ಲಿದ, ಶತ್ರು-ಮಿತ್ರ, ಪರಿಚಿತ ಅಪರಿಚಿತ ಎಂಬ ಯಾವ ಭೇದಭಾವವೂ ಯಾರಲ್ಲೂ ಇರುವುದಿಲ್ಲ. ನಾವೆಲ್ಲರೂ ಸಹೋದರರು. ಇಡೀ ಸಮಾಜವು ಒಂದೇ, ಅವಿಭಾಜ್ಯ ಎಂಬ ಭಾವನೆ ಎಲ್ಲರ ಮನಸ್ಸಿನಲ್ಲೂ ಉಂಟಾಗುವುದು.

ಈ ಹಬ್ಬದ ಪ್ರಾರ್ಥನೆ ಮುಗಿದ ನಂತರ ಈದ್‌ಗಾಹ್‌ದಿಂದ ಮನೆಗಳಿಗೆ ಮರಳಿದಾಗ ಅವರ ಸಹೋದರಿಯರು ಸುಣ್ಣ ಮಿಶ್ರಿತ ಅರಿಶಿನದ ನೀರಿನ ಪಾತ್ರೆ ಗಳನ್ನು ಕೈಯಲ್ಲಿ ಹಿಡಿದು ಬಾಗಿಲ ಬಳಿಯೇ ಕಾದು ನಿಂತಿರುತ್ತಾರೆ. ತುಂಬಾ ಉತ್ಸಾಹದಿಂದಿರುವ ಇವರಿಗೆ ತಮ್ಮ ಅಣ್ಣತಮ್ಮಂದಿರಿಗಾದ ದೃಷ್ಟಿಯನ್ನು ತೆಗೆಯಲು ಏನು ಗುಲ್ಲು ಅವರದು. ದೃಷ್ಟಿ ತೆಗೆಯುವ ನೆಪದಲ್ಲಿ ಅವರು ಹಬ್ಬದ

'ಈದೀ' ಅಂದರೆ 'ಇನಾಂ' ವಸೂಲು ಮಾಡದೆ ಬಿಡುವುದೇ ಇಲ್ಲ. ಪ್ರಾರ್ಥನೆಯಿಂದ ಹಿಂತಿರುಗಿದ ನಂತರ ಕಿರಿಯರು ಸಾಮಾನ್ಯವಾಗಿ ತಮ್ಮ ಅಜ್ಜ, ಅಜ್ಜಿ, ತಂದೆ, ತಾಯಿ, ಅಣ್ಣ ಅಕ್ಕಂದಿರು ಮೊದಲಾದ ಹಿರಿಯರ ಬಳಿ ಹೋಗಿ ಅವರ ಪಾದಗಳನ್ನು ಮುಟ್ಟಿ ನಮಸ್ಕರಿಸುವುದು ಮುಸ್ಲಿಮರಲ್ಲಿ ಒಂದು ಸಂಪ್ರದಾಯ. ಆಗ ಹಿರಿಯರು ಅವರನ್ನು ಯಥೇಚ್ಛವಾಗಿ ಹರಸುತ್ತಾರೆ. ಈ ಹಬ್ಬದಲ್ಲಿ ಎಲ್ಲರಿಗೂ ಎಲ್ಲಾ ಮನೆಗಳಲ್ಲೂ ಆಮಂತ್ರಣ. ಸ್ವಲ್ಪವಾದರೂ ತಿನ್ನಲೇಬೇಕು. …ಕ್ಕೆ ಬರುವ ಆನಂದವನ್ನು ಎಲ್ಲರೂ ಹಂಚಿಕೊಳ್ಳಬೇಕು. ಹಬ್ಬದ ದಿವಸ ಆನಂದ ಪಡೆಯದವನು ಅಭಾಗ್ಯನೆಂದು ಹೇಳಿಕೊಳ್ಳುವುದು ಮುಸ್ಲಿಮರ ಒಂದು ವಾಡಿಕೆ.

ಒಟ್ಟಿನಲ್ಲಿ ದಾನ, ಧರ್ಮ, ಸಾಮೂಹಿಕ ಪ್ರಾರ್ಥನೆ. ಮೃಷ್ಟಾನ್ನ ಭೋಜನ-ಇವೇ ಈ ಹಬ್ಬದ ಮುಖ್ಯ ಕಾರ್ಯಕ್ರಮಗಳು.

ಕೆ. ಮೊಹಮ್ಮದ್‌ಶರೀಫ್



ದೊಡ್ಡಸ್ತಿಕೆಯ ದಾರಿಯನ್ನಾರಿಸಿಕೋ ಇಲ್ಲವೇ ಒಳ್ಳೆಯ ದಾರಿಯನ್ನಾರಿಸಿಕೋ.

—ಎಡ್ವಿನ್ ಅರ್ನಾಲ್ಡ್

ಜೀವನ ಜೀವಿಸುವಂಥದು ಎಂದು ನಂಬಿದಾಗ ಆ ನಂಬಿಕೆ ನಿಜವಾಗುತ್ತದೆ.

—ವಿಲಿಯಂ ಜೇಮ್ಸ್

ಸಾಕ್ಷರತೆಯೆಡೆಗೆ ಬ್ರೇಜಿಲಿನ ಉತ್ಕ್ರಮಣ

ಅನಕ್ಷರತೆಯ ಮೇಲೆ ಇಂಥ ಬೃಹತ್ ಆಕ್ರಮಣ ಯಾವ ದೇಶದಲ್ಲೂ ನಡೆದಿಲ್ಲ ಮತ್ತು ಗಮನಾರ್ಹ ಫಲಿತಾಂಶಗಳನ್ನು ಇಷ್ಟರ ಮಟ್ಟಿಗೆ ಸಾಧಿಸಿದ ದೇಶವೂ ಬೇರೊಂದಿಲ್ಲ.

ಕತ್ತಲು ಕವಿದು ಬರುತ್ತಿದೆ ಸೋಯಾಬೀನ್ಸಿನ ಗದ್ದೆಯ ಪಕ್ಕದ ಒಂಟಿ ಕೋಣೆಯ ಈ ಶಾಲೆಗೆ ನಾಲ್ದೆಸೆಗಳಿಂದಲೂ ಜನ ಗುಂಪು ಗುಂಪಾಗಿ ಬಂದು ಸೇರುತ್ತಿದ್ದಾರೆ. ಸಂಜೆಯ ಮಳೆಯಲ್ಲಿ ನೆನೆದ ನೆಲ ಕೆಸರು ಕೆಸರಾಗಿದೆ. ಅವರ ಕಾಲುಗಳು ಮಣಿಗಂಟಿನವರೆಗೂ ಕೆಸರಲ್ಲಿ ಮುಳುಗುತ್ತಿವೆ. ಹಗಲೆಲ್ಲ ದುಡಿದು ಬಳಲಿದ ಕಾಲುಗಳು! ಕೂದಲು ಅರ್ಧ ನರೆತವರು, ಹಣ್ಣು ಮುದುಕಿಯರು, ಹೊಲದಲ್ಲಿ ಉಳುವ, ಕೊಯ್ವ ಜನರು, ಹದಿ ಹರೆಯದ, ಹರಿದ ಚಿಂದಿ ಬಟ್ಟೆ ತೊಟ್ಟ ದಿನಗೂಲಿಯ ಹುಡುಗಿಯರು, ಎಲ್ಲ ಈ ಗುಂಪುಗಳಲ್ಲಿದ್ದಾರೆ. ಕಾಲೆಳೆದೆಳೆದು ಮುಂದಡಿಯಿಟ್ಟು ಶಾಲೆಯೊಳಗೆ ನೆರೆಯುತ್ತಿದ್ದಾರೆ. ಸುಪುಷ್ಟ ದೇಹದ ಶಿಕ್ಷಕಿಯೊಬ್ಬಳು ಚಾಕಿನಿಂದ (ಸೀಮೆಸುಣ್ಣ) ಕರಿ ಹಲಗೆಯ ಮೇಲೆ ಬರೆಯುತ್ತಿದ್ದಾಳೆ...

ದಿನವೆಲ್ಲ ದುಡಿದ ಜನ ತಗ್ಗಾದ ಬೆಂಚುಗಳಲ್ಲಿ ಕುಳಿತು ಆಕೆ ಬರೆದುದನ್ನು ದೊಡ್ಡ ಸ್ವರದಲ್ಲಿ ಉರುಹಾಕತೊಡಗುತ್ತಾರೆ. ಆರು ಕಿಲೋಮೀಟರ್ ದೂರದಿಂದ ನಡೆದು ಬರುವ ಈ ಶಿಕ್ಷಕಿ ವಾರದ ಐದು ಸಂಜೆ, ಐದು ತಿಂಗಳವರೆಗೆ ಕ್ಲಾಸು ನಡೆಸುತ್ತಿರುತ್ತಾಳೆ. ಪ್ರತಿದಿನ ಎರಡೂವರೆ ಗಂಟೆ ಕಾಲ ಈ ಅಭ್ಯಾಸ. ಐದು ತಿಂಗಳಲ್ಲಿ ಈ ಶಿಕ್ಷಣ ಮುಗಿದಾಗ ಟೆಲಿಫೋನಿನ ನಿರ್ದೇಶಕ ಪುಸ್ತಕ ಓದುವುದು, ಬಂಧುಗಳಿಗೆ ಪತ್ರ ಬರೆಯುವುದು, ವರ್ತಮಾನ ಪತ್ರಿಕೆಗಳಲ್ಲಿ ಹಿಂದಿನ ರಾತ್ರಿ ನಡೆದ ಕಾಲ್ಚೆಂಡಾಟದ ಸುದ್ದಿ ಓದುವುದು, ಇತ್ಯಾದಿಗಳಲ್ಲಿ ಸಾಮರ್ಥ್ಯ ಪಡೆದಿರುತ್ತಾರೆ.

'ಪಾರಾನಾ'ದ ಇದೇ ದೃಶ್ಯಾವಳಿ ಬ್ರೇಜಿಲ್‌ನ ಉದ್ದಗಲಕ್ಕೂ ಎಲ್ಲ ಜನಸಮುದಾಯದಲ್ಲೂ ಪ್ರತಿ ರಾತ್ರಿ ಕಾಣಸಿಗುತ್ತದೆ. ಬರೀ ಎಂಟು ವರ್ಷಗಳಿಂದ ನಡೆಯುತ್ತಿರುವ ಈ ಕಾರ್ಯಕ್ರಮದಿಂದ ಸುಮಾರು ಹನ್ನೊಂದು ಮಿಲಿಯ ಜನ ಓದಲು ಬರೆಯಲು ಕಲಿತುಕೊಂಡಿದ್ದಾರೆ. ಈ ಯೋಜನೆಯ ಹೆಸರು MOBRAL ಎಂದರೆ "ಮೂಮೆಂಟೋ ಬ್ರೆಜಿಲ್ ರೋಡಿಅಲ್ಫಾಬೆಟಿಜಾಕೇ"—ಇದನ್ನು ೧೯೭೦ರಲ್ಲಿ ಪ್ರಯೋಗಿಸಲಾಯಿತು. ಆ ಕಾಲಕ್ಕೆ ಹದಿನೈದು ವರ್ಷ ವಯಸ್ಸಿಗೆ ಮೇಲ್ಪಟ್ಟ ನೂರುಜನರಲ್ಲಿ ಮೂವತ್ತನಾಲ್ಕು ಜನರು ಅನಕ್ಷ

ರಷ್ಟಿರಾಗಿದ್ದ ಪರಿಸ್ಥಿತಿ. ಇಂದು ಎಂದರೆ ಎಂಟು ವರ್ಷಗಳ ಬಳಿಕ ಅನಕ್ಷರತೆಯು ೧೬.೪ ಪ್ರತಿಶತಕ್ಕೆ ಇಳಿದಿದೆ. ಇದರ ಮುಖ್ಯ ಪಾತ್ರಧಾರಿ "ಮೊಬ್ರಾಲ"ನ್ನು ಅಭಿನಂದಿಸಬೇಕು.

ಈ ಯೋಜನೆಯ ಮುಖ್ಯ ಕಾರ್ಯಕರ್ತ "ಆರ್ಲಿಂಡೋ ಲೋಪ್ಸ್ ಕೋರಿಯಾ" ಎಂಬ ನಲವತ್ತೊಂದು ವರ್ಷ ವಯಸ್ಸಿನ ಅರ್ಥಶಾಸ್ತ್ರಜ್ಞ ಇಂಜಿನೀಯರು ಆತ್ಮವಿಶ್ವಾಸದಿಂದ ಪ್ರತಿಪಾದಿಸುತ್ತಾರೆ,—ಏನೆಂದರೆ "ಈ ಅನಕ್ಷರಸ್ಥರ ಪ್ರಮಾಣವನ್ನು ಮುಂದಿನ ಎರಡೇ ವರ್ಷಗಳಲ್ಲಿ ಶತಾಂಶ ಹತ್ತಕ್ಕೂ ಕಡಿಮೆಗೆ ಇಳಿಸುತ್ತೇನೆ".

ಬ್ರೇಜಿಲ್‌ನ ಸಂಯುಕ್ತ ವಿದ್ಯಾಭ್ಯಾಸ ಸಮಸ್ಯೆಗಳಿಗೆ ಸರಿಯಾದ ಪರಿಪೂರ್ಣ ಉತ್ತರನೇ ಮೊಬ್ರಾಲ್ ಎಂದು ಯಾರೂ ಸುಳ್ಳು ನಟನೆ ಮಾಡುತ್ತಿಲ್ಲ. ಅದು ಈ ಸಮಸ್ಯೆಯನ್ನು ಬಿಡಿಸಲು ಪೂರಕ ಹಾಗೂ ಸಾಧಕವಾದ, ಅತ್ಯಂತ ಶ್ರೇಷ್ಠ ಕಲ್ಪನೆಯ ಶಿಕ್ಷಾಪ್ರಣಾಲಿಯಾಗಿದೆ. ಈ ಮೊಬ್ರಾಲ್ ಪೂರಕ ತರಗತಿಗಳು ಶಾಲಾ ಕಟ್ಟಡಗಳಲ್ಲಿ ಮಾತ್ರವಲ್ಲ, ಕಾರ್ಖಾನೆಗಳಲ್ಲಿ, ಸಂಘಸಂಸ್ಥೆಗಳ ಸಭಾಂಗಣದಲ್ಲಿ ಬ್ಯೂಟಿ ಪಾರ್ಲರುಗಳಲ್ಲಿ (ಶರೀರ ಸೌಂದರ್ಯವರ್ಧಕ ಧಾಮಗಳಲ್ಲಿ) ಕೊನೆಗೆ ಚರ್ಚುಗಳಲ್ಲಿ ಕೂಡ ನಡೆಸಲಾಗುತ್ತಿದೆ.

ನಕ್ಷತ್ರಗಳು ಮಿನುಗುಟ್ಟುವ ಆಕಾಶದ ಕೆಳಗೆ, ವಿಶಾಲ ಮೈದಾನಗಳಲ್ಲಿ ಗಾಳಿಗೆ ಹೊಯ್ದಾಡುತ್ತಿರುವ ಸೀಮೆಎಣ್ಣೆಯ ದೀಪಗಳನ್ನು ನಂದಿಹೋಗದಂತೆ ಕೈಯಿಂದ ಮರೆಮಾಡಿಕೊಂಡು, ಸಾವಿರಾರು ಜನ ಓದುತ್ತಿದ್ದಾರೆ! ಪಾದಚಾರಿಗಳಾಗಿ, ಕೆಲವರು ಎತ್ತಿನಗಾಡಿಗಳಲ್ಲಿ, ಇನ್ನು ಕೆಲವರು ಮರದ ದಿಮ್ಮಿಗಳನ್ನು ಕೊರೆದು ತಯಾರಿಸಿದ ಚಿಕ್ಕದೋಣಿಗಳಲ್ಲಿ, ಕಿಕ್ಕಿರಿದ ಸಾವೋಪ್ರೋಲೋ ಅಡ್ಡರಸ್ತೆಗಳಿಂದಲೂ ಎಲ್ಲೆಂದರಲ್ಲಿಂದ ಬರುತ್ತಿದ್ದಾರೆ.

ಇತ್ತೀಚೆಗಂತೂ ಈ ಧರ್ಮಯುದ್ಧವು ಅಂಚೆ ಇಲಾಖೆಯ ಸೇವೆ ಕೂಡಾ ಇಲ್ಲದಂಥ ಹಳ್ಳಿಗಳಿಗೂ ಪಸರಿಸಿದೆ. 'ಎಲ್ ಸಾಲ್ವಡೋರ್' ನಲ್ಲಿ ಕುಷ್ಟರೋಗಿಗಳಿಗೆ, ಅಂಗವಿಕಲರಿಗೆ ತರಗತಿಗಳು ನಡೆಯುತ್ತಿವೆ. ಸಾವೋಪ್ರೋಲೋ ದಲ್ಲಿ ಕುರುಡರಿಗೆ, ಮತ್ತು ವಿದೇಶಿಯರಿಗಾಗಿ ಬರಿಯ ಪೋರ್ಚುಗಲ್ ಭಾಷೆ ಮಾತ್ರ ಕಲಿಸುವ ಶಾಲೆಗಳಾಗಿವೆ.

ವಿಶ್ವವಿದ್ಯಾಲಯಗಳ ಆಡಳಿತ ಮಂಡಲಿಯ ಸದಸ್ಯರೂ, ವಿದ್ಯಾಮಂತ್ರಿಗಳಾಗಿ ಸೇವೆ ಸಲ್ಲಿಸಿದವರೂ ಆದ "ತಾರ್ಸೋದತಾ" ರವರ ಕಲ್ಪನೆಗೆ ವಾಸ್ತವಿಕ ರೂಪ ಕೊಟ್ಟವರು—ಆಗ ವಿದ್ಯಾಲಯದ ಕುಲಪತಿಗಳಾಗಿದ್ದ ಗೌರವಾನ್ವಿತ

ವ್ಯಕ್ತಿ ಮೊರಿಯೋ ಹೆನ್ರಿಕ್ ಸ್ವೆಮುನ್‌ಸೇನ್ ಎಂಬುವರು. ಇವರೇ ಈ ಮೊಬ್ರಾಲ್ ಯೋಜನೆಯ ಪ್ರಾರಂಭದ ಮುಂದಾಳಾಗಿ ಕೆಲಸ ಮಾಡಿದವರು.

'ಭಾಗಶಃ ಸ್ವಯಂ ಶಾಸನವುಳ್ಳ ಆಡಳಿತ ನಿಯೋಗವಾಗಿ ಗರ್ಭತಾಳಿದ ಈ ಮೊಬ್ರಾಲ್-ರಾಷ್ಟ್ರೀಯ ಕ್ರೀಡಾಕೂಟಗಳಿಂದ, ಲಾಟರಿಗಳಿಂದ ಮತ್ತು ಪಟ್ಟಣಗಳ ಆದಾಯ ತೆರಿಗೆಯ ಒಂದು ಅಂಶದಿಂದ ಹಣ ಪಡೆದುಕೊಂಡು ಬೆಳೆಯುತ್ತಿರುವ ಸ್ವತಂತ್ರ ಸಂಸ್ಥೆಯಾಗಿದೆ. ವಿದ್ಯಾ ಇಲಾಖೆಗಳಲ್ಲಿ ಸಾಮಾನ್ಯವಾಗಿರುವ ನೌಕರಶಾಹಿ, ಪರ್ಸಗಳಿಂದ ವಿರಹಿತವಾಗಿಯೂ ಇದೆ.

ಮೊಬ್ರಾಲ್ ವೃತ್ತಿನಿರತ ಶಿಕ್ಷಕರಿಂದ ನಡೆಸಲ್ಪಡುತ್ತಿಲ್ಲ ಎಂಬುದು ಗಮನಿಸಬೇಕಾಗಿರುವ ಅಂಶ. ಯೋಜನಾ ನಿಪುಣ ಇಂಜನಿಯರರು, ಸಾವಿರಾರು ಶಿಕ್ಷಕರು, ಸಮಾಜ ಶಾಸ್ತ್ರಜ್ಞರು, ಪ್ರಕಾಶಕರು, ಪಠ್ಯ ಪುಸ್ತಕಗಳ ಲೇಖಕರು, ಮುಂತಾದವರೆಲ್ಲರನ್ನು ಸಮಾವೇಶಗೊಳಿಸಿ ಈ ಸಮಗ್ರ ಯೋಜನೆಯನ್ನು ಕಾರ್ಯಗತಗೊಳಿಸಿದ್ದಾರೆ. ವಿದ್ಯಾರ್ಥಿಗಳು ಕೊಡುವ ಶುಲ್ಕವೇ ಶಿಕ್ಷಕರ ಮಾಸಿಕ ವೇತನ.

ವೃತ್ತಿಪರ ಶಿಕ್ಷಣವೇತ್ತರು ಮೊಬ್ರಾಲ್ ಶಿಕ್ಷಣ ಪದ್ಧತಿ ಪೊಳ್ಳೆಂದೂ ಬರೀ ಮೇಲು ಮೇಲಿನ—ಎಂದರೆ ಬಹಿಸ್ಥವಾದ—ಪಾಠವೆಂದೂ ಟೀಕಿಸುತ್ತಲೇ ಬಂದಿದ್ದಾರೆ. ಹಾಗಿದ್ದರೂ, ಈ ಸಮಾಜ ಶಿಕ್ಷಕರು ವಿಚಲಿತರಾಗದೆ ತಮ್ಮ ವೃತ್ತಿಗೆ ಅಂಟಿಕೊಂಡಿದ್ದಾರೆ.

ಮೊತ್ತಮೊದಲಿನ ಕಠಿಣ ಸಮಸ್ಯೆಯೆಂದರೆ ವಯಸ್ಕರ ಸಂಕೋಚವನ್ನು ನಿವಾರಿಸುವುದು. ಶಿಕ್ಷಕನು ಮೊದಲಿಗೆ ಅವರಿಗೆ ಮನವರಿಕೆ ಮಾಡಿಕೊಡುವುದೇನೆಂದರೆ—"ನೀವು ತಿಳುವಳಿಕೆ ಇಲ್ಲದವರಲ್ಲ!" "ನಿಮ್ಮ ಜ್ಞಾನಾಸಕ್ತಿ ನಿಮ್ಮನ್ನಿಲ್ಲಿವರೆಗೂ ಎಳೆತಂದಿದೆ!", "ನಿಮ್ಮ ಜ್ಞಾನದ ಹೆಚ್ಚಳದಿಂದ ನಿಮ್ಮ ಭವಿಷ್ಯ ಉತ್ತಮಗೊಳ್ಳುವುದು, ನಿಮ್ಮ ಕುಟುಂಬದ ಏಳಿಗೆಗೆ, ದೇಶದ ಏಳಿಗೆಗೆ ನಿಮ್ಮಿಂದ ಸಹಾಯವಾಗುವುದು, ಇವೇ ಮೊದಲಾದ ಮಾತುಗಳಿಂದ ಅವರಲ್ಲಿ ಆತ್ಮ ವಿಶ್ವಾಸ ಹುಟ್ಟಿಸುತ್ತಾನೆ.

ಪ್ರಾಥಮಿಕ ಹಂತದಲ್ಲಿ ಅಕ್ಷರಾಭ್ಯಾಸಕ್ಕೆ ಬದಲಾಗಿ ಚಿತ್ರಗಳಿಂದ ಮನವರಿಕೆ ಮಾಡಿಕೊಡಬಲ್ಲ ಶಬ್ದಗಳನ್ನು ಕಂಠಪಾಠ ಮಾಡಿಸುತ್ತಾರೆ. ಈ ಪದಗಳು ವಯಸ್ಕರ ಜೀವನ ತತ್ವಗಳ ಬಗ್ಗೆ—ಉದಾಹರಣೆಗೆ, ಕೃಷಿ ವಿಧಾನಗಳ ವಿಚಾರವಾಗಿ, ಶಿಶುಸಂಗೋಪನೆಯ ರೀತಿ, ನಿಯಮಗಳ ಬಗೆಗೆ, ವಿವರಣೆ ನೀಡಬಲ್ಲಂಥ ಶಬ್ದಗಳು ಮತ್ತು ಚಿತ್ರಗಳಿಂದ ಕೂಡಿರುತ್ತವೆ. ಶಬ್ದಗಳ ಅಭ್ಯಾಸ ಮುಗಿಯಿತು

ತಿದ್ದಂತೆ ಶಬ್ದಗಳನ್ನು ಜೋಡಿಸಿ ವಾಕ್ಯರಚನೆ ಮಾಡಿಸುತ್ತಾರೆ.

ಮೊಬ್ರಾಲ್ ಪಠ್ಯ ಪುಸ್ತಕಗಳ ಬರಹಗಾರರೊಬ್ಬರು ಹೀಗೆನ್ನುತ್ತಾರೆ—ಪ್ರೌಢ ಅನಕ್ಷರಸ್ಥರು ಇಡೀ ಶಬ್ದದ ಮನೋಚಿತ್ರ ನಿರ್ಮಿಸಿಕೊಳ್ಳಬಲ್ಲರು. ಏಕೆಂದರೆ ಅದುವರೆಗೂ ಅವರೆಲ್ಲ ತಮ್ಮ ಸ್ಮರಣಶಕ್ತಿಯನ್ನೇ ಅವಲಂಬಿಸಿ ಬಾಳಿದ್ದಾರೆ. ಬರೆದಿಟ್ಟುಕೊಳ್ಳಲಾರರಷ್ಟೆ ?”

ಸರಕಾರೀ ಲೆಕ್ಕಾಚಾರದಂತೆ ಒಬ್ಬ ವಿದ್ಯಾರ್ಥಿಗೆ ಒಂದು ತಿಂಗಳಿಗೆ ತಗಲುವ ಖರ್ಚು ಒಂಬತ್ತು ರೂಪಾಯಿ. ವಯಸ್ಕರ ಶಿಕ್ಷಣ ಕಾರ್ಯಕ್ರಮದಲ್ಲಿ ಯಾವುದೇ ಉದಯೋನ್ಮುಖ ರಾಷ್ಟ್ರಕ್ಕೆ ಬೇಕಾಗುವ ಹಣದ ಪ್ರಮಾಣಕ್ಕೆ—ಇದೇ ನಿದರ್ಶನ. ಏಕೆಂದರೆ ಮೊಬ್ರಾಲ್ ಸಂಸ್ಥೆಗೆ ಪಠ್ಯಪುಸ್ತಕಗಳನ್ನು ರಿಯಾಯಿತಿ ದರದಲ್ಲಿ ಸರಬರಾಜು ಮಾಡಲಾಗುತ್ತಿದೆ. ಕಾರಣವೇನೆಂದರೆ ಬ್ರೆಜಿಲಿನ ಛಾಪಖಾನೆಗಳ ಚರಿತ್ರೆಯಲ್ಲೇ ಅತಿ ದೊಡ್ಡ “ಛಾಪಾ ಆದೇಶ” ನೀಡಬಲ್ಲ ಸಂಸ್ಥೆ ಈ ಮೊಬ್ರಾಲ್. ಅಷ್ಟೇ ಅಲ್ಲ “ರಿಯೊಡಿಜನೈರೊ”ದಲ್ಲಿರುವ ಅದರ ಮುಖ್ಯ ಕಛೇರಿಯಲ್ಲಿ ಕಂಪ್ಯೂಟರ್‌ಗಳು ಎಲ್ಲಾ ಶಿಕ್ಷಣ ಕೇಂದ್ರಗಳ ಮುನ್ನಡೆ, ಪ್ರಗತಿಗಳ ಮಾಹಿತಿಯನ್ನು ಪಟ್ಟಿ ಮಾಡಿ ಬರೆದಿಡುತ್ತವೆ. ಮಾತ್ರವಲ್ಲ ಎಲ್ಲೆಲ್ಲಿ ಏನೇನು ತೊಂದರೆಯಾಗಿದೆ, ಎಲ್ಲಿ ಮುಖ್ಯ ಕಾರ್ಯಕರ್ತೃಗಳಿಂದ ಅವುಗಳ ಬಗ್ಗೆ ಶೋಧನೆಯಾಗಬೇಕಾಗಿದೆ, ಪುನಶ್ಚೇತನಗೊಳಿಸಬೇಕಾಗಿದೆ ಎಂಬೆಲ್ಲವನ್ನೂ ಗುರುತಿಸಿಡುತ್ತವೆ! ಅಧಿಕಾರಶಾಹಿ ಕ್ರಮವನ್ನು ಈ ರೀತಿ ಅತೀ ಕಡಿಮೆಗೊಳಿಸಲಾಗಿದೆ. ಪ್ರತೀ ಪ್ರಾಂತ್ಯದ ಮುಖ್ಯ ಕಛೇರಿ ಮತ್ತು ಉಪಕಛೇರಿಗಳಲ್ಲಿ ಸೇರಿ ಒಟ್ಟು ಬರೇ ಏಳ್ನೂರು ಉದ್ಯೋಗಿಗಳಿದ್ದಾರೆ. ನಾಲ್ಕೂವರೆ ಕೋಟಿ ವಾರ್ಷಿಕ ವೆಚ್ಚದೊಳಗೆ ಈ ಯೋಜನೆ ಕಾರ್ಯವೆಸಗಲು ಇನ್ನೊಂದು ಕಾರಣವೂ ಇದೆ. ಅದೆಂದರೆ ಒಂದು, ಬಾಡಿಗೆ ಇಲ್ಲದ ತರಗತಿಯ ಕೋಣೆಗಳು, ಇನ್ನೊಂದು ಕಾರ್ಯಕಾರಿ ಸಮಿತಿಯ ಸೇವಾಮನೋಭಾವ. ವಿದ್ಯಾರ್ಥಿಗಳ ಮತ್ತು ಶಿಕ್ಷಕರ ನೇಮಕಾತಿಯೇ ಮೊದಲಾದ ಕೆಲಸಗಳನ್ನು ನಿರ್ವಹಿಸುವ ಈ ಸಮಿತಿಯ ಸದಸ್ಯರೆಲ್ಲಾ ವೇತನವಿಲ್ಲದೆ ದುಡಿವ ಗೌರವ ಕೆಲಸಗಾರರು.

ವ್ಯಕ್ತಿ ಮತ್ತು ರಾಷ್ಟ್ರದ ಪ್ರಗತಿಗೆ ಸಾಕ್ಷರತೆಯೇ ಸೋಪಾನವೆಂಬುದು ಯುವ ಉದ್ಯೋಗಸ್ಥರಿಗೆ ಚೆನ್ನಾಗಿ ಮನವರಿಕೆಯಾಗಿದೆ. ಏಕೆಂದರೆ ಬ್ರೆಜಿಲಿನ ಉದ್ಯೋಗಾವಕಾಶಗಳು ಇದನ್ನು ಎತ್ತಿ ತೋರಿಸುತ್ತಿವೆ. ಸಾವಿರಾರು ಉತ್ತಮ ಹುದ್ದೆಗಳಿಗೆ ಯೋಗ್ಯ ವ್ಯಕ್ತಿಗಳು ಸಿಗದೆ ಖಾಲಿ ಬಿದ್ದಿವೆ. ಕಾರಣವಿಷ್ಟೆ. ಬ್ರೆಜಿಲಿ

ನಲ್ಲಿ ಓದುಬರಹ ಬಲ್ಲವರ ಸಂಖ್ಯೆ ಇದುವರೆಗೂ ಬಹಳ ಕಡಿಮೆಯಾಗಿತ್ತು. ಸಾಮಾನ್ಯ ಕೆಲಸಗಳಿಗೂ ಕೆಲಸದ ನಿಯಮಾವಳಿಗಳನ್ನು ಓದುವ ಅರ್ಜಿಫಾರಂಗಳನ್ನು ತುಂಬುವ, ಇಲ್ಲವೆ ಧಾರಣೆಪಟ್ಟಿಗಳನ್ನೋ, ಸರಕು ಪಟ್ಟಿಯನ್ನೋ ಬರೆಯುವಂಥ ಕೆಲಸಗಳ ಸಾಮರ್ಥ್ಯದ ಮೇಲೆ ಉದ್ಯೋಗಿಗಳನ್ನು ಆರಿಸಿಕೊಳ್ಳುತ್ತಾರೆ.

'ಲೋಪ್ ಕೊರಿಯಾ' ಎಂಬುವರು ಹೇಳುತ್ತಾರೆ—ಪತ್ರಿಕೆಗಳಲ್ಲಿ ಓದಿ ಬರೆವ ಸಾಮರ್ಥ್ಯ ಕೆಲಸಗಾರರಿಗಾಗಿ ಬೇಡಿಕೆಗಳ ಜಾಹೀರಾತು ಪುಟಪುಟದಲ್ಲೂ ತುಂಬಿರುತ್ತದೆ. ಅನಕ್ಷರಸ್ಥರ ಸಂಬಳದ ನಾಲ್ಕು ಪಟ್ಟು ಹೆಚ್ಚಿನ ವೇತನದ ವಾಗ್ದಾನವೂ ಇರುತ್ತದೆ.

ಮನುಷ್ಯರ ವ್ಯಕ್ತಿತ್ವ ವಿಕಾಸವೂ ಈ ಸಾಕ್ಷರತೆಯ ಒಂದು ದೊಡ್ಡ ಫಲಿತಾಂಶ ಎಂಬುದಕ್ಕೆ ಒಂದು ನಿದರ್ಶನವಿಲ್ಲಿದೆ. ಒಬ್ಬ ರೈತ ಆ ಕ್ಷೇತ್ರದ ಸಹಯೋಜಕಿಯೊಡನೆ ಕಣ್ಣೀರು ತುಂಬಿ ಹೇಳಿದ ಮಾತುಗಳಿವು—"ಒಂದು ಕಾಲದಲ್ಲಿ ನಾನೊಬ್ಬ ಕುಡುಕನಾಗಿದ್ದೆ! ನನ್ನ ಕುಟುಂಬಕ್ಕೆ ಹಸಿವೆ, ದಾರಿದ್ರ್ಯಗಳ ಹೊರತು ಬೇರೇನನ್ನೂ ಕೊಡಲಿಲ್ಲ ನಾನು! ಆದರೆ ಮೊಬ್ರಾಲ್ ನನ್ನನ್ನು ಗೌರವಾನ್ವಿತ ವ್ಯಕ್ತಿಯನ್ನಾಗಿ ಬದಲಾಯಿಸಿತು. ಕುಡಿಯುವುದನ್ನು ಬಿಟ್ಟುಬಿಟ್ಟೆ. ಚೆನ್ನಾಗಿ ದುಡಿಯಲು ಪ್ರಾರಂಭಿಸಿದೆ. ಹಿಂದೆ ಬಸ್‌ಸ್ಟಾಂಡಿನಲ್ಲಿ ಬಸ್ ಹೊರಡುವ ವೇಳೆಯನ್ನು ಇತರರೊಡನೆ ಕೇಳಿಯೇ ತಿಳಿದುಕೊಳ್ಳಬೇಕಾಗಿತ್ತು. ವೇಳಾಪಟ್ಟಿಯನ್ನು ಓದಲು ಬರುತ್ತಿರಲಿಲ್ಲ. ಹೆಚ್ಚಿನವರು ನನಗೆ ಉತ್ತರವೇ ಕೊಡುತ್ತಿರಲಿಲ್ಲ. ಅವರು ನನಗೆ ಭಯಪಡುತ್ತಿದ್ದರು. ಇಂದು ಎಲ್ಲ ಬದಲಾಗಿದೆ. ಜನರೊಡನೆ ಮಾತಾಡಲು ನನಗೀಗ ನಾಚಿಕೆಯೆನಿಸುವುದೂ ಇಲ್ಲ. ಯಾರೊಡನೆ ಹೇಗೆ ವ್ಯವಹರಿಸಬೇಕೆಂಬುದೂ ನನಗೀಗ ಗೊತ್ತಾಗಿದೆ. ನನ್ನನ್ನು ನಂಬಿರಿ, ಅಮ್ಮಾ ನನ್ನ ವರ್ತನೆಯೆಲ್ಲಾ ಈಗ ಸಂಪೂರ್ಣ ಬದಲಾಗಿದೆ."

ಉಚ್ಚ ವಿದ್ಯಾಭ್ಯಾಸ: ಮೊಬ್ರಾಲ್ ಯೋಜನೆಯ ಮೊದಲ ಭಾಗ ಮುಗಿಸಿದೊಡನೆ ವಿದ್ಯಾರ್ಥಿಗಳಿಗೆ ಬ್ರೆಜಿಲಿನ ತಾಂತ್ರಿಕ ಶಿಕ್ಷಣ ಸಂಸ್ಥೆಗಳಾದ ಸೆನಾತ್ ಅಥವಾ ಸೆನಾಯ್‌ಗಳಿಗೆ ಸೇರಿಕೊಳ್ಳಲು ಯೋಗ್ಯತಾಪತ್ರ ಕೊಡಲಾಗುವುದು. ಈ ತಾಂತ್ರಿಕ ಶಾಲೆಗಳಲ್ಲಿ ಶೀಘ್ರಲಿಪಿ, ಬೆರಳಚ್ಚು, ಬೆಸುಗೆ ಹಾಕುವುದು, ಇಲೆಕ್ಟ್ರಾನಿಕ್, ಇತ್ಯಾದಿ ಆವಶ್ಯಕ ವಿಷಯಗಳಲ್ಲಿ ತರಬೇತಿ ನೀಡಲಾಗುವುದು. ಇನ್ನು ಕೆಲವರು ಮುಂದಿನ ತರಗತಿಗಳಾದ ಪ್ರಾಥಮಿಕ,

ಮಾಧ್ಯಮಿಕ ಶಾಲೆಗಳಲ್ಲಿ ಕಲಿಯತೊಡಗುತ್ತಾರೆ. 'ಮಿನಾಸ್ ಜೆರಾಯಿಸ್' ನ ಒಂದು ಹಳ್ಳಿಯ ದಿನಸಿ ಅಂಗಡಿಯ ಮಾಲೀಕ ಈಗ ತಾನೇ ಹೈಸ್ಕೂಲು ಮುಗಿಸಿದ್ದಾನೆ. ಅವನೀಗ ಸಭ್ಯ ಗೌರವಸ್ಥ ನಾಗರಿಕನೆಂದು ಭಾವಿಸಲಾಗಿದೆ. ಅಷ್ಟೇ ಅಲ್ಲ ನಗರಸಭೆಗೂ ಆತನನ್ನು ಚುನಾಯಿಸಿದ್ದಾರೆ.

ಮೊಬ್ರಾಲಿನ ಮುಖ್ಯಗುರಿ ಹದಿನೈದರಿಂದ ಮೂವತ್ತೈದು ವರ್ಷ ವಯಸ್ಸಿನ—ಅಂದರೆ ಜೀವನವನ್ನು ಪುನರ್ರಚಿಸುವ ಶಕ್ತಿಯುಳ್ಳ ಎಳೆಯರಿಗಾಗಿ ಯೋಜಿಸಲಾಗಿದ್ದರೂ ಮಧ್ಯವಯಸ್ಕರಿಗೂ, ಮುದುಕರಿಗೂ ಅದರಲ್ಲಿ ಪ್ರವೇಶವಿದೆ. ಬ್ರೆಜಿಲಿನ ಜೀವನದ ಮುಖ್ಯ ಪ್ರವಾಹದಲ್ಲಿ ಅವರೂ ಲೀನರಾಗುವುದಕ್ಕಾಗಿ ಈ ಅವಕಾಶವನ್ನು ಕಲ್ಪಿಸಲಾಗಿದೆ. ಬ್ರೆಜಿಲಿನ ಪೂರ್ವೋತ್ತರ ಭಾಗದಲ್ಲಿರುವ ಒಬ್ಬ ತಾಯಿಗೆ-ಸಾಕ್ಷರತೆಯು ಈ ಚಳುವಳಿಯು ದೂರದಲ್ಲಿರುವ ವೈದ್ಯ ಮಗನಿಗೆ ಪತ್ರ ಬರೆಯುವ ಪ್ರಥಮ ಅವಕಾಶವಾಗಿ ಪರಿಣಮಿಸಿತು. ವಯಸ್ಸಾದ ಹಣ್ಣು ಹಣ್ಣು ಮುದುಕನೊಬ್ಬನಿಗೆ ಮತ ನೀಡುವ ಹಕ್ಕಾಗಿ ಫಲಿಸಿತು. ಬ್ರೆಜಿಲಿನ ಚುನಾವಣಾ ನಿಯಮದಂತೆ ಹಸ್ತಾಕ್ಷರ ನೀಡುವುದು ಅವಶ್ಯವಾಗಿದೆ. ಕಬ್ಬನ್ನು ಕತ್ತರಿಸುವ ಕೆಲಸಗಾರನೊಬ್ಬ ಐದು ಬಾರಿ ಈ ಶಿಕ್ಷಣ ಕಾರ್ಯಕ್ರಮಕ್ಕೆ ಸೇರಿದರೂ ತೇರ್ಗಡೆಯಾಗಲಿಲ್ಲ. ಕೊನೆಗೆ ಆರನೇ ಬಾರಿಗೆ ಪರೀಕ್ಷೆಗೆ ಕುಳಿತು ಉತ್ತಮ ಅರ್ಹತಾಪತ್ರ ಪಡೆದು ಬಹುಮಾನವನ್ನು ಗಿಟ್ಟಿಸಿಕೊಂಡ.

ಇಂಥ ವಿಸ್ತಾರವಾದ, ಗಹನತರವಾದ ಕಾರ್ಯಕ್ರಮದಲ್ಲಿ ಕುಂದುಕೊರತೆಗಳು, ಆಡಳಿತದಲ್ಲಿ ಅವ್ಯವಸ್ಥೆ, ಶಿಕ್ಷಕರ ಅಭಾವ ಇತ್ಯಾದಿ ದೋಷಗಳು ಆಗಾಗ ತಲೆದೋರುತ್ತಿದ್ದರೆ ಆಶ್ಚರ್ಯವೇನಿಲ್ಲ. ಕೆಲವು ವಾರ್ತೆಗಳು ಈ ರೀತಿ ಇವೆ—ಸಾವಿರದೊಂಭೈನೂರ ಎಪ್ಪತ್ತೈದರಲ್ಲಿ ತನಿಖಾಮಂಡಲಿಯೊಂದರ ವರದಿಯಲ್ಲಿ ಒಂದು ಸಂದರ್ಭ.—

ತುಂಬಾ ಮೊಬ್ರಾಲ್ ವಿದ್ಯಾರ್ಥಿಗಳು ಸಾಕ್ಷರರಾಗುವುದರಲ್ಲಿ ವಿಫಲರಾಗಿದ್ದಾರೆ. ಶೇಕಡಾ ಹತ್ತು ವಿದ್ಯಾರ್ಥಿಗಳು ಕಾರ್ಯಕ್ರಮದ ಮಧ್ಯದಲ್ಲೇ ಬಿಟ್ಟುಬಿಡುತ್ತಿದ್ದಾರೆ. ಉಳಿದವರಲ್ಲಿ ಓದು ಬರಹ ಕಲಿತುಕೊಳ್ಳಲು ಅಸಮರ್ಥರಾಗುತ್ತಿದ್ದಾರೆ—ಈ ರೀತಿ ಇದೆ.

ಆದರೆ ಅಂತರಾಷ್ಟ್ರೀಯ ಸಾಕ್ಷರತಾ ಪ್ರಚಾರಾಧಿಕಾರಿಗಳು "ಈ ಸೋಲು ಗಣನೀಯವೆಂದು ಭಾವಿಸಬೇಕಾಗಿಲ್ಲ, ಇದೊಂದು ಸರ್ವಸಾಮಾನ್ಯ ವಿಷಯ; ಇದು ವಯಸ್ಕರ ಶಿಕ್ಷಣ ಎಂಬುದನ್ನು ಮರೆಯಬಾರದು! ಹಲವರಿಗೆ ಶಾರೀರಿಕ

ಮಾನಸಿಕ ತೊಂದರೆಗಳಿರುತ್ತವೆ; ಕೆಲವರ ಗ್ರಹಣಶಕ್ತಿ ದುರ್ಬಲ ಇಲ್ಲವೆ ಕುಂಠಿತವಾಗಿರುತ್ತದೆ" ಇತ್ಯಾದಿ ಸಮಾಧಾನ ನೀಡುತ್ತಾರೆ.

ಇತ್ತೀಚೆಗೆ "ಈ ಯೋಜನೆಯು ಉತ್ಸಾಹ ಬರುಬರುತ್ತಾ ಕುಂದಿಹೋಗುತ್ತಿದೆ; ಮೊದಲಿನ ಬಿಸಿ ಈಗ ಇಲ್ಲ," ಎಂಬುದಾಗಿಯೂ ಕೆಲ ಆಪಾದನೆಗಳು ಬರತೊಡಗಿವೆ. ಆದರೆ "ಲೋಪ್ಸ್ ಕೊರಿಯಾ" ಎಂಬುವರು ಇದರ ಬಗ್ಗೆ ಪ್ರತಿಕ್ರಿಯೆ ತೋರುತ್ತಾ ಈ ರೀತಿ ವಿವರಣೆ ನೀಡುತ್ತಾರೆ—ಬೃಹತ್ ಸಂಸ್ಥೆಯ ರೂಪ ಹೊಂದಿದ ಈ ಯೋಜನೆಯನ್ನು ನಿಭಾಯಿಸುವುದು ಕಠಿಣವಾದ ಕೆಲಸವೇ! ಏಕೆಂದರೆ ಎಂಥೆಂಥ ಗೊತ್ತುಗುರಿ ಇಲ್ಲದ ವಿಮೂಢ ಶತದಡ್ಡರನ್ನು, ಅನಾಸಕ್ತರನ್ನು ನಾವು ನಿಭಾಯಿಸಬೇಕು! ಇದೆಲ್ಲ ಸಾಮಾನ್ಯ ಕೆಲಸವೇ?"

ದಿನದಿನಕ್ಕೆ ವಶೌಲ್ಯಗಳು ಬದಲಾಗುತ್ತಿರುವ ಈ ಜಗತ್ತಿನಲ್ಲಿ ಈ ಯೋಜನೆಯನ್ನು ಹೆಚ್ಚು ಸತ್ವಶಾಲಿಯಾಗಿಸಲು ಅವರು ಇನ್ನೂ ಹಲವು ಹೊಸ ಪ್ರಯೋಗಗಳನ್ನು ಕೈಕೊಂಡಿದ್ದಾರೆ. ಈ ಕಾರ್ಯಕ್ರಮದಲ್ಲಿ ಅಕ್ಷರಸ್ಥರಾದವರಿಗೆ, ಕಟ್ಟಡಗಳ ನಿರ್ಮಾಣ, ಗಾರೆ ಕೆಲಸ, ಇಟ್ಟಿಗೆಗಳ ತಯಾರಿಯಂಥ ಕೆಲಸಗಳಲ್ಲಿ ತರಬೇತಿ ನೀಡಲಾಗುತ್ತಿದೆ. ಇನ್ನೊಂದು ಹೊಸ ಯೋಜನೆಯ ಅನ್ವಯ, "ಮೊಸೆಯ್-ಫರ್ಗ್ಯುಸನ್" ಕಂಪೆನಿಗಾಗಿ ನಲವತ್ತು ಸಾವಿರ ಮೊಬ್ರಾಲ್ ವಿದ್ಯಾರ್ಥಿಗಳನ್ನು ಟ್ರಾಕ್ಟರ್ ಚಾಲಕರಾಗಿ ತರಬೇತುಗೊಳಿಸುತ್ತಿದ್ದಾರೆ.

ಇನ್ನೊಂದು ದೊಡ್ಡ ಸಾಧನೆಯೆಂದರೆ, ಬ್ರೆಜಿಲಿನಲ್ಲಿ ವೇಗವಾಗಿ ಹಬ್ಬುತ್ತಿರುವ ಪ್ರಾಥಮಿಕ ಶಾಲೆಗಳ ವಿಸ್ತೃತ ಜಾಲದಲ್ಲಿ ಎಳೆಯ ಮಕ್ಕಳ ಹಾಜರಿ ಕ್ರಮಬದ್ಧವಾಗಿರುವಂತೆ ನೋಡಿಕೊಳ್ಳುವ ಮನೋವೃತ್ತಿ ಬೆಳೆವಂತಾದುದು.—ಅದೆಂದರೆ ಮೊಬ್ರಾಲಿಗಳಾದ ತಾಯಿ ತಂದೆಯರು ಶಿಕ್ಷಣದ ಮಹತ್ವವನ್ನು ಅರಿತುಕೊಂಡುದು. ಇವರ ಸಹಕಾರದಿಂದ ಶಾಲಾಬಾಲಕರ ಶಿಕ್ಷಣ ಸುಲಲಿತವಾಗಿ ನಡೆಯತೊಡಗಿದ್ದು, ತಮ್ಮ ಮಕ್ಕಳು ನಿಯಮ ತಪ್ಪದೆ ಶಾಲೆಗೆ ಹಾಜರಾಗುವಂತೆ, ಹೋಮ್‌ವರ್ಕ್‌ಗಳನ್ನು ಮಾಡುವಂತೆ, ಆಸಕ್ತಿ ವಹಿಸಿ ನೋಡಿಕೊಳ್ಳುತ್ತಿದ್ದಾರೆ. ಗ್ರಾಮೀಣ ಜನತೆಯನ್ನು ಎಚ್ಚರಗೊಳಿಸಿದ ಕೀರ್ತಿ 'ಮೊಬ್ರಾಲಿ' ನದು! ಇಂಥ ಒಂದು ಮೂಲಭೂತ ಬದಲಾವಣೆಯ ಸೂತ್ರಧಾರಿ 'ಮೊಬ್ರಾಲ್'!

ಇವೆಲ್ಲ ಪರಿಣಾಮಗಳಿಂದ 'ಮೊಬ್ರಾಲ್ ಬ್ರೆಜಿಲಿನ ಗಡಿ ದಾಟಿ ವಿಶ್ವದ ಎಲ್ಲೆಡೆಗಳಲ್ಲಿ ಕೋಲಾಹಲವೆಬ್ಬಿಸಿದೆ. ಜಗತ್ತಿನ ಎಲ್ಲ ನಿರಕ್ಷರಕುಕ್ಷಿಗಳನ್ನು—

ಎಂದರೆ ನಿರಕ್ಷರ ಎಂಬತ್ತು ಮಿಲಿಯ ಜನರನ್ನು ಸಾಕ್ಷರತೆಯೆಡೆಗೆ ಕರೆದೊಯ್ಯುವ ಪ್ರಯತ್ನದಲ್ಲಿ ನಿಜಕ್ಕೂ ಮಾರ್ಗದರ್ಶನ ನೀಡಿದೆ. ಜಮೈಕಾದಲ್ಲಿ ಇದೀಗ ಮೊಬ್ರಾಲ್ ಮಾದರಿಯ 'ಜಮಾಲ್' ಸಾಕ್ಷರತಾ ನಿಗಮವೊಂದನ್ನು ಸ್ಥಾಪಿಸಿದ್ದಾರೆ. ದಕ್ಷಿಣ ಅಮೇರಿಕದ ಪೆರಾಗ್ವೇಯರು, ಪೆರುವಿಯನರು, ಆಫ್ರಿಕನರು, ಪೆಚ್ಚುಪೆಚ್ಚಾಗ, ಮತ್ತು ಕದೇಪದೇ ಬ್ರೆಜಿಲಿಗೆ ಭೇಟಿ ನೀಡಿದ್ದಾರೆ. ಇವರೆಲ್ಲ 'ಯುನೆಸ್ಕೋ' ಅಂತರ್ಗತವಾಗಿ ಬಂದವರು.

ಇವರೆಲ್ಲ—ಬ್ರೆಜಿಲಿನ ಸಂಘಾದೂಮಾನಿಯಾದ ವಿಸ್ತೃತ ಯೋಜನೆಯ ತಂತ್ರಗಳೇನು? ಅವುಗಳನ್ನು ತಮ್ಮ ದೇಶಕ್ಕೆ ಹೇಗೆ ಅಳವಡಿಸಬಹುದು? ಇವೇ ಮುಂತಾದುವುಗಳ ತಿಳುವಳಿಕೆಗಾಗಿ ಬರುತ್ತಿದ್ದಾರೆಯೇ ವಿನಹ ಕಲಿಸುವಿಕೆಯ ರೀತಿಯನ್ನು ತಿಳಿಯಲಿಕ್ಕಾಗಿ ಅಲ್ಲ.

ಉರಾಗ್ವೇಯನ್ ಅಧಿಕಾರಿ ಮ್ಯಾಗ್ಯ ಎಲ್‌ಸೀಲಾರೋಕಾ ಹೇಳುತ್ತಾರೆ. —ನಾವು ಇಲ್ಲಿ ಬಂದು ತಿಳಿಯಬೇಕಾಗಿರುವ ಅಂಶ ಅವರ ಶಿಕ್ಷಣ ಕ್ರಮವನ್ನಲ್ಲ. ಅವರು ಇಷ್ಟೊಂದು ವ್ಯಾಪಕವಾಗಿ ಜನರನ್ನು ಹೇಗೆ ಒಗ್ಗೂಡಿಸುತ್ತಾರೆ? ಅದಕ್ಕೆ ಬೇಕಾದ ರಾಷ್ಟ್ರೀಯ ಸಂಪನ್ಮೂಲಗಳನ್ನು ಹೇಗೆ ಕಲೆ ಹಾಕುತ್ತಾರೆ? ಎಂಬ ವಿಚಾರ. ಜಗತ್ತಿಗೆ ಬ್ರೆಜಿಲಿನ ಅಪೂರ್ವವಾದ ಕೊಡುಗೆ ಇದು."

ವಿಶ್ವ ಶಿಕ್ಷಣ ಸಂಸ್ಥೆ ನಾಲ್ಕು ರಾಷ್ಟ್ರಗಳಲ್ಲಿ ವಯಸ್ಕರ ಶಿಕ್ಷಣದ ಕಾರ್ಯಕ್ರಮ ಹಾಕಿಕೊಂಡು ದುಡಿಯುತ್ತಿದೆ. ಸಂಘದ ಅಧ್ಯಕ್ಷ 'ಥೋಮಸ್ ರೇಸ್ಟ್' ರವರ ಅಭಿಪ್ರಾಯವನ್ನೊಮ್ಮೆ ನೋಡಿ—

ಎಲ್ಲ ದೇಶಗಳೂ ಬ್ರೆಜಿಲಿನಂತೆ ಶಿಕ್ಷಣಕ್ಕೆ ರಾಷ್ಟ್ರಮಟ್ಟದ ಪ್ರಾಧಾನ್ಯತೆ ನೀಡಿ ಕೆಲಸ ಮಾಡತೊಡಗಿದ್ದೇ ಆದರೆ, ಈ ಶತಮಾನದ ಕೊನೆಯೊಳಗೆ ನಿರಕ್ಷರತೆ ಎಷ್ಟು ವಿರಳವಾದೀತೆಂದರೆ—ಯಾವ ರೀತಿ ಪೋಲಿಯೋ ರೋಗವು ಬಹಳ ಅಪರೂಪದ ಕಾಯಿಲೆಯೋ ಅದೇ ರೀತಿ ಅನಕ್ಷರಸ್ಥರೂ ಜಗತ್ತಿನಲ್ಲೆಲ್ಲಾ ಅತ್ಯಪರೂಪವಾಗುವುದರಲ್ಲಿ ಸಂದೇಹವಿಲ್ಲ. ಮಾನವ ಕುಲದ ಮುನ್ನಡೆಯಲ್ಲಿ ನಿಜಕ್ಕೂ ಇದೊಂದು ದೈತ್ಯ ಹೆಜ್ಜೆ.

ಸರಸ್ವತಿ ಬಡೆಕ್ಕಿಲ

ಪ್ರಜಾಶಕ್ತಿ ಎಂದರೆ ಸಹನೆ, ನಮ್ಮ ಅಭಿಪ್ರಾಯಗಳನ್ನು ಅನುಮೋದಿಸದವರೊಂದಿಗೂ ಸಹನೆ ತೋರುವುದು.

—ಜವಾಹರಲಾಲ ನೆಹರೂ

ನವಿಲು

ನವಿಲು ಪ್ರಕೃತಿಯ ಸುಂದರ ಪಕ್ಷಿಗಳಲ್ಲೊಂದು. ತನ್ನ ವರ್ಣರಂಜಿತ ಗರಿಗಳು, ಧೀರಗಂಭೀರ ನಡಿಗೆ, ಸೌಮ್ಯಸ್ವಭಾವದಿಂದಾಗಿ ಮೊದಲ ನೋಟದಲ್ಲಿಯೇ ಎಲ್ಲರನ್ನೂ ತನ್ನತ್ತ ಆಕರ್ಷಿಸುವ ರೂಪ ಅದಕ್ಕಿದೆ. ನವಿಲು ನರ್ತನಕ್ಕೆ ಕೂಡ ಹೆಸರಾದ ಪಕ್ಷಿ. ಚೆನ್ನಾಗಿ ನರ್ತಿಸುವವರನ್ನು ನವಿಲಿಗೆ ಹೋಲಿಸುವುದು ರೂಢಿಯಲ್ಲಿದೆ. ಎಂದಿನಿಂದ ನವಿಲು ಮನುಕುಲದ ಸಂಪರ್ಕ ಪಡೆಯಿತೋ ಅಂದಿನಿಂದ ಇಂದಿನವರೆಗೆ ಈ ಪಕ್ಷಿಯ ಬಗ್ಗೆ ರಮ್ಯಕಲ್ಪನೆಗಳು ಗರಿಗೆದರಿವೆ. ಪುರಾಣಗಳಲ್ಲಿ, ಕಾವ್ಯಗಳಲ್ಲಿ, ಜನಪದ ಸಾಹಿತ್ಯದಲ್ಲಿ ನವಿಲಿನ ಬಗ್ಗೆ ಅನೇಕ ಕಥೆಗಳು ನಿರೂಪಿತವಾಗಿವೆ. ವಿಶ್ವದಾದ್ಯಂತ ಜನರ ಕಲ್ಪನೆಯನ್ನು ಅರಳಿಸಿದ, ಕುತೂಹಲವನ್ನು ಕೆರಳಿಸಿದ ಇಂಥ ಪಕ್ಷಿ, ಇಡೀ ಪಕ್ಷಿ ಸಂಕುಲದಲ್ಲಿ ಇನ್ನೊಂದಿಲ್ಲ.

ವರ್ಣರಂಜಿತ ಗರಿಗಳ ಆಕರ್ಷಣೆಯನ್ನು ಬಿಟ್ಟರೆ ನವಿಲಿನ ದೈಹಿಕ ರೂಪರೇಷೆಗಳು ತೀರ ಸಾಮಾನ್ಯ. ನವಿಲಿನ ಸಾಮಾನ್ಯ ತೂಕ, ಅದರ ಬಾಲವೂ ಸೇರಿದಂತೆ ೯ರಿಂದ ೧೧ ಪೌಂಡುಗಳು. ಹೆಣ್ಣು ಮತ್ತು ಗಂಡು ನವಿಲಿನ ತೂಕದಲ್ಲಿ ವಿಶೇಷವಾದ ವ್ಯತ್ಯಾಸ ಕಂಡುಬರುವುದಿಲ್ಲ. ಬಾಲದ ಉದ್ದ ಮೂರರಿಂದ ಆರು ಅಡಿಗಳು. ಹೆಣ್ಣು ನವಿಲು ವರ್ಷಕ್ಕೊಮ್ಮೆ ಮೊಟ್ಟೆಯಿಟ್ಟು ಮರಿ ಮಾಡುತ್ತದೆ. ಭಾರತದಲ್ಲಿನ ನವಿಲುಗಳು ಮೊಟ್ಟೆಯಿಟ್ಟು ಮರಿಮಾಡುವ ಅವಧಿ ಜೂನ್‌ನಿಂದ ಸೆಪ್ಟಂಬರ್. ನವಿಲು ಎಷ್ಟು ಮೊಟ್ಟೆಗಳನ್ನಿಡುತ್ತದೆ ಎಂಬ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ೩ರಿಂದ ೯ ಮೊಟ್ಟೆಗಳನ್ನು ಇಡುವುದುಂಟು. ನವಿಲು ನೋಡಲು ಸುಂದರ ಪಕ್ಷಿಯಾದರೂ ಅದರ ಗೂಡಿನ ರಚನೆ ಅಷ್ಟೇನೂ ಸುಂದರವಲ್ಲ; ತೀರಾ ಸಾಮಾನ್ಯ. ನೆಲದ ಮೇಲೆ, ತಗ್ಗಿನಂಥ ಪ್ರದೇಶವನ್ನು ಹುಡುಕಿ, ಅಲ್ಲಿ ಹುಲ್ಲು, ಕಡ್ಡಿ, ಪುರಲೆಯನ್ನು ಹರಡಿ ಗೂಡು ರಚಿಸುತ್ತದೆ. ನೀರಿನಾಸರೆಗೆ ತೀರ ಸಮೀಪವಾದ, ಸುತ್ತಮುತ್ತ ಪೊದೆಯುಳ್ಳ ಜಾಗವನ್ನು ಆರಿಸಿಕೊಳ್ಳುವುದೇ ಹೆಚ್ಚು. ಕೆಲವು ನವಿಲುಗಳು ಮರದ ಮೇಲೆ ಕಾಗೆಯಂತೆ ಗೂಡು ಕಟ್ಟಿ ಮೊಟ್ಟೆಯಿಟ್ಟು ಮರಿ ಮಾಡಿರುವ ವರದಿಗಳೂ ಇವೆ. ಆದರೆ ಬಹುತೇಕ ನೆಲದ ಮೇಲೆ ಗೂಡು ಕಟ್ಟಿ ಮೊಟ್ಟೆಯಿಟ್ಟು ಮರಿ ಮಾಡುವುದೇ ಹೆಚ್ಚು.

ಗಂಡು ನವಿಲು ರಸಿಕ ಪಕ್ಷಿ; ಬಹುಪತ್ನಿಯರನ್ನು ಪಡೆದ ಸರದಾರ! ಒಂದೊಂದು ಗಂಡು ನವಿಲು ಒಂದರಿಂದ ಐದು ಹೆಣ್ಣು ನವಿಲುಗಳನ್ನು ತನ್ನ ಸಂಗಾತಿಗಳನ್ನಾಗಿ ಮಾಡಿಕೊಂಡಿರುತ್ತದೆ. ಬೆದೆಕಾಲದಲ್ಲಿ (ಸಾಮಾನ್ಯವಾಗಿ

ಮಳೆಗಾಲ) ಗಂಡು ನವಿಲು ಹೆಣ್ಣಿನ ಮುಂದೆ ಆಕರ್ಷಕವಾಗಿ ನರ್ತಿಸಿ, ಅದರೊಡನೆ ಕೂಡುತ್ತದೆ. ಹೆಣ್ಣು ನವಿಲು ಮೊಟ್ಟೆಯಿಟ್ಟು ಮರಿಮಾಡಿ, ಆ ಮರಿಗಳನ್ನು ಬೆಳೆಸುವ ಸಮಯದಲ್ಲಿ ಗಂಡು ನವಿಲಿನ ಸಂಪರ್ಕದಿಂದ ದೂರವಿರುತ್ತದೆ. ಗಂಡು ನವಿಲಿಗೆ ಹೆಣ್ಣು ನವಿಲಿನ ಮೊಟ್ಟೆ ಹಾಗೂ ಮರಿಗಳನ್ನು ಕಂಡರೆ ದ್ವೇಷವೆಂದೂ ಹಾಗೊಂದು ಪಕ್ಷ ಅಂಥದ್ದನ್ನು ಕಂಡರೆ ತಕ್ಷಣ ಕುಕ್ಕಿ ನಾಶಪಡಿಸುವುದೆಂದೂ ಪ್ರತೀತಿಯಿದೆ. ಆದ್ದರಿಂದಲೇ ಇಂಥ ಸಂದರ್ಭಗಳಲ್ಲಿ ಹೆಣ್ಣು ನವಿಲು ಗಂಡು ನವಿಲು ದೂರವಿರುತ್ತವೆ ಎಂದು ಹೇಳಲಾಗುತ್ತದೆ.

ನವಿಲು ಬಹಳ ಬುದ್ಧಿವಂತ ಪಕ್ಷಿ. ಅದರ ಕಣ್ಣುಗಳು ಬಲು ತೀಕ್ಷ್ಣ, ಕಿವಿ ಬಹು ಚುರುಕು; ಆದರೆ ಇದರದು ಮಹಾ ಪುಕ್ಕಲು ಸ್ವಭಾವ. ಅಕ್ಕಪಕ್ಕ ಸ್ವಲ್ಪವೇ ಸದ್ದಾದರೂ ಭಯದಿಂದ ದಿಕ್ಕಾಪಾಲಾಗಿ ಓಡಿಹೋಗುತ್ತದೆ. ಹೆದರಿಕೆಯುಂಟಾದಾಗ ಅರ್ಧ ಕತ್ತಿನ ಸುತ್ತಣ ರೋಮಗಳು ನಿಗುರಿ ನಿಲ್ಲುತ್ತವೆ. ನವಿಲು ಅಲೆಮಾರಿ ಪಕ್ಷಿ; ಸದಾ ಅಲೆಯುತ್ತಿರುತ್ತದೆ. ಅದರ ಮೈ ಬಣ್ಣ, ಆಕಾರ, ಗರಿ ಎಷ್ಟು ಸುಂದರವೋ ಅದರ ಕಾಲುಗಳು ಅಷ್ಟೇ ಕುರೂಪಿ; ಧ್ವನಿ ಅಷ್ಟೇ ಕರ್ಕಶ. 'ಪಿಹಾ ಪಿಹಾ' ಎಂಬ ಒಂದು ಬಗೆಯ ಸಿಳ್ಳುದನಿಯನ್ನು ಉಂಟುಮಾಡಿ ಕೂಗುತ್ತದೆ. ಹೀಗೆ ಕೂಗುವುದನ್ನು ಕನ್ನಡದಲ್ಲಿ 'ನವಿಲು ಕೇಕೆ' ಎಂದು ಕರೆಯುತ್ತಾರೆ. ನವಿಲು ನೆಲದ ಮೇಲೆ ಚಲಿಸುವ ಪಕ್ಷಿಯಾದರೂ ಅದು ಹಾರಬಲ್ಲ ಸಾಮರ್ಥ್ಯವನ್ನೂ ಪಡೆದಿದೆ. ಆದರೆ ಹೆಚ್ಚು ದೂರ, ಹೆಚ್ಚು ಹೊತ್ತು ಹಾರಲಾರದು. ಇದರ ಹಾರಾಟ ಮರದ ಕೊಂಬೆಯ ಮೇಲೆ ಜಿಗಿದು ಕೂರಲು, ಅಲ್ಲಿಂದ ನೆಲಕ್ಕೆ ಜಿಗಿಯಲು ಮಾತ್ರ ಸೀಮಿತವಾಗಿರುತ್ತದೆ.

ನವಿಲಿಗೆ ಕೆಲವು ಪ್ರಾಣಿಗಳನ್ನು ಕಂಡರೆ ಬಹಳ ಕುತೂಹಲ. ಹುಲಿ, ಚಿರತೆ ಇಂಥ ಪ್ರಾಣಿಗಳನ್ನು ಕಂಡರೆ ಅವುಗಳನ್ನೇ ದೃಷ್ಟಿಸುತ್ತ ನಿಂತುಬಿಡುತ್ತದೆ. ಹಾಗಾಗಿ ಎಷ್ಟೋ ಸಂದರ್ಭಗಳಲ್ಲಿ ಅಸಹಾಯಕವಾಗಿ ಇಂಥ ಪ್ರಾಣಿಗಳಿಗೆ ಬಲಿಯಾಗುವುದೂ ಉಂಟು. ನವಿಲಿನ ಈ ಬಗೆಯ ದೌರ್ಬಲ್ಯವನ್ನು ತಿಳಿದಿರುವ ಬೇಟೆಗಾರರು ಚಿರತೆಯ ವೇಷ ಧರಿಸಿ ನವಿಲು ಬೇಟೆಯಾಡುತ್ತಿದ್ದರೆಂದು ತಿಳಿದುಬರುತ್ತದೆ. ನವಿಲು ಬೇಟೆಯಾಡುತ್ತಿದ್ದವರನ್ನು ಹಿಂದೆ 'ಮಯೂರಕ' ರೆಂದು ಕರೆಯುತ್ತಿದ್ದರು. ಮಳೆಗಾಲ ಬಂದರೆ ನವಿಲಿಗೆ ಎಲ್ಲಿಲ್ಲದ ಸಂಭ್ರಮ. ಗುಡುಗಿನ ದನಿ ಕೇಳಿದರೆ ಅದಕ್ಕೆ ರೋಮಾಂಚನ ಉಂಟಾಗುತ್ತದೆ. ನರ್ತಿಸುವುದು ಗಂಡುಪಕ್ಷಿ ಮಾತ್ರ; ಹೆಣ್ಣು ನರ್ತಿಸುವುದಿಲ್ಲ. ಗಂಡು ನವಿಲು ನರ್ತಿಸುವಾಗ ತನ್ನ ಬಾಲದ ಗರಿಗಳನ್ನು ಬೀಸಣಿಗೆಯ ಆಕಾರದಲ್ಲಿ ಬಿಚ್ಚಿ ಒದು

ತನ್ನ ನೀಳ ಕತ್ತನ್ನು ಮೇಲಕ್ಕೆತ್ತಿ, ಗತ್ತಿನಿಂದ ನರ್ತಿಸುತ್ತದೆ. ನವಿಲು ನರ್ತಿಸುವುದನ್ನು ಕನ್ನಡದಲ್ಲಿ 'ನವಿಲು ಜಾಗರವಾಡುವುದು' ಎಂದು ಕರೆಯುತ್ತಾರೆ.

ನವಿಲು ಮಹಾ ಹೊಟ್ಟೆಬಾಕ ಪಕ್ಷಿ: ಸಿಕ್ಕಿದ್ದನ್ನೆಲ್ಲ ತಿನ್ನುತ್ತದೆ. ಕೆಲವು ಗಿಡದ ಎಲೆಗಳು, ನಾನಾ ಬಗೆಯ ಹಣ್ಣು, ಚಿಗುರು ಹುಲ್ಲು, ಕಾಳುಗಳು, ಗೆದ್ದಲು ಹುಳು, ಮಿಡತೆ, ಕಪ್ಪೆ, ಹಲ್ಲಿ, ಹಾವು, ಚೇಳು—ಹೀಗೆ ಸಿಕ್ಕಿದ್ದನ್ನೆಲ್ಲ ಕಬಳಿಸಿಬಿಡುತ್ತದೆ. ಸಾಮಾನ್ಯವಾಗಿ ಬೆಳಗಿನ ಜಾವ ಮತ್ತು ಮುಸ್ಸಂಜೆಯ ಹೊತ್ತಿನಲ್ಲಿ ಆಹಾರ ಬೇಟೆ ನಡೆಸುತ್ತದೆ. ಆಹಾರ ತಿಂದ ನಂತರ ನೀರಿರುವ ತಾಣಕ್ಕೆ ಹೋಗಿ ನೀರು ಕುಡಿದು, ಯಾವುದಾದರೂ ಸಣ್ಣ ಮರದ ಮೇಲೆ ಹಾರಿ ಕುಳಿತು ವಿಶ್ರಾಂತಿಯನ್ನು ಪಡೆಯುತ್ತದೆ.

ನವಿಲಿನಲ್ಲಿ ಮುಖ್ಯವಾಗಿ ನಾಲ್ಕು ಪ್ರಭೇದಗಳಿವೆ. ಹಸುರು ನವಿಲು (ಪಾವೊ ಮ್ಯೂಟಿಕಸ್), ನೀಲಿ ನವಿಲು (ಪಾವೊ ಕ್ರಿಸ್ಟಾಟಸ್), ಕಾಂಗೋ ನವಿಲು (ಆಫ್ರೋ ಕಾಂಗ್ನಿಸಿಸ್), ಜಪಾನ್ ನವಿಲು (ಪಾವೊ ನಿಗ್ರಿಪೆನ್ನಿಸ್). ಜಪಾನ್ ನವಿಲು ಪ್ರಭೇದವು ಚೀನ, ಜಪಾನ್ ದೇಶಗಳಲ್ಲಿ ಮಾತ್ರ ಕಂಡು ಬರುತ್ತದೆ. ಕಾಂಗೋ ನವಿಲು ಆಫ್ರಿಕಾ ದೇಶದಲ್ಲಿ ಕಂಡುಬರುತ್ತದೆ. ಭಾರತದಲ್ಲಿ ಹೆಚ್ಚಾಗಿ ಕಂಡು ಬರುವುದು ನೀಲಿ ನವಿಲು ಪ್ರಭೇದ.

ಭಾರತ ದೇಶ, ಅದರಲ್ಲಿಯೂ ದಕ್ಷಿಣ ಭಾರತ ನವಿಲಿನ ಮೂಲನೆಲೆ; ತೌರು. ದಕ್ಷಿಣ ಭಾರತದ ಈ ಪಕ್ಷಿ ಭಾರತದಾದ್ಯಂತ ಹರಡಿ ಅನಂತರ ಹೊರ ಜಗತ್ತಿಗೆ ಪರಿಚಯವಾಯಿತು. ದ್ರಾವಿಡ ಜನಾಂಗದೊಡನೆ ನಿಕಟ ಸಂಪರ್ಕವನ್ನು ಪಡೆದಿದ್ದ ಈ ಪಕ್ಷಿಯ ಹೆಸರು ದ್ರಾವಿಡ ಭಾಷಾ ಪರಿವಾರದಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸದೊಡನೆ ಏಕರೂಪದಲ್ಲಿ ದೊರೆಯುತ್ತದೆ. ತಮಿಳು ಭಾಷೆಯಲ್ಲಿ ನವಿಲಿಗೆ ಮಯಿಲ್, ಮಯಿಲಿ, ತೋಕ್ಕೈ ಎಂಬ ಹೆಸರುಗಳಿವೆ. ಕನ್ನಡದಲ್ಲಿ ನವಿಲನ್ನು ನವುಲು, ಮೋರೆ, ಸೋಗೆ ಎಂಬ ಹೆಸರುಗಳಿಂದ ಕರೆಯಲಾಗುತ್ತದೆ. ಮಲೆಯಾಳಂ ಭಾಷೆಯಲ್ಲಿ ನವಿಲನ್ನು ಮಯಿಲ್ ಎಂಬ ಹೆಸರಿನಿಂದ ಕರೆಯಲಾಗುತ್ತದೆ. ನವಿಲನ್ನು ತೆಲುಗಿನಲ್ಲಿ ನೆಮಲಿ, ನೆವಲಿ ಎಂದು ಕರೆದರೆ, ತುಳು ಭಾಷೆಯಲ್ಲಿ ನ್ಯೆರು ಎಂದು ಕರೆಯುವರು. ಸಂಸ್ಕೃತದಲ್ಲಿ ನವಿಲನ್ನು ಭುಜಂಗ ಭುಕ್, ಭುಜಂಗ ಭೋಗಿನ್, ನೀಲಕಂಠ, ಕೇಕಿನ್, ಮಯೂರ—ಈ ಮೊದಲಾದ ಹೆಸರುಗಳಿಂದ ಕರೆಯುವರು. ನವಿಲು ಹಾವನ್ನು ತಿನ್ನುವುದರಿಂದ ಅದಕ್ಕೆ ಭುಜಂಗಭುಕ್ ಎಂಬ ಹೆಸರಾಗಿದೆ. ಸಂಸ್ಕೃತದ ಮಯೂರ ಪದಕ್ಕೆ

ತಮಿಳಿನ ಮಯಿಲ್ ಎಂಬ ಪದವೇ ಮೂಲವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಹೊರ ದೇಶಗಳೊಡನೆ ನವಿಲಿನ ಸಂಬಂಧ

ದಕ್ಷಿಣ ಭಾರತದ ನವಿಲು ಪ್ರಪಂಚದಾದ್ಯಂತ ಹರಡಿದ ಸಂಗತಿ ಕುತೂಹಲಕಾರಿಯಾದುದು. ಭಾರತದ ಕಲಾಕೃತಿಯ ಸಾರ್ಥಕತೆಯನ್ನು ಹೆಚ್ಚಿಸಿದ ವಸ್ತುಗಳಲ್ಲಿ ನವಿಲೂ ಒಂದು. ಪ್ರಾಚೀನ ಭಾರತದಲ್ಲಿ ಹೊರರಾಷ್ಟ್ರಗಳಿಗೆ ರಫ್ತಾಗುತ್ತಿದ್ದ ವಸ್ತುಗಳಲ್ಲಿ ನವಿಲಿಗೆ ಅಪಾರವಾದ ಬೇಡಿಕೆಯಿತ್ತು. ಭಾರತದಿಂದ ಪರ್ಷಿಯಾಕ್ಕೆ, ಅನಂತರ ಈಜಿಪ್ಟ್, ಗ್ರೀಸ್, ಯೂರೋಪ್ ದೇಶಗಳಿಗೆ ಒಂದು ಮಾರ್ಗವಾಗಿ, ಭಾರತದಿಂದ ಚೀನಕ್ಕೆ, ಚೀನದಿಂದ ಜಪಾನ್‌ಗೆ ಇನ್ನೊಂದು ಮಾರ್ಗವಾಗಿ ಈ ಪಕ್ಷಿಯು ಪರಿಚಯವಾಯಿತು. ಈಜಿಪ್ಟಿಗೆ ನವಿಲನ್ನು ಮೊದಲು ಪರಿಚಯಿಸಿದವರು ಫೋನಿಷಿಯನ್ನರು ಎಂಬ ಅಭಿಪ್ರಾಯವಿದೆ. ಫೋನಿಷಿಯನ್ನರು ಕೇರಳದ ಕರಾವಳಿಯೊಡನೆ ಸಂಪರ್ಕವನ್ನು ಇಟ್ಟುಕೊಂಡಿದ್ದರು. ದಕ್ಷಿಣ ಭಾರತದ ಪ್ರಾಚೀನ ವ್ಯಾಪಾರ ಪ್ರಸಿದ್ಧ ಬಂದರುಗಳಲ್ಲಿ ಒಂದಾದ ಮುಯಿರ್‌ಕೋಡ್ (ಮುಜಿರಿಸ್) ನಿಂದ ನವಿಲುಗಳನ್ನು ಹೊರದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು. ಇಂದಿನ ಕ್ರಾಂಗನೂರೇ ಅಂದಿನ ಮುಯಿರ್‌ಕೋಡ್ ಆಗಿತ್ತು. ಕ್ರಿ. ಪೂ. ೯೫೦ರ ವೇಳೆಗೆ ಈಜಿಪ್ಟ್ ದೊರೆ ಸಾಲಮನ್ ಭಾರತದಿಂದ ಆಮದು ಮಾಡಿಕೊಂಡ ವಸ್ತುಗಳಲ್ಲಿ ನವಿಲುಗಳೂ ಸೇರಿದ್ದುವೆಂದು ಬೈಬಲ್ ಗ್ರಂಥದಿಂದ ತಿಳಿದುಬರುತ್ತದೆ. ಶೀಬಾದ ರಾಣಿಯು ಸಾಲಮನ್ ದೊರೆಯನ್ನು ಕಾಣಲು ಬಂದಾಗ ದಂತ, ಚಿನ್ನ ಮುಂತಾದ ಅಮೂಲ್ಯ ಹಾಗೂ ಬೆಲೆಬಾಳುವ ವಸ್ತುಗಳ ಜೊತೆಗೆ ಉಡುಗೊರೆಯಾಗಿ ನವಿಲುಗಳನ್ನೂ ತಂದಿದ್ದಳಂತೆ. ಹೀಬ್ರೂ ಭಾಷೆಯಲ್ಲಿ ನವಿಲನ್ನು 'ತುಕ್ಕೈಯಮ್' ಎಂದು ಕರೆಯುತ್ತಾರೆ. ಈ ಪದ ತಮಿಳಿನ ತೋಕ್ಕೈ ಪದದಿಂದ ನಿಷ್ಪನ್ನವಾದದ್ದೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಕ್ರಿ. ಪೂ. ೪೫೦ರ ವೇಳೆಗೆ ನವಿಲು ಅಥೆನ್ಸಿಗೆ ಪರಿಚಯವಾಯಿತು. ಹೀರಾ ಎಂಬ ಗ್ರೀಕಿನ ಸ್ತ್ರೀ ದೇವತೆಯ ದೇವಾಲಯದಲ್ಲಿ ನವಿಲುಗಳನ್ನು ಇಡಲಾಗುತ್ತಿತ್ತು. ಗ್ರೀಕರಿಗೆ ನವಿಲಿನ ಬಗ್ಗೆ ಅಪಾರವಾದ ಕುತೂಹಲವಿತ್ತು. ಅಲ್ಲಿ ನವಿಲುಗಳನ್ನು ಪ್ರದರ್ಶನಕ್ಕೆ ಇಡುತ್ತಿದ್ದರೆಂದೂ ಆದರಿಂದ ಅಪಾರವಾದ ಹಣವನ್ನು ಸಂಪಾದಿಸುತ್ತಿದ್ದರೆಂದೂ ತಿಳಿದು ಬರುತ್ತದೆ. ಆಗ ಗ್ರೀಕ್‌ನಲ್ಲಿ ನವಿಲಿಗೆ ಒಂದು ಸಾವಿರ ದ್ರಮ್ಮಗಳಷ್ಟು (ಇಂದಿನ

ಲೆಕ್ಕದಲ್ಲಿ ಸುಮಾರು ೪೦೦ ರೂಪಾಯಿಗಳು) ಬೆಲೆಯಾಗುತ್ತಿತ್ತಂತೆ. ಪ್ರಸಿದ್ಧ ಲೇಖಕರಾದ ಅರಿಸ್ಟಾಟಲ್, ಪ್ಲಿನಿ, ಅರಿಸ್ಟೋಫೆನಿಸ್ ಮುಂತಾದವರು ನವಿಲನ್ನು ಹಾಡಿ ಹೊಗಳಿದ್ದಾರೆ. ಕ್ಲಾಡಿಯಸ್ ಈಲಿಯನಸ್ ಎಂಬ ಲೇಖಕ "ಪ್ರಾಣಿಗಳ ವೈಚಿತ್ರ್ಯಗಳು" ಎಂಬ ಪುಸ್ತಕದಲ್ಲಿ ನವಿಲನ್ನು ಕುರಿತು ಅನೇಕ ಸಂಗತಿಗಳನ್ನು ನಿರೂಪಿಸಿದ್ದಾನೆ. ಈಸೋಪನ ನೀತಿ ಕಥೆಗಳಲ್ಲಿ ನವಿಲನ್ನು ಕುರಿತು ಕಥೆಗಳಿವೆ. ಋಗ್ವೇದದಲ್ಲಿ ಕೂಡ ನವಿಲಿನ ಉಲ್ಲೇಖ ಕಂಡು ಬರುತ್ತದೆ.

ಪ್ರಾಚೀನ ಕಾಲದಲ್ಲಿ ನವಿಲು ಮಾಂಸದ ಭಕ್ಷಣೆ

ಆಡು, ಕುರಿ, ಕೋಳಿ ಮೊದಲಾದ ಪ್ರಾಣಿಪಕ್ಷಿಗಳಂತೆಯೇ ನವಿಲು ಕೂಡ ಆಹಾರದ ವಸ್ತುವಾಗಿತ್ತು. ನವಿಲು ಮಾಂಸದ ಭಕ್ಷ್ಯಗಳ ವರ್ಣನೆ ಅನೇಕ ಪ್ರಾಚೀನ ಕಾವ್ಯಗಳಲ್ಲಿ ಕಂಡುಬರುತ್ತದೆ. ರಾವಣನ ಅರಮನೆಯ ಭೋಜನ ಶಾಲೆಯಲ್ಲಿ ನವಿಲು ಮಾಂಸದ ಔತಣವನ್ನು ಬಡಿಸುತ್ತಿದ್ದರೆಂಬ ಸಂಗತಿ ವಾಲ್ಮೀಕಿ ರಾಮಾಯಣದಲ್ಲಿ ಬರುತ್ತದೆ. ಪ್ರಸಿದ್ಧ ಮೌರ್ಯ ದೊರೆ ಅಶೋಕ ನಿಗೆ ನವಿಲು ಮಾಂಸದ ಬಗ್ಗೆ ಅಪಾರವಾದ ವ್ಯಾಮೋಹವಿತ್ತೆಂದು ತಿಳಿದು ಬರುತ್ತದೆ. ಆತ ಕಳಿಂಗ ಯುದ್ಧಾನಂತರ, ಬೌದ್ಧ ಧರ್ಮವನ್ನು ಸ್ವೀಕರಿಸುವ ವರೆಗೆ ಮಾಂಸಪ್ರಿಯನೂ ಆಗಿದ್ದ. ಅವನ ಅರಮನೆಯ ಪಾಕಶಾಲೆಯಲ್ಲಿ ನೂರಾರು ಪ್ರಾಣಿಗಳನ್ನು ವಧಿಸಲಾಗುತ್ತಿತ್ತು. ಈ ಪ್ರಾಣಿ ಸಮೂಹದಲ್ಲಿ ನವಿಲೂ ಸೇರಿತ್ತು. ಅಶೋಕ ನವಿಲುಮಾಂಸಪ್ರಿಯನಾದರೂ ನವಿಲು ಸಂತತಿಯ ಸಂರಕ್ಷಣೆಗೆ ಮೊಟ್ಟಮೊದಲ ಬಾರಿಗೆ ವ್ಯವಸ್ಥೆ ಮಾಡಿದ ಕೀರ್ತಿಯೂ ಆತನಿಗೆ ಸಲ್ಲುತ್ತದೆ. ನವಿಲು ಬೇಟೆಯಾಡುವುದನ್ನು ನಿಷೇಧಿಸಿ ಆತ ಆಜ್ಞೆ ಯನ್ನು ಹೊರಡಿಸಿದ, ತನ್ನ ಅರಮನೆಯ ಪಾಕಶಾಲೆಯಲ್ಲಿ ನೂರಾರು ಸಂಖ್ಯೆ ಯಲ್ಲಿ ಕೊಲ್ಲಲಾಗುತ್ತಿದ್ದ ನವಿಲುಗಳ ಮೊತ್ತವನ್ನು ಆತ ಎರಡು ನವಿಲಿಗೆ ಇಳಿಸಿದ. ಕಾಲಕ್ರಮೇಣ ಈ ವ್ಯವಸ್ಥೆಯು ಕೊನೆಗೊಂಡಿತು. ನವಿಲುಗಳನ್ನು ಕೊಲ್ಲುವವರಿಗೆ ದಂಡ ವಿಧಿಸುವ ಕ್ರಮವನ್ನೂ ಪ್ರಥಮ ಬಾರಿಗೆ ಜಾರಿಗೆ ತಂದವನೂ ಅಶೋಕನೇ.

ಪ್ರಸಿದ್ಧ ಗ್ರೀಕ್ ದೊರೆ ಅಲೆಕ್ಸಾಂಡರನಿಗೆ ನವಿಲು ಮಾಂಸದ ಬಗ್ಗೆ ಅಪಾರ ವಾದ ಲಾಲಸೆಯಿತ್ತೆಂದು ತಿಳಿದುಬರುತ್ತದೆ. ಆತ ದಂಡಯಾತ್ರೆ ಕೈಗೊಂಡು ಭಾರತಕ್ಕೆ ಬಂದಾಗ ಸಿಂಧೂನದಿಯ ತೀರದಲ್ಲಿ ವೀರ ಪುರೂರವನನ್ನು ಸೋಲಿ

ಸಿದ್ಧ ಇತಿಹಾಸಪ್ರಸಿದ್ಧವಾಗಿದೆ. ಪುರೂರವನ ಶೌರ್ಯಪ್ರತಾಪಗಳನ್ನು ಮನಸಾರೆ ಮೆಚ್ಚಿದ ಅಲೆಕ್ಸಾಂಡರ್, ಅವನ ಗೌರವಾರ್ಥ ಒಂದು ಔತಣಕೂಟವನ್ನು ಏರ್ಪಡಿಸಿದ್ದನೆಂದೂ ಆ ಔತಣಕೂಟದ ಪ್ರಧಾನ ಆಕರ್ಷಣೆ ಒಂದು ನೂರು ನವಿಲುಗಳಿಂದ ತಯಾರಿಸಿದ ಭಕ್ಷ್ಯಭೋಜ್ಯಗಳಾಗಿತ್ತೆಂದೂ ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. ಅಲೆಕ್ಸಾಂಡರ್ ವಾಪಸು ತನ್ನ ದೇಶಕ್ಕೆ ಹಿಂದಿರುಗುವಾಗ ಇನ್ನೂರು ನವಿಲುಗಳನ್ನು ಆಮದು ಮಾಡಿಕೊಳ್ಳುವ ವ್ಯವಸ್ಥೆ ಮಾಡಿ ಹೋದನೆಂದೂ ತಿಳಿದುಬರುತ್ತದೆ.

ಪ್ರಾಚೀನ ಭಾರತದಲ್ಲಿ ನವಿಲು ಮಾಂಸದ ಭಕ್ಷಣೆ ರಾಜರಿಗೆ ಮಾತ್ರ ಸೀಮಿತವಾಗಿತ್ತು. ನವಿಲು ಮಾಂಸದ ಜೊತೆಗೆ ನವಿಲಿನ ತಲೆಯನ್ನೂ ತಿನ್ನುವವನು ರಾಜನಾಗುತ್ತಾನೆ ಎಂಬ ನಂಬಿಕೆ ರೂಢಿಯಲ್ಲಿತ್ತೆಂಬ ಸಂಗತಿ ಜಾತಕ ಕಥೆಗಳಿಂದ ತಿಳಿದುಬರುತ್ತದೆ. ಕೆಲವು ಔಷಧಿಯ ಗುಣಗಳಿಂದಾಗಿಯೂ ನವಿಲು ಮಾಂಸ ಪ್ರಸಿದ್ಧವಾಗಿತ್ತೆಂಬ ಸಂಗತಿಯನ್ನು ಮನು, ಯಾಜ್ಞವಲ್ಕ್ಯ, ಸುಶ್ರುತ ಮುಂತಾದ ಪಂಡಿತರು ತಮ್ಮ ಗ್ರಂಥಗಳಲ್ಲಿ ತಿಳಿಸಿದ್ದಾರೆ. "ನವಿಲು ಮಾಂಸವನ್ನು ತಿಂದರೆ ಕಣ್ಣುಗಳು ಕಾಂತಿಯುಕ್ತವಾಗುತ್ತವೆ; ದೃಷ್ಟಿ ತೀಕ್ಷ್ಣವಾಗುತ್ತದೆ; ಕಿವಿಗಳು ಚುರುಕಾಗುತ್ತವೆ; ಬುದ್ಧಿ ಹರಿತವಾಗುತ್ತದೆ; ಜೀರ್ಣಶಕ್ತಿ ಹೆಚ್ಚುತ್ತದೆ; ಆಯಸ್ಸು ವೃದ್ಧಿಸುತ್ತದೆ; ವೀರ್ಯ ವೃದ್ಧಿಯಾಗುತ್ತದೆ; ವಾಯು ಶಮನವಾಗುತ್ತದೆ." ಎಂದು ಚರಕ ಸಂಹಿತೆಯಲ್ಲಿ ಹೇಳಿದೆ. "ನವಿಲು ಮಾಂಸ ಚರ್ಮದ ಕಾಂತಿಯನ್ನು ಹೆಚ್ಚಿಸುತ್ತದೆ; ಕೇಶದ ಬೆಳವಣಿಗೆಗೆ ಸಹಕಾರಿಯಾಗುತ್ತದೆ; ಧ್ವನಿಶಕ್ತಿಯನ್ನು ಹೆಚ್ಚಿಸುತ್ತದೆ; ಬುದ್ಧಿಶಕ್ತಿಯನ್ನು ಹೆಚ್ಚಿಸುತ್ತದೆ" ಎಂದು ಸುಶ್ರುತ ಹೇಳುತ್ತಾನೆ. ನವಿಲು ಕೊಬ್ಬಿನಿಂದ ತಯಾರಿಸುವ 'ಮಯೂರಘೃತ' ಅಥವಾ ನವಿಲುತುಪ್ಪ ಮೈಕೈ ನೋವನ್ನು ಶಮನಗೊಳಿಸುತ್ತದೆ ಎಂಬ ನಂಬಿಕೆಯಿದೆ. ಹಕ್ಕಿಪಿಕ್ಕಿ ಎಂಬ ಅಲೆಮಾರಿ ಜನರು ನವಿಲು ತುಪ್ಪವನ್ನು ಹಳ್ಳಿಯ ಸಂತೆಗಳಲ್ಲಿ ಈಗಲೂ ತಂದು ಮಾರುವುದನ್ನು ನಾವು ಕಾಣಬಹುದಾಗಿದೆ.

ಯೂರೋಪಿನಲ್ಲಿ ನವಿಲುಮಾಂಸದ ಬಗ್ಗೆ ಅಪಾರವಾದ ಲಾಲಸೆಯಿತ್ತು. ಹುರಿದ ನವಿಲುಮಾಂಸ ದೊಡ್ಡಹಬ್ಬಗಳ ಪ್ರಧಾನ ಆಕರ್ಷಣೆಯಾಗಿರುತ್ತಿತ್ತು. ರೋಮ್‌ನಲ್ಲಿ ವಿಶೇಷ ಸಂದರ್ಭಗಳಲ್ಲಿ ಔತಣವನ್ನು ಏರ್ಪಡಿಸುವಾಗ ನವಿಲು ಮಾಂಸಕ್ಕೆ ಆದ್ಯತೆ ನೀಡುತ್ತಿದ್ದರು. ಗ್ರೀಕ್ ಜನ ಕೂಡ ನವಿಲು ಮಾಂಸವನ್ನು ಹೆಚ್ಚಾಗಿ ಇಷ್ಟಪಡುತ್ತಿದ್ದರು. ರಾಜರುಗಳು, ಶ್ರೀಮಂತ ವರ್ಗದವರು

ಮಾಂಸಾಪೇಕ್ಷೆಯಿಂದ ಕೂಡ ನವಿಲುಗಳನ್ನು ಉದ್ಯಾನವನಗಳಲ್ಲಿ ಸಾಕುತ್ತಿದ್ದರು. ಯೂರೋಪಿನಲ್ಲಿ ಟರ್ಕಿ ಕೋಳಿಯ ಪ್ರವೇಶವಾದಂದಿನಿಂದ ನವಿಲು ಮಾಂಸದ ಬೇಡಿಕೆ ಕ್ಷೀಣಿಸತೊಡಗಿತು. ನವಿಲು ಮಾಂಸದ ಔತಣ ನೀಡುವುದು ಶ್ರೀಮಂತಿಕೆಯ ಕುರುಹು ಎಂದು ಫ್ರಾನ್ಸಿನ ಜನ ಭಾವಿಸಿದ್ದರು. ಹರಳೆಣ್ಣೆಯಲ್ಲಿ ಬೇಯಿಸಿ ತಯಾರಿಸಿದ ನವಿಲು ಮಾಂಸವನ್ನು ತಿನ್ನಬಾರದೆಂದೂ ಅದು ವಿಷಕ್ಕೆ ಸಮಾನವೆಂದೂ ತಿಂದರೆ ಸಾವು ಖಂಡಿತವೆಂದೂ ಚರಕ ಸಂಹಿತೆಯಲ್ಲಿ ಹೇಳಿದೆ. ಹರಳು ಗಿಡದ ಸೌದೆಯಲ್ಲಿ ನವಿಲು ಮಾಂಸವನ್ನು ಬೇಯಿಸಬಾರದೆಂದೂ ಚರಕ ಹೇಳುತ್ತಾನೆ. ಬಂಜೆಯರು ನವಿಲು ಮಾಂಸ ತಿಂದರೆ ಫಲವತಿಯರಾಗುತ್ತಾರೆ ಎಂಬ ನಂಬಿಕೆಯಿದೆ.

ನವಿಲು ಮಾಂಸದ ಉಪಯೋಗ ಈಗಲೂ ಇದೆ. ಇತ್ತೀಚೆಗೆ ನಡೆದ ಒಂದು ಘಟನೆಯನ್ನು ಇಲ್ಲಿ ಉಲ್ಲೇಖಿಸಬಹುದು. ಮಯೂರ ಸಿಂಹಾಸನದ ೨೫೦೦ನೆಯ ವರ್ಷದ ವರ್ಧಂತಿಉತ್ಸವದ ಆಚರಣೆ ಇತ್ತೀಚೆಗೆ ೧೯೭೧ರ ಅಕ್ಟೋಬರ್ ೧೪ರಂದು ಇರಾನಿನ ಪರ್ಸಿಪೊಲಿಸ್‌ನಲ್ಲಿ ನಡೆಯಿತು. ಆ ಸಲುವಾಗಿ ಇರಾನಿನ ದೊರೆ ಷಾ (ಈಗ ದಿವಂಗತ) ಒಂದು ಔತಣಕೂಟವನ್ನು ಏರ್ಪಡಿಸಿದ್ದ. ಪ್ರಪಂಚದ ನಾನಾ ಕಡೆಗಳಿಂದ ಆಹ್ವಾನಿತರು ಆ ಸಮಾರಂಭಕ್ಕೆ ಬಂದಿದ್ದರು. ಆ ದಿನದ ಭಕ್ಷ್ಯಭೋಜ್ಯಗಳಲ್ಲಿ ಉರಿದ ನವಿಲು ಮಾಂಸವೂ ಒಂದಾಗಿತ್ತು. ಅಂದಿನ ಔತಣಕೂಟಕ್ಕೆ ಭಾರತದ ರಾಷ್ಟ್ರಾಧ್ಯಕ್ಷರಾಗಿದ್ದ ದಿವಂಗತ ವಿ.ವಿ. ಗಿರಿಯವರೂ ಹೋಗಿದ್ದರು.

ನವಿಲಿನ ಆರಾಧನೆ ಮತ್ತು ನಂಬಿಕೆಗಳು

ನವಿಲಿನ ಆರಾಧನೆ ಹೆಚ್ಚಾಗಿ ಭಾರತದಲ್ಲಿ, ಅದರಲ್ಲಿಯೂ ದಕ್ಷಿಣಭಾರತದ ದ್ರಾವಿಡ ವರ್ಗಗಳಲ್ಲಿ ಕಂಡುಬರುತ್ತವೆ. ನವಿಲನ್ನು ಕುಲದೇವತೆಯಾಗಿ ಪೂಜಿಸುವ ಪದ್ಧತಿಯೂ ಅನೇಕ ಜನಾಂಗಗಳಲ್ಲಿವೆ. ಹರಪ್ಪ, ಮೊಹೆಂಜೊದಾರೊ ಸಂಸ್ಕೃತಿಯ ಜನ ಕೂಡ ನವಿಲಿನ ಆರಾಧಕರಾಗಿದ್ದರೆಂಬ ಸಂಗತಿ ಅಲ್ಲಿ ದೊರೆತ ಕೆಲವು ಮುದ್ರಿಕೆಗಳಿಂದ ತಿಳಿದುಬರುತ್ತದೆ. ದ್ರಾವಿಡ ಜನವರ್ಗಕ್ಕೆ ನವಿಲು ಭೂಮಿತಾಯಿಯ ಸಂಕೇತವಾಗಿತ್ತು. ಮಧ್ಯಭಾರತದಲ್ಲಿರುವ ಮೋರಿ ಎಂಬ ಪಂಗಡಕ್ಕೆ ಸೇರಿದ ಭಿಲ್ಲರ ಕುಲದೇವತೆ ನವಿಲು ಎಂದು ತಿಳಿದುಬರುತ್ತದೆ. ನವಿಲು ನಡೆದ ಹಾದಿಯನ್ನು ತುಳಿದರೆ, ತುಳಿದವರು ನಾಶವಾಗಿಬಿಡುತ್ತಾರೆ ಎಂಬ ನಂಬಿಕೆ ಈ ಜನಾಂಗದಲ್ಲಿದೆ. ಜಾಟ್

ಜನರ ಕುಲದೇವತೆ ಕೂಡ ನವಿಲೇ. ಖೋಂಡ್ ಜನರು ಭೂಮಿತಾಯಿಯ ಪ್ರತೀಕವಾಗಿ ನವಿಲನ್ನು ಪೂಜಿಸುತ್ತಾರೆ; ತಮ್ಮ ಮೈಮೇಲೆ ನವಿಲಿನ ಚಿತ್ರದ ಹಚ್ಚೆ ಕುಚ್ಚಿಸಿಕೊಳ್ಳುತ್ತಾರೆ. ಹಾಗೆ ಹಚ್ಚೆಯನ್ನು ಕುಚ್ಚಿಸಿಕೊಂಡರೆ ಶುಭ ಎಂಬ ನಂಬಿಕೆ ಅವರಲ್ಲಿದೆ. ಚೀನಾದೇಶದಲ್ಲಿ ನವಿಲು ಅಗ್ನಿಯ ಸಂಕೇತ. ಜಪಾನಿನಲ್ಲಿ ನವಿಲನ್ನು 'ಕುಜಾಕು' ಎಂಬ ಹೆಸರಿನಲ್ಲಿ ಕರೆಯುತ್ತಾರೆ. ಬೌದ್ಧರಿಗೆ ನವಿಲು ಪೂಜ್ಯಪಕ್ಷಿ. ಬುದ್ಧ ಒಂದು ಜನ್ಮದಲ್ಲಿ ಚಿನ್ನದ ನವಿಲಾಗಿ ಜನಿಸಿದ್ದ ಎಂಬ ಕಥೆ ಬೌದ್ಧರಲ್ಲಿದೆ. ಬುದ್ಧನ ಪ್ರತೀಕವಾಗಿ ಅವರು ನವಿಲನ್ನು ಆರಾಧಿಸುತ್ತಾರೆ. ಕೆಲವು ರಾಜಮನೆತನಗಳ ಕುಲದೇವತೆ ನವಿಲಾಗಿತ್ತೆಂಬ ಸಂಗತಿ ಇತಿಹಾಸದಿಂದ ನಮಗೆ ತಿಳಿದುಬರುತ್ತದೆ. ಮೌರ್ಯವಂಶದವರ ಕುಲದೇವತೆ ನವಿಲಾಗಿತ್ತು ಎಂದು ಇತಿಹಾಸ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಮಯೂರ ಎಂಬ ಹೆಸರಿನಿಂದ 'ಮೌರ್ಯ' ಎಂಬ ಹೆಸರು ಬಂದಿರಬೇಕೆಂಬ ಅಭಿಪ್ರಾಯ ಕೂಡ ಇತಿಹಾಸತಜ್ಞರಲ್ಲಿದೆ. ಸ್ಕಂಧಗುಪ್ತ ಕುಮಾರಗುಪ್ತ ಎಂಬ ಹೆಸರುಗಳು ಮೌರ್ಯರು ನವಿಲಿನ ಆರಾಧಕರಾಗಿದ್ದರು ಎಂಬುದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿವೆ.

ಪಂಜಾಬಿನಲ್ಲಿ ಹಾವುಕಡಿತಕ್ಕೊಳಗಾದ ವ್ಯಕ್ತಿಗೆ ನವಿಲುಗರಿಯ ಧೂಪ ಹಾಕಿ ಆತ ಆ ಧೂಪದ ಹೊಗೆ ಸೇವಿಸುವಂತೆ ಮಾಡುತ್ತಾರೆ. ಧೂಪದ ಹೊಗೆ ಸೇವಿಸುವವನನ್ನು ವಿಷ ಕೊಲ್ಲುವುದಿಲ್ಲವೆಂಬ ನಂಬಿಕೆಯಿದೆ. ಇಲಿಯ ಕಡಿತದ ವಿಷಕ್ಕೆ ನವಿಲು ಗರಿಯು ದಿವ್ಯೌಷಧಿ ಎಂಬ ನಂಬಿಕೆ ಶ್ರೀಲಂಕಾದಲ್ಲಿದೆ. ಒಣಗಿದ ಬಾಳೆಹಣ್ಣಿನ ಸಿಪ್ಪೆಯೊಳಗೆ ನವಿಲುಗರಿಯನ್ನು ಹಾಕಿ ಸುತ್ತಿ, ಬೀಡಿಯಂತೆ ಮಾಡಿ, ಬೀಡಿ ಸೇದುವಂತೆ ದಿನಕ್ಕೆ ಮೂರುಬಾರಿ ಸೇದಿದರೆ ವಿಷ ಪರಿಹಾರವಾಗುವುದೆಂಬ ನಂಬಿಕೆ ಅವರಲ್ಲಿದೆ. ಕಾಂಗ್ರಾ ಕಣಿವೆಯ ಡೋಗ್ರ ಜನ ತಮ್ಮ ಎಲೆ ಛತ್ರಿಯ ಮೇಲೆ ನವಿಲುಗರಿಯನ್ನು ಸಿಕ್ಕಿಸಿಕೊಂಡಿರುತ್ತಾರೆ. ಹೀಗೆ ಸಿಕ್ಕಿಸಿಕೊಂಡರೆ ಅದು ತಮ್ಮನ್ನು ಸಿಡಿಲುಹೊಡೆತದಿಂದ ರಕ್ಷಿಸುತ್ತದೆ ಎಂಬ ನಂಬಿಕೆಯಿದೆ. ಮಳೆ ಬರುವಾಗ ಇದೇ ಜನ 'ಮೋರ್, ಮೋರ್' ಎಂದು ಬೊಬ್ಬೆಹಾಕುವರು. ಹೀಗೆ ನವಿಲ ಹೆಸರು ಕೂಗಿ ಬೊಬ್ಬೆಹಾಕಿದರೆ ಸಿಡಿಲು ಹೆದರುವುದು ಎಂಬುದು ಅವರ ಇನ್ನೊಂದು ನಂಬಿಕೆ. ಜೈನರು, ಬೌದ್ಧರು, ಹಿಂದೂಗಳು, ಮುಸ್ಲಿಮರು, ಸಿಖ್ಖರು, ಪಾರಸೀಗಳು, ಆದಿವಾಸಿಗಳು—ಈ ಎಲ್ಲರೂ ನವಿಲುಗರಿ ಶುಭ ಸೂಚಕವೆಂದು ನಂಬುತ್ತಾರೆ. ಜೈನರು ಮತ್ತು ಮುಸ್ಲಿಮರು ಕೆಲವು ಧಾರ್ಮಿಕಕ್ರಿಯೆಯ ಸಂದರ್ಭಗಳಲ್ಲಿ ನವಿಲುಗರಿಗಳನ್ನು

ಉಪಯೋಗಿಸುವುದೂ ಉಂಟು. ಯೂರೋಪಿನಲ್ಲಿ ನವಿಲುಗರಿ ಅಶುಭ ಎಂಬ ನಂಬಿಕೆಯಿದೆ. ರಂಗಭೂಮಿಯಲ್ಲಿ ನವಿಲುಗರಿಯನ್ನು ಕಾಣುವುದು ಅಶುಭ; ಆದರಿಂದ ನಾಟಕದ ಅಭಿನಯಕ್ಕೆ ವಿಘ್ನವುಂಟಾಗುತ್ತದೆ ಎಂಬ ನಂಬಿಕೆ ಇಂಗ್ಲೆಂಡಿನಲ್ಲಿತ್ತು. ನವಿಲಿನ ಹೆಸರಿನಲ್ಲಿ ಪ್ರತಿಜ್ಞೆ, ಆಣೆ, ಪ್ರಮಾಣಮಾಡುವ ಪರಿಪಾಠ ಫ್ರಾನ್ಸ್ ದೇಶದ ಲ್ಲಿತ್ತೆಂದು ತಿಳಿದುಬರುತ್ತದೆ. ನವಿಲು ಕುಣಿದರೆ ಆ ದಿನ ಮಳೆ ಬರುತ್ತದೆ ಎಂಬ ನಂಬಿಕೆ ಭಾರತದಾದ್ಯಂತ ಕಂಡುಬರುತ್ತದೆ.

ಹಾ. ತಿ. ಕೃಷ್ಣೇಗೌಡ

(ಮುಂದುವರಿಯುವುದು)



ನಾನು ಗುಲಾಮನಾಗಲು ಹೇಗೆ ಇಚ್ಛಿಸುವುದಿಲ್ಲವೋ ಹಾಗೆಯೇ ಪ್ರಭುವಾಗಲೂ ಇಚ್ಛಿಸುವುದಿಲ್ಲ. ಈ ತತ್ವಕ್ಕೆ ವಿರುದ್ಧವಾದುದು ಪ್ರಜಾಸತ್ತೆಯಲ್ಲ.

—ಲಿಂಕನ್

ಜನಸೇವೆಗೆ ಹಿಂತೆಗೆಯಬಾರದು. ಯೋಗ್ಯರು ಒಪ್ಪದಿದ್ದರೆ ಅಯೋಗ್ಯರು ಅಧಿಕಾರ ಆಕ್ರಮಿಸಬಹುದು.

—ವಿಕ್ಟರ್ ಹ್ಯೂಗೋ

ನಮ್ಮ ಭೂಮಿ-೫

ಒಳಕೆಮ್ಮಟದ ಕಿಡಿ ಜ್ವಾಲಾಮುಖಿ : ಮನುಷ್ಯನಿಗೆ ನಿಯಂತ್ರಿಸಲಾಗದ ಅದ್ಭುತ ವಿದ್ಯಮಾನಗಳಲ್ಲಿ ಜ್ವಾಲಾಮುಖಿ ಒಂದು. ನೆಲದಿಂದ ತಾನಾಗಿಯೇ ಸೂಸುವ ಹೊಗೆ, ಒಡನೆಯೇ ಉಂಟಾಗುವ ಕಂಪನ ಜ್ವಾಲಾಮುಖಿಯ ಮೊದಲ ಲಕ್ಷಣಗಳು. ಸುತ್ತುಮುತ್ತಲಿನ ನೀರಿನ ಚಿಲುಮೆಗಳು ಬತ್ತಿಹೋಗುತ್ತವೆ, ಸ್ತಂಭದಂತೆ ಏಳುವ ಹೊಗೆ ಮುಗಿಲಾಗಿ ಹರಡುತ್ತದೆ. ಅದು ಸೂಕ್ಷ್ಮ ಶಿಲಾಕಣ ಮತ್ತು ನೀರಾವಿಯ ಮುಗಿಲು. ನೆಲದಲ್ಲಿ ಉಂಟಾದ ಒಂದು ರಂಧ್ರದಿಂದ ಕಲ್ಲುಬಂಡೆಗಳು ಮತ್ತು ಶಿಲಾದ್ರವ(ಲಾವ) ಚಿಮ್ಮುತ್ತವೆ. ನೆಲವು ಬೆಂಕಿಯನ್ನು ಉಗುಳುವಂತೆ ತೋರುತ್ತದೆ; ಬೆಂಕಿಯ ಹೊಳೆಹರಿದಂತೆ ಶಿಲಾದ್ರವ ಹರಿಯುತ್ತದೆ. ದಿನದಿಂದ ದಿನಕ್ಕೆ ನಡುವಿನ ಕುಳಿಯ ಸುತ್ತು ಶಂಕು ಆಕಾರದ ಪರ್ವತ ಬೆಳೆಯುತ್ತದೆ. ಕಿ.ಮೀ. ಗಟ್ಟಲೆ ಎತ್ತರಕ್ಕೆ ಹರಡಿದ ಹೊಗೆ ಕೆಂಪಗೆ ಬಿಸಿಯಾದ ಭೂಮಿಯ ಅಂತರಾಳದಿಂದ ಬೆಳಗಬಹುದು. ಭೂಮಿಯೊಳಗೆ ಅಗ್ನಿದೇವನ ಕರ್ಮಾಗಾರವಿದೆಯೆಂಬ ಹಿಂದಿನ ನಂಬಿಕೆಗೆ ಇದೇ ಕಾರಣವಿರಬೇಕು.

ಸುತ್ತಮುತ್ತಲಿನ ಪ್ರದೇಶದಲ್ಲಿ ಜ್ವಾಲಾಮುಖಿಯ ಹೊಗೆ, ಶಿಲಾದ್ರವಗಳ ಹರಡುವಿಕೆಯಿಂದ ಆಗುವ ಅನಾಹುತ ಸ್ವಲ್ಪವೇನಲ್ಲ. ಆದರೆ ಜ್ವಾಲಾಮುಖಿ ಮಣ್ಣಿನ ಫಲವತ್ತತೆಗೆ, ಸಸ್ಯಪೋಷಣೆಗೆ ಅತಿ ಸಹಕಾರಿ.

ವಿವಿಧ ಜ್ವಾಲಾಮುಖಿಗಳ ಸ್ಫೋಟ ಒಂದೇ ತೆರನಾಗಿರುವುದಿಲ್ಲ. ಹಾಗೆಯೇ ಒಂದೇ ಜ್ವಾಲಾಮುಖಿಯಲ್ಲೂ ಸ್ಫೋಟದ ಕ್ರಮವೂ ಅವಧಿಯೂ ಬೇರೆಬೇರೆ ಸಂದರ್ಭಗಳಲ್ಲಿ ಒಂದೇ ರೀತಿಯಾಗಿರಬೇಕಾಗಿಲ್ಲ. ಸ್ಫೋಟಗಳ ಮಧ್ಯಂತರ ಅವಧಿ ಕೆಲವು ದಿನಗಳಿಂದ ಹಿಡಿದು ಹಲವು ಶತಮಾನಗಳವರೆಗೆ ಇರುವುದುಂಟು. ಆಳದಿಂದ ಹೊರಬರುವ ಶಿಲಾದ್ರವವು ನೆಲದ ಮೇಲ್ಭಾಗವನ್ನು ತಲುಪುವ ಮೊದಲೇ ಅವಕಾಶ ದೊರೆತಕಡೆ ಸಾಗಿ ಗಟ್ಟಿಯಾಗುವುದುಂಟು. ಭೂ ಸವೆತದಿಂದ ಹೊರಭಾಗದ ಮಣ್ಣುಶಿಲೆ ಸವೆದ ಮೇಲೆ ಈ ಶಿಲೆಗಳು ಹೊರಗೆ ತೋರುವವು.

ಜ್ವಾಲಾಮುಖಿಗಳು ಸಾಗರ ತಳದಲ್ಲೂ ಉಂಟಾಗುತ್ತವೆ. ಇಂದು ಜಾಗೃತವಾಗಿರುವ ಜ್ವಾಲಾಮುಖಿಗಳು ಮುಖ್ಯವಾಗಿ ಪೆಸಿಫಿಕ್ ಸಾಗರದ ಅಂಚಿನಲ್ಲೂ ಬಲೂಚಿಸ್ತಾನ–ಮೆಡಿಟರೇನಿಯನ್ ಪ್ರದೇಶ–ಕ್ಯಾನರಿ ದ್ವೀಪ–ವೆಸ್ಟ್ ಇಂಡೀಸ್

ಮೂಲಕ ಹಾಯುವ ವಲಯದಲ್ಲೂ ಮುಖ್ಯವಾಗಿ ಕಂಡುಬರುತ್ತವೆ.

ಚಿಪ್ಪಿನ ಕೆಳಭಾಗ – ಜ್ವಾಲಾಮುಖಿಯ ಮೂಲ : ಭೂಮಿಯ ಚಿಪ್ಪನ್ನು ಕೊರೆದು ಆಳಕ್ಕೆ ಸಾಗಿದಂತೆ ಉಷ್ಣತೆ ಏರುತ್ತದೆ. ಭೂಮಿಯ ಎಲ್ಲ ಭಾಗಗಳಲ್ಲೂ ಉಷ್ಣತೆ ಏರಿಕೆ ಒಂದೇ ಸಮನಾಗಿಲ್ಲ. ಆದರೆ ಸರಾಸರಿ ಒಂದು ಕಿಲೊಮೀಟರ್ ಆಳಕ್ಕೆ ೩೦ ಡಿಗ್ರಿ ಸೆಂಟಿಗ್ರೇಡಿನಷ್ಟು ಉಷ್ಣತೆ ಏರುವುದೆನ್ನ ಬಹುದು. ಜ್ವಾಲಾಮುಖಿಯಿಂದ ಹೊರಬೀಳುವ ವಸ್ತುಗಳು ಸುಮಾರು ೩ ಕಿ.ಮೀ. ಆಳದಿಂದ ಬಂದುವೆಂದು ತಿಳಿಯಲಾಗಿದೆ. ಈ ಆಳದಲ್ಲಿ ಸುಮಾರು ೧೪೦೦ ಡಿಗ್ರಿ ಸೆಂಟಿಗ್ರೇಡ್ ಉಷ್ಣತೆಯಿದ್ದರೂ ಅಲ್ಲಿನ ಹೆಚ್ಚಿನ ಒತ್ತಡದಲ್ಲಿ ಶಿಲೆಯನ್ನು ಕರಗಿಸಲು ಇದು ಸಾಲದು, ಇನ್ನೂ ಹೆಚ್ಚಿನ ಉಷ್ಣತೆ ಬೇಕು. ಭೂಮಿಯ ಚಿಪ್ಪಿನ ಭಾಗಗಳು ಒಡೆಯುವಾಗ ಇಲ್ಲವೇ ಕುಸಿಯುವಾಗ ಉಂಟಾದ ಹೆಚ್ಚಿನ ಉಷ್ಣತೆ ಶಿಲಾದ್ರವಕ್ಕೆ ಕಾರಣವಾಗಬಹುದು ಎಂದು ವಿಜ್ಞಾನಿಗಳ ಊಹೆ. ಚಿಪ್ಪಿನ ಇಂಥ ಚಲನೆಗಳಿಂದಾಗಿ ಜ್ವಾಲಾಮುಖಿಯ ವಲಯಗಳಲ್ಲಿ ಪರ್ವತಶ್ರೇಣಿಗಳಿರುವುದಿರಬೇಕು ಎಂದು ಊಹಿಸಿದ್ದಾರೆ.

ಆಳದ ಕಡಾಯಿಯಿಂದ ಬಿಸಿನೀರ ಕಾರಂಜಿ : ಭೂಮಿಯ ಆಳದಲ್ಲಿ ಕೆಲವೆಡೆ ಶಿಲೆಯನ್ನು ಕರಗಿಸುವ ಶಾಖವಿದೆ ಎಂದೆವಷ್ಟೆ? ಶಿಲಾದ್ರವದ ಸಂಪರ್ಕದಿಂದ ಬಿಸಿಯಾಗುವ ನೀರು ಬಿರುಕುಗಳಲ್ಲಿ ಸಾಗಿ ನೆಲದ ಮೇಲೆ ಹೊರಸೂಸಬಹುದು. ಇವು ಬಿಸಿನೀರ ಚಿಲುಮೆಗಳು. ಇಂಥ ಚಿಲುಮೆಗಳ ನೀರಿನಲ್ಲಿ ಶಿಲಾಕಣಗಳೂ ಮಿಶ್ರವಾಗಿರುವುದುಂಟು. ಆಗ ಅದಕ್ಕೆ ಔಷಧೀಯ ಗುಣ ಬರುವುದುಂಟು.

ಅಂತರ್ಜಲದ ದಾರಿ ಡೊಂಕಾಗಿ ಬಿಸಿಯಾಗುವ ನೀರಿನ ದಾರಿ ಕಟ್ಟಿದಂತಾಗ ಬಹುದು. ಟೊಳ್ಳುಗಳಲ್ಲಿ ಉಗಿತುಂಬಿ ಅತಿ ಬಿಸಿಯಾದ ನೀರು ಹೊರಚಿಮ್ಮುವಂತೆ ಒತ್ತಡ ಹೇರುವುದು. ಆಗ ಕಾರಂಜಿಯಂತೆ ಉಗಿ ಮತ್ತು ನೀರು ಚಿಮ್ಮುವುವು. ನಿಯತ ಕಾಲಾವಧಿಯ ಬಳಿಕ ಈ ಕ್ರಿಯೆ ಪುನರಾವರ್ತಿಸುವುದು. ಇದನ್ನು ಗೈಸರ್ ಎನ್ನುವರು.

ಅಮೆರಿಕದ ಯಲ್ಲೊಸ್ಟೋನ್ ಪಾರ್ಕ್ ಪ್ರದೇಶದಲ್ಲಿ ನೂರಾರು ಗೈಸರುಗಳೂ ಬಿಸಿನೀರ ಚಿಲುಮೆಗಳೂ ಇವೆ. ನಮ್ಮ ದೇಶದ ಜಮ್ಮು ಮತ್ತು ಪಶ್ಚಿಮ ಕರಾವಳಿಯಲ್ಲಿ ಬಿಸಿನೀರ ಚಿಲುಮೆಗಳಿವೆ. ಐಸ್‌ಲ್ಯಾಂಡಿನಲ್ಲಿರುವ ಒಂದು ದೊಡ್ಡ ಗೈಸರು ಪ್ರತಿದಿನವೂ ಸುಮಾರು ೨೦ ಮಿನಿಟುಗಳ ಕಾಲ ೬೦

ಮೀಟರ್ ಎತ್ತರಕ್ಕೆ ೩ ಮೀಟರ್ ವ್ಯಾಸದ ಕಾರಂಜಿಯನ್ನು ಹಾರಿಸು ವುದು.

ಪರ್ವತಗಳ ಏಳುಬೀಳು : ಜ್ವಾಲಾಮುಖಿಯಿಂದ ಹೊರಹರಿದ ಶಿಲಾ ದ್ರವದಿಂದ ಪರ್ವತಗಳು ಏಳುವವಷ್ಟೆ? ಇವನ್ನು ಜ್ವಾಲಾಮುಖಿ ಪರ್ವತ ಅಥವಾ ಅಗ್ನಿಪರ್ವತಗಳೆನ್ನುವರು. ಆದರೆ ಆಲ್ಪ್ಸ್, ಹಿಮಾಲಯ ಮೊದಲಾದ ಪರ್ವತಶ್ರೇಣಿಗಳು ಉಂಟಾದುದು ಬೇರೆ ರೀತಿಯಲ್ಲಿ—ಭೂಮಿಯ ಚಿಪ್ಪಿನ ಚಲನೆಯಿಂದ; ಸ್ತರಭಂಗ, ಮಡಿಕೆಗಳಿಂದ ಉಂಟಾದ ಚಿಪ್ಪಿನ ಸ್ಥಾನಪಲ್ಲಟ ದಿಂದ. ಪರ್ವತವನ್ನು ಕಡಿದಾಗ ಕಾಣುವ ಶಿಲಾಪದರಗಳ ಆಕಾರ ಇಂಥ ಚಲನೆಗೆ ಸಾಕ್ಷಿಭೂತವಾಗಿದೆ.

ಹಿಮಾಲಯ ಶ್ರೇಣಿಯಲ್ಲಿ ಸಾಗರ ತಳದ ಪ್ರಾಣಿ ಪಳೆಯುಳಿಕೆಗಳು ಕಂಡು ಬಂದಿವೆ. ಕಾರಣ ಸ್ಪಷ್ಟ. ನೆಲಭಾಗದ ಸವೆತದಿಂದ ಬಂದು ಸಾವಿರಾರು ವರ್ಷ ಗಳ ಕಾಲ ಸಮುದ್ರ ತಳದಲ್ಲಿ ಸಂಚಯವಾಗುವ ಮಡ್ಡಿಯೇ ಮುಂದೆ ಏಳುವ ಪರ್ವತಕ್ಕೆ ಬುನಾದಿ. ಸಮುದ್ರ ತಳ ನಿಧಾನವಾಗಿ ಕಂದಿದಂತೆ ಸವೆತದಿಂದ ಹಗುರವಾದ ಸನಿಹದ ನೆಲಭಾಗ ಮೆಲ್ಲನೆ ಏರುತ್ತದೆ. ಮಡ್ಡಿ ತುಂಬಿದ ಸಮುದ್ರ ತಳ ಅಮುಕ ಬಲಕ್ಕೊಳಗಾಗುತ್ತದೆ. ಮಡ್ಡಿಯ ಕೆಳಪದರುಗಳು ಪರ್ವತದ ಬೇರಿನಂತೆ ಕೆಳಗೆ ಉಳಿಯುತ್ತವೆ. ಮೇಲ್ಪದರುಗಳು ಮಡಿಕೆ ಬಿದ್ದು ಸಮುದ್ರ ಮಟ್ಟಕ್ಕಿಂತಲೂ ಏರಿ ನಿಂತು ಅಮುಕುವ ಶಿಲಾ ಪದರುಗಳ ಮೇಲೂ ಹರಡು ತ್ತವೆ. ಚಿಪ್ಪಿನ ಮೇಲ್ಪದರದಲ್ಲಿರುವ ಪರ್ವತ ದ್ರವ್ಯವು ಚಿಪ್ಪಿನ ಕೆಳಭಾಗದ ದ್ರವ್ಯಕ್ಕೆ ಹೋಲಿಸಿದರೆ ಹಗುರ. ಭೂ ಚಿಪ್ಪಿನ ಮೇಲ್ಪದರು ಕೆಳಪದರದ ಮೇಲೆ ತೇಲುವುದು. ಸಮತೋಲಕ್ಕಾಗಿ ಕೆಳಪದರದಿಂದ ಎಷ್ಟು ಮೇಲೆ ಬರಬೇಕೋ ಅಷ್ಟರವರೆಗೆ ಪರ್ವತ ಏಳುವುದು. ಸಮುದ್ರದಲ್ಲಿ ತೇಲುವ ಹಿಮಗಡ್ಡೆಯಂತೆ ನಮಗೆ ತೋರುವುದು ಪರ್ವತದ ಆಂಶಿಕ ನೋಟ ಮಾತ್ರ!

ಪರ್ವತ ಏಳುತ್ತಿದ್ದಂತೆಯೇ ಅದನ್ನು ಸವೆಸುವ ಕಾರ್ಯವೂ ಪ್ರಾರಂಭ ವಾಗುತ್ತದೆ. ಲಕ್ಷಗಟ್ಟಲೆ ವರ್ಷಗಳ ಅನಂತರ ಸವೆದ ಪರ್ವತದ ದ್ರವ್ಯವೇ ಹೊಸ ಪರ್ವತವನ್ನು ರೂಪಿಸುವುದಕ್ಕೆ ಒದಗುವುದು.

ಪರ್ವತಗಳ ಹುಟ್ಟಿಗೆ ಕಾರಣವಾದ ಅದುಮು ಬಲಗಳು ಹೇಗೆ ಉಂಟಾಗು ತ್ತವೆ?

ಭೂಮಿಯ ಬಾಲ್ಯಾವಸ್ಥೆಗೆ ಹೋಲಿಸಿದರೆ ಇಂದು ಅದು ತಣಿದಿದೆ. ಭೂಮಿಯ ಹೊರಚಿಪ್ಪು ಬಹಳ ಮೊದಲಿಗೇ ತಣಿಯಿತು. ಅದರ ಕೆಳಭಾಗ

ಅನಂತರ ತಣಿಯುತ್ತಾ ಸಂಕೋಚಗೊಳ್ಳತೊಡಗಿತು. ಇದರ ಪರಿಣಾಮ: ತಿರುಳು ಭಾಗಕ್ಕೆ ಸರಿ ಹೊಂದದ ದೊಡ್ಡ ಚಿಪ್ಪು. ಚಿಪ್ಪು ತಿರುಳು ಭಾಗಕ್ಕೆ ಹೊಂದಿಕೊಳ್ಳುತ್ತಿರುವಂತೆ ಚಿಪ್ಪಿನಲ್ಲಿ ಅದುಮು ಬಲಗಳು ಉಂಟಾಗಿ ಶಿಲಾ ಸ್ತರಗಳು ಮಡಿಕೆ ಬಿದ್ದವು. ಈ ಚಿತ್ರಣ—ಸುಟ್ಟ ಬದನೆಕಾಯಿ ಸುಕ್ಕುಗಟ್ಟುವುದಕ್ಕೆ ಸಮಾನ.

ಭೂಮಿ ತಣಿಯುತ್ತಿರುವ ಬಗ್ಗೆ ಖಚಿತ ನಿರ್ಧಾರಕ್ಕೆ ವಿಜ್ಞಾನಿಗಳೆಲ್ಲ ಬಂದಿಲ್ಲ. ಆದ್ದರಿಂದ ಚಲಿಸುವ ಭೂಖಂಡಗಳು ಮಡ್ಡಿಯನ್ನು ದೂಡುವಾಗ ಮಡಿಕೆಗಳಾಗಿ ಪರ್ವತ ಏಳುವುದನ್ನು ಊಹಿಸಿದ್ದಾರೆ.

ಮತ್ತೊಂದು ರೀತಿಯಲ್ಲಿ ನೋಡಿದರೆ ಭೂ ಖಂಡಗಳು ತೆಪ್ಪಗಳಂತೆ ಭೂ ಕವಚದ ಸ್ನಿಗ್ಧ ದ್ರವ್ಯದಲ್ಲಿ ತೇಲುವವು. ಬುದ್ದಲಿಯಲ್ಲಿ ನೀರನ್ನು ತುಂಬಿ ಕಾಸಿದರೆ ಕಾದನೀರು ಮಧ್ಯದಲ್ಲಿ ಮೇಲೇರುವುದು. ಮೇಲಿನ ತಣ್ಣಗಿನ ನೀರು ಬದಿಗೆ ಸಾಗಿ ಕೆಳಗೆ ಕಂತುವುದು. ಇಂಥ ಉಷ್ಣನಯನ ಪ್ರವಾಹದ ಅನೇಕ ಅಗಾಧ ಸುಳಿಗಳು ಭೂಕವಚದಲ್ಲಿವೆ. ಪಕ್ಕ ಪಕ್ಕದ ಎರಡು ಸುಳಿಗಳಲ್ಲಿ ಪ್ರವಾಹಗಳು ಕೆಳಗೆ ಸಾಗುತ್ತಿದ್ದರೆ ಅವು ಭೂಮಿಯ ಚಿಪ್ಪನ್ನು ಕೆಳಗೆ ಸೆಳೆಯಬಲ್ಲವು. ಮೇಲೆ ಸಾಗುತ್ತಿದ್ದರೆ ಚಿಪ್ಪನ್ನು ಎತ್ತಬಲ್ಲವು. ಪರ್ವತ ಜನನದ ಸಂದರ್ಭ ಹೀಗೆ ಚಲಿಸುವ ಚಿಪ್ಪಿನಲ್ಲಿ ಸ್ತರಭಂಗ ಉಂಟಾದರೆ ಭೂಮಿ ಕಂಪಿಸಬಹುದು.

ಅಭದ್ರತೆಯ ಎಚ್ಚರಿಕೆ–ಭೂಕಂಪನ: ಅಚಲ, ಭದ್ರವೆಂದು ನಾವು ಭಾವಿಸಿದ ನೆಲ ಕಂಪಿಸಿದಾಗ ಕಟ್ಟಡಗಳೂ, ಮರಗಳೂ ಓಲಾಡುತ್ತವೆ, ನೆಲ ಬಿರುಕು ಬಿಡುತ್ತದೆ, ಭೂಮಿಯ ಅಂತರಾಳದಿಂದ ಮೊರೆಯುವ ಉರುಳುವ ಸದ್ದು ಕೇಳಿಸುತ್ತದೆ. ಇಂಥ ಅನಿರೀಕ್ಷಿತ ಸನ್ನಿವೇಶದಲ್ಲಿ ಭಯಭ್ರಾಂತನಾಗದ ಮನುಷ್ಯ ಇರಲಾರ.

ವಾಸ್ತವವಾಗಿ ಭೂಮಿಯಲ್ಲಿ ವರ್ಷಕ್ಕೆ ೮–೧೦ ಸಾವಿರ ಕಂಪನಗಳು ಉಂಟಾಗುತ್ತವೆ. ಆದರೆ ಅವುಗಳಲ್ಲಿ ಹೆಚ್ಚಿನವು ತುಂಬ ಕ್ಷೀಣವಾದವು; ಹಾನಿಕಾರಕವಲ್ಲ. ಭೂಕಂಪನದ ಪರಿಣಾಮ ಮೇಲ್ಮೈಯಲ್ಲಿ ಕಂಡುಬಂದರೂ ಅದರ ಉಗಮ ಸ್ಥಾನ ಭೂಮಿಯೊಳಗಿರುವುದು. ಹೆಚ್ಚಿನ ಭೂಕಂಪನಗಳ ಉಗಮ ಕೆಲವು ಕಿ.ಮೀ. ಆಳದಲ್ಲಿ. ಆದರೆ ೭೦೦ ಕಿ.ಮೀ. ಆಳದಲ್ಲಿ ಹುಟ್ಟುವ ಭೂಕಂಪನಗಳೂ ಇವೆ. ಅಂದರೆ ಭೂಮಿಯ ಚಿಪ್ಪು ಭಾಗದಲ್ಲಿ ಅಷ್ಟೇ ಅಲ್ಲದೆ ಭೂಕವಚದ ಆಳದಲ್ಲೂ ಅವು ಉಂಟಾಗಬಹುದು.

ಭೂಕಂಪನಕ್ಕೆ ಮೂರು ಮುಖ್ಯ ಕಾರಣಗಳಿವೆ. ಅಂತರ್ಜಲ ಕೊರೆದ ಗುಹೆ

ಗಳ ಮೂಡು ಒಮ್ಮೆಲೇ ಕುಸಿದು ಕಂಪನ ಉಂಟಾಗಬಹುದು. ಜ್ವಾಲಾಮುಖಿ ಸ್ಫೋಟದ ಮೊದಲು ಅಥವಾ ಅದು ನಡೆಯುತ್ತಿರುವಾಗ ಭೂಮಿ ನಡುಗಬಹುದು. ಮಡಿಕೆ, ಸ್ತರಭಂಗಗಳಿಂದ ಭೂಮಿಯ ಚಿಪ್ಪಿನ ಸ್ಥಾನ ಪಲ್ಲಟವಾಗುವಾಗ ಕಂಪನ ಹರಡಬಹುದು. ಇವಲ್ಲದೆ ಮನುಷ್ಯನಿರ್ಮಿತ ನ್ಯೂಕ್ಲಿಯರ್ ಬಾಂಬನ್ನು ನೆಲದೊಳಗೆ ಸ್ಫೋಟಿಸುವುದರಿಂದಲೂ ಕಂಪನ ಉಂಟಾಗಬಹುದು.

ಭೂಕಂಪನದ ಕ್ಷೋಭೆ ಭೂಗೋಲದ ಮಧ್ಯೆ ಸಾಗಿ ಮೇಲ್ಮೈಯ ಬೇರೆ ಬೇರೆ ಭಾಗಗಳನ್ನು ತಲಪಬಲ್ಲುದು. ಹೀಗೆ ಸಾಗುವ ಅಲೆಗಳನ್ನು ಉದ್ದ ಅಲೆ ಮತ್ತು ಅಡ್ಡ ಅಲೆಗಳೆಂದು ಮುಖ್ಯವಾಗಿ ವರ್ಗೀಕರಿಸಿದ್ದಾರೆ. ಅಲೆಗಳ ವೇಗವು ಮಾಧ್ಯಮದ ಸಾಂದ್ರತೆಯನ್ನು ಅವಲಂಬಿಸಿದೆ. ಭೂಮಿಯೊಳಗಿನ ವಿವಿಧ ವಲಯಗಳ ಮಧ್ಯದ ವಿಚ್ಛಿನ್ನ ರೇಖೆಗಳಲ್ಲಿ ವೇಗವು ಒಮ್ಮೆಲೆ ಬದಲಾಗುತ್ತದೆ. ಭೂಕಂಪನದ ಅಲೆಗಳ ವೇಗ ಮತ್ತು ದಿಕ್ಕುಗಳನ್ನು ಅಳೆದು ಇಂಥ ವಲಯಗಳನ್ನು ಭೂಗೋಲದ ಒಳರಚನೆಯನ್ನು ಊಹಿಸಿದ್ದಾರೆ.

ಮೇಲ್ಪದರದಿಂದ ಭೂ ಕೇಂದ್ರಕ್ಕೆ: ವಿವಿಧ ಶಿಲೆಗಳಿಂದ ಕೂಡಿದ ಭೂಮಿಯ ಮೇಲ್ಪದರ ಅಥವಾ ಚಿಪ್ಪು ಸುಮಾರು ೩೨ ರಿಂದ ೬೪ ಕಿ.ಮೀ. ದಪ್ಪವಿದೆ. ಪರ್ವತ, ಕಣಿವೆ, ಸಾಗರ, ಸರೋವರಗಳೂ ಚಿಪ್ಪಿನ ಮೇಲಿವೆ. ಚಿಪ್ಪಿನಲ್ಲಿ ಸುಮಾರು ೧೬-೨೪ ಕಿ.ಮೀ. ಆಳದ ವರೆಗೆ ಗ್ರಾನೈಟ್ ಶಿಲೆಗಳೂ ಅದರಿಂದ ಕೆಳಗೆ ಬೆಸಾಲ್ಟ್ ಶಿಲೆಗಳೂ ಇವೆ. ಚಿಪ್ಪಿನ ಸರಾಸರಿ ಸಾಂದ್ರತೆ ಸುಮಾರು ೨.೮. ಇದರ ದಪ್ಪ ಭೂಗೋಲದ ಎಲ್ಲೆಡೆ ಒಂದೇ ಸಮನಾಗಿಲ್ಲ. ಭೂಖಂಡವಿರುವಲ್ಲಿ ದಪ್ಪ ಹೆಚ್ಚು. ಸಾಗರ ತಳದಲ್ಲಿ ತೆಳು.

ಇಷ್ಟು ದಪ್ಪದ ಚಿಪ್ಪಿನಡಿ ಭೂಕವಚವಿದೆ. ಚಿಪ್ಪು ಮತ್ತು ಭೂಕವಚದ ಮಧ್ಯೆ ಮೊಹರೊವಿಸಿಕ್ ವಿಚ್ಛಿನ್ನತಾರೇಖೆ ಇದೆ. (ಇದನ್ನು ಕಂಡು ಹಿಡಿದ ಯೂಗೊಸ್ಲಾವಿಯದ ವಿಜ್ಞಾನಿಯ ನೆನಪಿಗೆ ಈ ಹೆಸರು.) ಇಲ್ಲಿ ಭೂಕಂಪನ ಅಲೆಯ ವೇಗ ಒಮ್ಮೆಲೇ ಬದಲಾಗುವುದು. ಅಧಿಕ ಒತ್ತಡದಲ್ಲಿರುವ ಭೂಕವಚದ ದ್ರವ್ಯಕ್ಕೆ ದ್ರವದಂತೆ ಹರಿಯುವ ಗುಣವಿದೆ. ಘನ ವಸ್ತುವಿನಂತೆ ಬಲಪ್ರಯೋಗವಾಗುವಾಗ ಒಡೆಯುವ ಗುಣವಿದೆ. ಅದರಿಂದಲೇ ಚಿಪ್ಪನ್ನು ಮೇಲೆ ಕೆಳಗೆ ಚಲಿಸಬಲ್ಲ ಉಷ್ಣನಯನ ಪ್ರವಾಹಗಳನ್ನು ಆಳವಾದ ಭೂಕಂಪನ ಉಂಟುಮಾಡುವ ಬಿರುಕುಗಳನ್ನು ಭೂಕವಚದಲ್ಲಿ ಕಲ್ಪಿಸಬಹುದಾಗಿದೆ. ಸುಮಾರು ೨೯೦೦ ಕಿ.ಮೀ. ಆಳದ ವರೆಗೆ ಭೂಕವಚದ ವ್ಯಾಪ್ತಿಯಿದೆ. ಇಲ್ಲಿ ಸಾಂದ್ರತೆ ೩.೩ ರಿಂದ ೫.೭ಕ್ಕೆ ಏರುವುದು.

ಭೂಕವಚದ ಆಳಕ್ಕಿರುವುದು ಭೂಗರ್ಭ ಅಥವಾ ಭೂಮಿಯ ತಿರುಳು. ಇದನ್ನು ಗುಣಲಕ್ಷಣಗಳಿಗೆ ಅನುಗುಣವಾಗಿ ಹೊರಗರ್ಭ ಹಾಗೂ ಒಳಗರ್ಭ ಎಂದು ಗುರುತಿಸಿದ್ದಾರೆ. ಭೂಗರ್ಭದಲ್ಲಿ ನಿಕಲ್-ಕಬ್ಬಿಣ ಲೋಹಪೂರಿತ ದ್ರವ್ಯವಿದೆ ಎಂದು ಊಹೆ. ಹೊರಗರ್ಭವು ದ್ರವರೂಪದಲ್ಲಿದ್ದು ಅಲ್ಲಿಯ ದ್ರವ್ಯದ ಸಾಂದ್ರತೆ ೮. ಒಳಗರ್ಭವು ಘನರೂಪದ್ದು. ಅದರ ಸಾಂದ್ರತೆ ೧೧ಕ್ಕಿಂತಲೂ ಹೆಚ್ಚು.

ಒಟ್ಟಿನಲ್ಲಿ ಹಲವು ಏಕಕೇಂದ್ರೀಯ ವಲಯಗಳನ್ನು ಒಳಗೊಂಡ ಮಹಾಗೋಲ ಈ ಭೂಮಿ. ಭೂಮಿಯ ಎಳೆ ವಯಸ್ಸಿನಲ್ಲೇ ಈ ವಿಶಿಷ್ಟ ರಚನೆ ರೂಪುಗೊಂಡಿರಬಹುದು. ಆಗಲೇ ಕಬ್ಬಿಣದಂಥ ಭಾರ ಪದಾರ್ಥಗಳು ಕೇಂದ್ರದ ಕಡೆ ಸಾಗಿರಬಹುದು.

ಚಿಪ್ಪಿನಿಂದ ಕೇಂದ್ರದೆಡೆ ಭೂಮಿಯ ಸಾಂದ್ರತೆ ಬದಲಾಗುತ್ತದೆ. ಭೂಮಿಯ ಸರಾಸರಿ ಸಾಂದ್ರತೆ ೫.೫. ಸೌರವ್ಯೂಹದ ಬೇರಾವ ಗ್ರಹದಲ್ಲೂ ಇಲ್ಲದ ಅಸಾಧಾರಣ ಸಾಂದ್ರತೆ ಇದು.

ಚಲನೆಯ ಫಲ–ದಿಕ್ಸೂಚಿ ಗುಣ: ಭೂಮಿ ಒಂದು ದೊಡ್ಡ ಕಾಂತದಂತೆ ವರ್ತಿಸುವುದು. ಭೂಮಿಗೆ ಈ ಗುಣ ಹೇಗೆ ಬಂತು? ಭೂಗರ್ಭದಲ್ಲಿರುವ ಲೋಹ ಪದಾರ್ಥದ ಚಲನೆಯೇ ಈ ಗುಣದ ಮೂಲ ಎಂಬ ವಾದವಿದೆ. ಸೂರ್ಯನಿಂದ ಬರುವ ವಿದ್ಯುದಾವಿಷ್ಟ ಕಣಗಳನ್ನು ಧ್ರುವ ಪ್ರದೇಶದೆಡೆ ಸಾಗಿಸುವುದರಲ್ಲಿ ಭೂಮಿಯ ಕಾಂತತೆಯದು ಮುಖ್ಯ ಪಾತ್ರ. ಇದರಿಂದ ಬೆಳಕಿನ ಪ್ರವಾಹಗಳಂತೆ, ಸ್ಪಂದಿಸುವ ಪರದೆಯಂತೆ ಅಲ್ಲಿ ಧ್ರುವ ಪ್ರಭೆಯ ಭವ್ಯ ದೃಶ್ಯ ಕಾಣುವುದು. ಭೂಮಿಯಿಂದ ಸುಮಾರು ೩೨೦೦ ಕಿ.ಮೀ. ಎತ್ತರದಲ್ಲಿ ೧೬೦೦೦ ಕಿ.ಮೀ. ಎತ್ತರದಲ್ಲೂ ವಿದ್ಯುತ್ಪೂರಿತ ಕಣಗಳಿಂದ ತುಂಬಿದ ದಟ್ಟವಾದ ಪಟ್ಟಿಗಳಿವೆ. ಇವೂ ಭೂಕಾಂತತೆಯ ಮೇಲೆ ಪರಿಣಾಮ ಬೀರಬಲ್ಲವೆಂಬ ತರ್ಕವಿದೆ.

ಸದಾ ಚಲನ ಶೀಲಗ್ರಹ ಈ ನಮ್ಮ ಭೂಮಿ: ಮನುಷ್ಯನಿಗೆ ಬೇಕಾದ ಉಪಯುಕ್ತ ಶಿಲೆ, ಖನಿಜ, ಕಲ್ಲಿದ್ದಲು, ಪೆಟ್ರೋಲಿಯಂ ಭೂಮಿಯಿಂದ ದೊರಕಿದೆ. ಇವನ್ನು ಪಡೆಯುವ ನಿಟ್ಟಿನಲ್ಲಿ ಮನುಷ್ಯ ಮುಂದುವರಿದಿದ್ದಾನೆ; ಪ್ರಕೃತಿಯ ಇತರ ಬಲಗಳೊಡನೆ ಭೂಮಿಯ ಮುಖ ಬದಲಾಯಿಸುವುದರಲ್ಲಿ ಮನುಷ್ಯನೂ ಪಾಲುಗೊಂಡಿದ್ದಾನೆ. ಸಾವಿರಾರು ಕಿ.ಮೀ. ಎತ್ತರದಿಂದ ನೋಡಿದರೆ ಹಗಲು ಹೊತ್ತು ಹೊಳೆಯುವ ನೀಲ ಬಣ್ಣದ ಜಲಭರಿತ ಗ್ರಹ

ವಾಗಿ ತೋರುವ ಭೂಮಿಯು, ಭೂಖಂಡಗಳಿರುವ ಬದಿ ರಾತ್ರಿ ಹೊತ್ತು ಬೆಳಕಿನ ಚುಕ್ಕೆಗಳ ವಿಶಿಷ್ಟ ವಿನ್ಯಾಸವಾಗಿ ಕಾಣಿಸುವುದು.

ಭೂಗರ್ಭದಲ್ಲಾಗಲೀ ಭೂಮಿಯ ಚಿಪ್ಪಿನಲ್ಲಾಗಲೀ ಚಿಪ್ಪಿನ ಮೇಲಿನ ಜಲಮಂಡಲ-ವಾಯು ಮಂಡಲಗಳಲ್ಲಾಗಲೀ ಸದಾ ಕಾಣುವ ಮುಖ್ಯ ಗುಣ-ಸದಾ ಚಲನೆ. ಸೌರವ್ಯೂಹಾಂತರ್ಗತವಾಗಿ ಆಳ ಆಕಾಶದಲ್ಲೂ ಭೂಮಿ ಚಲಿಸುತ್ತದೆ. ಆದ್ದರಿಂದಲೇ ಸದಾ ಚಲನ ಶೀಲವಾದ ಗ್ರಹ ಈ ನಮ್ಮ ಭೂಮಿ.

ಅಡ್ಯನಡ್ಕ ಕೃಷ್ಣಭಟ್ಟ

(ಮುಗಿಯಿತು)



ಸಮುದ್ರ ದೃಶ್ಯ ಆನಂದಮಯ. ಆದರೆ ದಡದಮೇಲಿಂದ ನೋಡುವವರಿಗೆ ವಿನಾ ಒಳಗೆ ಮುಳುಗುವವರಿಗಲ್ಲ.

—ವಿನೋಬಾ

ಮತ್ತೊಬ್ಬರನ್ನು ಸಂತೋಷ ಪಡಿಸತಕ್ಕ ಗುಣ ಒಂದೂ ಇಲ್ಲದವನು ಮತ್ತೊಬ್ಬರ ಗುಣವನ್ನು ಸಹಿಸಲಾರ.

—ಭಾರವಿ

ಜ್ಞಾನದ ಖ್ಯಾತಿಯ ಆಶೆಯಿಲ್ಲದೇ ದೀನವಾಗಿ ಶ್ರದ್ಧೆಯಿಂದ ಓದಿದಾಗಲೇ ವಿದ್ಯೆಯಿಂದ ಲಾಭ.

—ಥಾಮಸ್ ಕೆಂಪಸ್

ಸ್ತ್ರೀಪುರ್ಷ ಸ್ಥೈರ್ಯಗಳ ಮಹತ್ವ ಅವು ಪ್ರಚೋದಿಸುವ ಸದ್ಗುಣಗಳಲ್ಲಿ ಪ್ರತಿಬಿಂಬಿಸುತ್ತವೆ.

—ಎಮರ್‌ಸನ್

ಹುಡುಕಾಟ

ಇಂದು ಅವಳು ಬಸ್ಸಿನಲ್ಲಿ ಪ್ರಯಾಣ ಮಾಡಬೇಕೆಂದು ನಿಶ್ಚಯಿಸಿದ್ದಳು. ಪೇಟೆ ಬಹಳ ದೂರವಿರಲಿಲ್ಲ, ಐದಾರು ಮೈಲುಗಳ ಪ್ರಯಾಣವಷ್ಟೆ. ಕಾರಿನಲ್ಲಿ ಹೋದರೆ ಯಾವದಿಕ್ಕು, ಯಾವ ರಸ್ತೆ ಎನ್ನುವುದಾಗಲಿ, ಎಷ್ಟೋ ದೃಶ್ಯಗಳ ಪರಿಚಯವಾಗಲಿ ಆಗುತ್ತಿರಲಿಲ್ಲ. ಹಾಗಾಗಿ ಆ ಶ್ರೀಮಂತಿಕೆಯಿಂದ ಹೊರ ಬಂದು ಒಬ್ಬ ಸಾಧಾರಣ ಸ್ತ್ರೀಯಂತೆ ಬಸ್ಸಿನಲ್ಲಿ ಹೋಗಿ ಬರಬೇಕೆಂದು ಅವಳು ಬಹಳ ದಿನಗಳಿಂದ ಹಂಬಲಿಸಿದ್ದಳು. ನೋಡಲು ತುಂಬ ಸರಳ ವ್ಯಕ್ತಿಯಾಗಿದ್ದರೂ ಕಾರಿನ ಹಿಂದಿನ ಸೀಟಿನಲ್ಲಿ ಕೂರುತ್ತಿದ್ದಂತೆಯೇ ಅವಳ ಕಣ್ಣುಗಳು ಮುಚ್ಚಿಕೊಂಡು, ತಲೆ ಹಿಂದಿನ ಮೆತ್ತೆಗೆ ಒರಗಿ, ಅವಳಲ್ಲೂ ಇತರರ ದೃಷ್ಟಿಯಲ್ಲೂ ಒಂದು ಅಸಾಧಾರಣವಾದ ಅಹಮಿಕೆ ಉಂಟಾಗುತ್ತಿತ್ತು. ಈ ದಿನ ಸಂಜೆ ಅವಳ ಪರಿವರ್ತಿತ ಮನೋಭಾವ ಎಂದಿನ ವ್ಯಕ್ತಿಗಿಂತ ಬೇರೆಯೇ ಆಗಿ ಬದುಕನ್ನು ಸವಿ ಎಂದು ಅವಳನ್ನು ಆಮಂತ್ರಿಸಿತ್ತು.

ಅವಳು ಕ್ಯೂನಲ್ಲಿ ನಿಂತಿದ್ದಾಗ ಅಕ್ಕಪಕ್ಕದವರ ಬೆವರಿನ ವಾಸನೆಗೆ ಅವಳ ಹೃದಯವೇ ಬಾಯಿಗೆ ಬಂದಂತಾಯಿತು. ಅವಳಿಗರಿವಿಲ್ಲದೆಯೇ ಸೆಂಟಿನ ವಾಸನೆಯ ಅವಳ ಕರವಸ್ತ್ರ ಮೂಗಿನ ಹತ್ತಿರ ಹೋಯಿತು. ಮೊದಲಿನಿಂದಲೂ ಅವಳಿಗೆ ಸೆಂಟಿನ ಶೋಕಿ ಇತ್ತು. ಆದರೆ ಈಗ ಆ ಶೋಕಿ ಅವಶ್ಯಕತೆಯಾಗಿ ಪರಿಣಮಿಸಿತ್ತು.

ಅಷ್ಟರಲ್ಲಿ ಬಸ್ಸು ಬಂತು. ಹೊರಗಿನ ಎಲ್ಲ ದೃಶ್ಯಗಳನ್ನು ನೋಡಬಹುದೆಂದು ಕಿಟಕಿಯ ಪಕ್ಕದಲ್ಲಿ ಕೂರಲು ಬಯಸಿದ ಅವಳು ಬಸ್ಸನ್ನು ಹತ್ತುತ್ತಿದ್ದಂತೆ ಒಬ್ಬ ಪ್ರೌಢ ಹೆಂಗಸನ್ನು ತಳ್ಳಿಕೊಂಡು ಹೋಗಿ ಕಿಟಕಿಯ ಪಕ್ಕದ ಸೀಟನ್ನು ಗಿಟ್ಟಿಸಿದಳು. ಆ ಹೆಂಗಸು ಅವಳನ್ನು ದುರುಗುಟ್ಟಿ ನೋಡಿದಳು. ಆದರೆ ತತ್‌ಕ್ಷಣವೇ ಅವಳು ಮುಖದಲ್ಲಿ ನಗುವನ್ನು ಸೂಸಿ ಕುಳಿತಳು. ಬಸ್ಸಿನ ಎದುರಿಗೇ ಇರುವ ಬೀಡಾ ಅಂಗಡಿಯಲ್ಲಿ ಜೋರಾಗಿ ಟ್ರಾನ್ಸಿಸ್ಟರ್ ಹಾಡುತ್ತಿತ್ತು. ಈ ರೀತಿಯ ಗೌಜು-ಗದ್ದಲದ ರಿಕಾರ್ಡೆಂದರೆ ಅವಳಿಗೆ ಸುತರಾಂ ಆಗುತ್ತಿರಲಿಲ್ಲ. ಆದರೆ ಇವತ್ತು ಮನಸ್ಸಿಗೆ ಖುಷಿ ಆಗುವಂತಹ ಹಳೆಯ ಹಾಡೊಂದು ಬರುತ್ತಿದ್ದುದರಿಂದ ಇಷ್ಟವಾಯಿತು. ಅವಳಿಗರಿವಿಲ್ಲದೆ ಅವಳೂ

೧೯೮೩ನೇ ಇಸವಿ ಜನವರಿ ತಿಂಗಳ ನವನೀತದಲ್ಲಿ ಪ್ರಕಟವಾದ ಖುತಾಶ್ರೀ ಅವರ ಅವರ 'ರೋಜ್ ರಹೀ ಹೂಂ, ಕಹಾಂ ಹೊ ತುಮ್...' ಕತೆಯ ಭಾವಾನುವಾದ.

ಅವರೊಂದಿಗೆ ಗುನುಗುಟ್ಟತೊಡಗುತ್ತಿದ್ದಂತೆಯೇ ಕುಲುಕಾಡುತ್ತ ಬಸ್ಸು ಹೊರಟಿತು. ಗಾಳಿಯಲ್ಲಿ ತೇಲುತ್ತ ಸ್ವರ ಮಂದವಾಗುತ್ತ ಹೋಗಿದ್ದರೂ ಇನ್ನೊಂದು ಕಡೆಯೂ ಅದೇ ಹಾಡು ಬರುತ್ತಿದ್ದುದರಿಂದ ಅವಳಿಗೆ ಹಾಡನ್ನು ಪೂರ್ತಿಯಾಗಿ ಕೇಳಲು ಸಾಧ್ಯವಾಯಿತು.

ಅವಳ ಮನೆಯಿಂದ ಪೇಟೆಗೆ ಬೇಕಷ್ಟು ಸಂಪರ್ಕ ಸಾಧನಗಳಿದ್ದಾಗ್ಯೂ ಆ ಪರಿಸರ ಶಾಂತವಾಗಿತ್ತು. ದಾರಿಯ ಇಕ್ಕೆಲಗಳಲ್ಲೂ ದೊಡ್ಡ ದೊಡ್ಡ ಬಂಗಲೆಗಳು. ಕೆಲವರು ತಮ್ಮ ವಾಸಕ್ಕಾಗಿ ಕಟ್ಟಿಕೊಂಡವು. ಕೆಲವು ಆಧುನಿಕ ರೀತಿಯಲ್ಲಿ ಸುಸಜ್ಜಿತಗೊಂಡು ಹೆಚ್ಚಿನ ಬಾಡಿಗೆ ತರುವಂಥವು. ನಗರದಿಂದ ದೂರವಿದ್ದ ಕಾರಣ ಹಬ್ಬಹರಿದಿನಗಳಲ್ಲಿ ಹಿಂದೂಗಳು ಮಾಡುವ ಗೌಜು-ಗದ್ದಲಗಳು ಕೇಳುತ್ತಿರಲಿಲ್ಲ. ನಗರದಿಂದ ಸಾಮಾನುಗಳನ್ನು ತೆಗೆದುಕೊಂಡು ಬರುತ್ತಿರುವವರ ಗುಂಪುಗಳನ್ನು ಕಾಣಬಹುದಿತ್ತು. ಬೆಳಗ್ಗೆ ಮತ್ತು ಸಂಜೆ ಹಾಲಿನ ಬಾಟಲಿಗಳನ್ನು ಸೈಕಲ್ಲಿಗೆ ತಗುಲಿಸಿಕೊಂಡು ಟ್ರಿನ್, ಟ್ರಿನ್ ಎಂದು ಗಂಟೆ ಬಾರಿಸುತ್ತ ಅವಸರವಸರವಾಗಿ ಹೋಗುವ ಹಾಲಿನವರನ್ನು ಕಾಣಬಹುದಿತ್ತು.

ಇವತ್ತು ಅವಳು ಎಲ್ಲವನ್ನೂ ಬಿಟ್ಟಕಣ್ಣಿನಿಂದ ನೋಡುತ್ತಿದ್ದಾಳೆ, ಸಾಮಾನ್ಯರ ಬದುಕಿನ ಈ ಭೂಮಿ ಎಷ್ಟು ಧೂಳಿನಿಂದ ತುಂಬಿದೆ, ಕಸಕಡ್ಡಿಗಳಿಂದ ಆವೃತವಾಗಿದೆ. ಅಲ್ಲಿ ಇಡುವ ಒಂದೊಂದು ಹೆಜ್ಜೆಯೂ ಎಷ್ಟು ಕೋಮಲ ಕಠೋರವಾಗಿರಬೇಕು ಎನ್ನುವುದನ್ನು ಒಂದು ಮಗುವನ್ನು ಬಗಲಲ್ಲಿ ಇರುಕಿಕೊಂಡು, ಇನ್ನೊಂದರ ಕೈಹಿಡಿದು, ತಲೆಯಲ್ಲಿ ಸಾಮಾನಿನ ಬುಟ್ಟಿಯೊಂದನ್ನು ಹೊತ್ತಿರುವ ಹಳ್ಳಿಯ ಹೆಂಗಸೊಬ್ಬಳ ಕಡೆ ಅವಳ ಲಕ್ಷ್ಯ ಹರಿಯಿತು. ಎತ್ತರಕ್ಕೆ ಕಟ್ಟಿದ ಪಂಚೆ, ಅಂಗಿ, ಪಾಗಡ ಧರಿಸಿರುವ ರೈತರು ಮಾತಾಡುತ್ತ ಹಾದುಹೋದರು. ತನ್ನ ಬಂಗಲೆಯ ಎದುರಿನ ರಸ್ತೆಯ ಆಚೆ ಇರುವ ಹೆಂಗಸರು ಸಾಮಾನ್ಯವಾಗಿ, ಅಲಂಕಾರ ಮಾಡಿಕೊಂಡು ತಮ್ಮ ಗಂಡಂದಿರಿಗಾಗಿ ಕಾಯುತ್ತ ನಿಲ್ಲುವುದನ್ನು ಕಂಡಿದ್ದಳು. ಹೀಗೆ ಬಂಗಲೆಯಲ್ಲಿರುವ ಎಷ್ಟೋ ಜನರ ಅಂತರಂಗದ ಪರಿಚಯವಿದ್ದ ಅವಳಿಗೆ ಆ ಹೊರಗಿನ ಬೆಡಗು-ಬಿನ್ನಾಣಗಳಿಂದ ತುಂಬಿದ ಅವರ ಬದುಕಿನ ಒಳಗು ಎಷ್ಟೊಂದು ಪೊಳ್ಳು ಮತ್ತು ವಿಚಾರಹೀನವಾದದ್ದೆಂಬುದರ ಅರಿವಾಯಿತು.

ಸ್ಟೇಷನ್ನಿನ ಹತ್ತಿರದ ಸ್ಟಾಪಿನಲ್ಲಿ ಬಸ್ಸು ಹೆಚ್ಚು ಹೊತ್ತು ನಿಂತಿತು. ಆ ಸ್ಟಾಪಿನ ಎದುರಿಗೆ ಒಂದು ಹಾಳು ಮೈದಾನ. ಅಲ್ಲೊಂದು ದೊಡ್ಡ ಅರಳಿಮರ.

ಅದರ ನೆರಳಲ್ಲಿ ಮನೆಮಾರುಗಳಿಲ್ಲದ ಕೆಲವು ಹೆಂಗಸರು ತಮ್ಮ ತಮ್ಮ ಒಲೆಗಳನ್ನು ಉರಿಸುತ್ತಿದ್ದರು. ಅವಳಿಗೆ ತನ್ನ ಗಂಡನ ಜೊತೆ ಮೊದಲಬಾರಿಗೆ ಈ ನಗರಕ್ಕೆ ಬಂದ ನೆನಪಾಯಿತು. ಸ್ಟೇಶನ್ನಿನ ಹತ್ತಿರದ ಹೋಟೆಲೊಂದರಲ್ಲಿ ಅವರು ಇಳಿದುಕೊಂಡಿದ್ದರು. ಆಗ ಅವಳಿಗೆ ಉಷಾರಿಲ್ಲದ್ದರಿಂದ ಊಟವನ್ನು ಕೊಡುತ್ತಿರಲಿಲ್ಲ. ಆಗೆಲ್ಲ ಅವಳು ದಿನದ ಹೆಚ್ಚು ಸಮಯವನ್ನು ಕಿಟಕಿಯ ಹತ್ತಿರ ಕುಳಿತು, ಅವರ ಅಡಿಗೆ, ಊಟ, ಸಂತೃಪ್ತತೆಯನ್ನು ನೋಡುವುದರಲ್ಲೇ ಕಳೆಯುತ್ತಿದ್ದಳು. ದೊಡ್ಡ ದೊಡ್ಡ ರೊಟ್ಟಿಗಳನ್ನು ಕೈಯಲ್ಲೇ ತಟ್ಟಿ ಕಾವಲಿಯ ಮೇಲೆ ಹಾಕುತ್ತಿದ್ದುದನ್ನು ನೋಡುತ್ತಿದ್ದಂತೆ ಅವಳ ಹಸಿವು ಜಾಗೃತವಾಗುತ್ತಿತ್ತು. ಆಗ ಅವಳಿಗೆ ಅಂತಹ ಒಂದು ರೊಟ್ಟಿಯನ್ನು ಕೈಯಲ್ಲಿ ಹಿಡಿದು ಉಪ್ಪು, ಖಾರದೊಂದಿಗೆ ತಿನ್ನಬೇಕೆನಿಸುತ್ತಿತ್ತು. ಪಕ್ಕದಲ್ಲಿ ಚಿಂದಿಬಟ್ಟೆಯಲ್ಲೇ ನಿದ್ರಿಸುತ್ತಿದ್ದ, ಅವರ ಮಕ್ಕಳನ್ನು ಕಂಡು ಮನಸ್ಸನ್ನು ಕ್ಷುಬ್ಧಗೊಳಿಸುವಂತಹ ಪ್ರಶ್ನೆಗಳೇಳುತ್ತಿದ್ದವು; ಇದೇ ರೀತಿ ಇಲ್ಲಿ ಬೆಳೆದೂ ಇವರು 'ಮನುಷ್ಯ'ರಾಗಬಹುದೆ? ಇವರಿಗೆ ಬದುಕಿನ ದ್ವಂದ್ವ ಸ್ಥಿತಿಗಳ ಬಗ್ಗೆ ಅರಿವಿಲ್ಲವೆ? ಶಿಕ್ಷಣ, ಸಂಸ್ಕೃತಿ, ಸಭ್ಯತೆಗಳು ಇವರಿಗಾಗಿ ಹುಟ್ಟಿಲ್ಲವೆ? ಇಲ್ಲ ಇಲ್ಲ ಆದರೆ ಅವಳಿಗೆ ಅನ್ನಿಸಿತ್ತು—ಅವರಿಗೆ ಅವರದೇ ಆದ ಸಭ್ಯತೆ ಇದೆ; ಒಂದು ಸಂಸ್ಕೃತಿ ಇದೆ; ಶತಶತಮಾನಗಳಿಂದಲೂ ಒಂದು ಗಾಡಿಯಲ್ಲಿ ತಮ್ಮ ಸಂಸಾರವನ್ನು ತುಂಬಿಕೊಂಡು ಅಲ್ಲಿ ಇಲ್ಲಿ ಅಂತ ಹಳ್ಳಿ-ಪಟ್ಟಣಗಳ ಹಾಳು ಜಾಗಗಳಲ್ಲಿ ಬದುಕನ್ನು ಸವೆಸುವ ಕಟ್ಟುಪಾಡು ಅವರದು. ಲೋಹಗಳಿಂದ ಆಯುಧಗಳನ್ನು ಮಾಡುತ್ತಿರುವ ಇವರು, ಇವರ ಹೆಂಗಸರು, ಮಕ್ಕಳು ಇವರಲ್ಲೆಲ್ಲ ಅವರದೇ ಆದ ಸಭ್ಯತೆ ಇದೆ....! ಅವರ ಸುಖ ಸಂತೋಷಗಳ ಸಂವೇದನೆ ತನ್ನಲ್ಲೂ ಉಂಟಾಗಲಿ ಎಂದು ಅವಳು ಎಷ್ಟೋಬಾರಿ ಹಾರೈಸಿದ್ದಳು: ಯಾವಾಗಲೂ ಚೆಂದದ ಬಂಗಲೆಯಲ್ಲೇ ಇರುವ ಅವಳ ಮನಸ್ಸನ್ನು ಯಾವುದೋ ಒಂದು ಚಿರಂತನವಾದ, ಆಳವಾದ ನೋವು ಚುಚ್ಚುತ್ತಿತ್ತು. ಆ ನೋವು ಯಾತರದು? ಆ ನೋವಿನ ಮೂಲ ಯಾವುದು....? ಇಂದಿನವರೆಗೂ ಅವಳಿಗೆ ಅದಕ್ಕೆ ಉತ್ತರವನ್ನು ಕಂಡುಕೊಳ್ಳಲಾಗಿಲ್ಲ.

ಇದ್ದಕ್ಕಿದ್ದಂತೆಯೇ ಅವಳ ಯೋಚನಾಲಹರಿ ಕಡಿಯಿತು. ಕಾರಣ, ಯಾವುದೋ ಆಕಸ್ಮಿಕವನ್ನು ತಪ್ಪಿಸಲು ಡ್ರೈವರ್ ಜೋರಾಗಿ ಬ್ರೇಕ್ ಹಾಕಿದ್ದ. ಆದರಿಂದಾಗಿ ಎಲ್ಲ ತಲೆಯೂ ಜಪ್ಪಿತು; ಬಸ್ಸೂ ನಿಂತಿತು: ಅವಳ ಉಸಿರೂ ನಿಲ್ಲುವಂತಾಯಿತು. 'ಯಾರೋ ಕೆಳಗೆ ಸಿಕ್ಕಿಹಾಕಿಕೊಂಡರೆ....? ಒಂದು

ಹಗರಣವೇ ಆಗುವುದರಲ್ಲಿತ್ತು....' 'ಸತ್ತ್ಯ ಬದುಕಿದ ಅದೃಷ್ಟವಂತ!' ಅದನ್ನು ಕೇಳಿದ ಅವಳು ನೆಮ್ಮದಿಯಿಂದ ಉಸಿರಾಡಿದಳು. ಎದುರುಗಡೆ ಆಕಾಶದಲ್ಲಿ ಕುಂಕುಮದ ಓಕುಳಿ ಚೆಲ್ಲಿರುವುದನ್ನು ನೋಡಿದ ಅವಳು, ಇನ್ನು ಕೆಲವೇ ಕ್ಷಣಗಳಲ್ಲಿ ಈ ಕೆಂಪು ಛಾಯೆ ಕತ್ತಲೆಯಲ್ಲಿ ಕರಗಿಹೋಗುತ್ತದೆ. ಭೂವ್ಯೋಮಾಕಾಶಗಳಲ್ಲಿ ಈ ಬಣ್ಣದ ಗುರುತೂ ಇರದು. ತನ್ನ ಬದುಕಿನಂತೆಯೇ ಎಲ್ಲವೂ ಕತ್ತಲೆಯ ಗರ್ಭದಲ್ಲಿ ಕಾಣದಂತೆ, ತಿಳಿಯದಂತೆ ಅಡಗಿಹೋಗುತ್ತವೆ....! ಎಂದುಕೊಂಡಳು. ಅವಳು ಆನಂದದಿಂದಲೇ ಬದುಕನ್ನು ಪ್ರಾರಂಭಿಸಿದ್ದರೂ ಈ ಕಪ್ಪು ನೆರಳು ಯಾವಾಗ ಬಂತು ಎನ್ನುವುದೇ ಅವಳಿಗೆ ಗೊತ್ತಿಲ್ಲ. ಆಗೆಲ್ಲ ಅವಳ ಕನಸುಗಣ್ಣುಗಳಲ್ಲಿ ಪ್ರಭಾತದ ಬೆಳಕು ಮಿನುಗುತ್ತಿತ್ತು....ಆದರೆ ಇಂದು.

ನಾ ನಿಂದು ಒಬ್ಬಂಟಿ ಈ ದಾರಿಯಲ್ಲಿ
ಅದೆಂತಹ ಅದ್ಭುತ ಅದನ್ನು ಚೇತನವಿತ್ತೋ ಬಾಳ ಮುಂಜಾವಿನಲ್ಲಿ
ಮೆಲ್ಲನೆ ವಿಲೀನವಾಗುತಿವೆ ಇಂದು
ಆ ಪ್ರಕಾಶ ಈ ಅಂಧಕಾರಗಳು ಒಂದರೊಡನೊಂದು
ಹುಡುಕುತಿದೆ ಇಂದಿನದು ಅಂದಿನ ಆ ಪ್ರಭಾತವನು
ಆಲಿಸುತಿರುವೆ ನಾ ನಿರ್ಭಾಷೆಯ ಕತ್ತಲೆಯ ಸದ್ದನ್ನು ಮೌನಿಯಾಗಿ

ಒಮ್ಮೆಲೇ ಬೀಸಿದ ಶೀತಗಾಳಿಗೆ ಅವಳ ಮೈ ಕಂಪಿಸಿ ಕಣ್ಣಲ್ಲಿ ನೀರು ತುಂಬಿತು! ಅವಳಿಗೆ ಇಂತಹುದೇ ಒಂದು ಸಂಜೆಯ ನೆನಪಾಯಿತು. ಆಗವಳು ತನ್ನ ಆತ್ಮೀಯ ಗೆಳತಿಯೊಂದಿಗೆ ಮೆಟ್ಟಿಲ ಮೇಲೆ ಕುಳಿತಿದ್ದಳು. ಮುಳುಗುತ್ತಿರುವ ಸೂರ್ಯನ ಹೊಂಬಣ್ಣದ ಛಾಯೆಯನ್ನು ನೋಡುತ್ತ ಗೆಳತಿ ಕೇಳಿದ್ದಳು; 'ಪ್ರೇಮ ತನ್ನ ದಾರಿಯನ್ನು ತಾನೇ ಯಾಕೆ ಕಂಡುಕೊಳ್ಳೋದಿಲ್ಲ ಅನ್ನೋದನ್ನ ಹೇಳ್ತೀಯಾ?' ದುಗುಡದಿಂದ ತುಂಬಿದ ಗಂಭೀರವಾದ ಮೌನವೇ ಅದಕ್ಕುತ್ತರವಾಗಿತ್ತು.

ಆ ಬಯಲು ಆಗಸವನ್ನು ಹಿಂದೆಯೇ ಬಿಟ್ಟು ಬಸ್ಸು ಮುಂದುವರಿಯುತ್ತಿತ್ತು. ಯಾವುದೇ ಸದ್ದು-ಗದ್ದಲವಿಲ್ಲದೆ ರಸ್ತೆ ಶಾಂತವಾಗಿತ್ತು. ಇನ್ನು ಕೆಲವೇ ಹೊತ್ತಿನಲ್ಲಿ ಈ ಪ್ರಶಾಂತತೆ ಗದ್ದಲವಾಗಿ ಮಾರ್ಪಾಡಾಗಿ ಈ ತಂಗಾಳಿಯಾಗಲಿ ಬಸ್ಸಿನ ವೇಗವಾಗಲಿ ಇರಲಾರದು. ಅವಳಿಗೆ ವೇಗದ ಪಯಣವೆಂದರೆ ಬಲು ಇಷ್ಟ. ಅವಳ ಬಯಕೆಯೂ ಇಷ್ಟೆ–ಈ ಪಯಣ ಆ ಪಯಣದಲ್ಲಿ ಲೀನವಾಗಲಿ, ಈ ಚೇತನ ಆ ಮಹಾಚೇತನದಲ್ಲಿ ಒಂದಾಗಲಿ.

ದೂರದಲ್ಲಿ ನಗರದ ಅಸಂಖ್ಯಾಂತ ದೀಪಗಳು ಕಾಣಿಸಿಕೊಳ್ಳುತ್ತಿದ್ದಂತೆಯೇ ಬಸ್ಸು ನಿಂತಿತು! ಯಾರೋ ಹಳ್ಳಿಯ ಹೆಂಗಸರು ಒಂದು ಹಿಂಡು ಮಕ್ಕಳೊಂದಿಗೆ ಬಸ್ಸನ್ನು ಹತ್ತಿ, ಧಪ್ಪೆನ್ನುತ್ತ ಕೆಳಗೇ ಕಾಲುಚಾಚಿ ಕುಳಿತರು. ಅವರ ಕಾಲುಗಳತ್ತ ಅವಳ ದೃಷ್ಟಿ ಹರಿಯಿತು. ಎಷ್ಟೊಂದು ಒಡಕು, ಏನು ಧೂಳು! ಕಾಲಿಗೆ ಹಾಕಿಕೊಂಡಿರುವ ಗಿಲೀಟಿನ ಕಡಗಗಳ ಕಿಕ್ಕಾಟದಿಂದ ಕಾಲು ಕಪ್ಪಾಗಿದ್ದವು. ದಿನವಿಡೀ ಕೂಲಿ ಕೆಲಸ ಮಾಡಿ ದಣಿದ ಅವರು ಇಲ್ಲೇ ಬೇಕಾದರೂ ಮೈಮರೆತು ನಿದ್ರಿಸಬಲ್ಲರು! ಆದರೆ ಅವಳು ಎಂದೂ ಮೈಮರೆತು ನಿದ್ರಿಸಿದ ನೆನಪಿಲ್ಲ. ಕತ್ತಲೆಯ ದಾರಿಯಲ್ಲಿಯೂ ಹಿಂದಿರುಗುತ್ತಿರುವ ಅವರ ನಿರ್ಭಯ ಮುಖದಲ್ಲಿ ಯಾವುದೇ ಆತಂಕವಾಗಲಿ, ಗತಿಯಿಲ್ಲದವರೆಂಬ ವ್ಯಥೆಯಾಗಲಿ ಇಲ್ಲ.

ಇಂತಹ ಜನರ ಮನೆಗಳಲ್ಲಿ ಮಿಣುಮಿಣೆನ್ನುವ ದೀಪ ಮತ್ತು ಉರಿಯುತ್ತಿರೋ ಒಲೆಗಳಿಂದ ಏಳುತ್ತಿರೊ ಹೊಗೆ ಇವುಗಳ ಬಗ್ಗೆ ಅವಳ ಮನದಲ್ಲಿ ಅತೀವ ಮೋಹ ಉಂಟಾಗುತ್ತಿತ್ತು. ಅವರಿಗೂ ಬೇಕಷ್ಟು ಕಷ್ಟ ಇದ್ದಿರಬಹುದು. ಆದರೆ ಅದನ್ನು ಅರ್ಥಮಾಡಿಕೊಳ್ಳಬೇಕೆಂಬಅಭಿಲಾಷೆ ಅವರಲ್ಲಿಲ್ಲ.... ಯಾರಿಗೆ ಗೊತ್ತು?

ಮುಂದಿನ ಸ್ಟಾಪಿನಲ್ಲಿ ಹತ್ತಿದ ಸುಂದರ ಯುವ ಜೋಡಿ ಅವಳ ಲಕ್ಷ್ಯವನ್ನು ಸೆಳೆದರು.

ಯಾರೂ ಇಳಿಯದಿದ್ದರೂ ಇರುವ ಸ್ವಲ್ಪ ಜಾಗದಲ್ಲೇ ಇಬ್ಬರೂ ಮುದುರಿ ಕುಳಿತರು. ಆ ಯುವತಿಯ ಚಂದದ ಮುಖದಲ್ಲಿದ್ದ ವಿಷಾದದ ಛಾಯೆ ಕಂಡ ಅವಳಿಗೆ ಆಕೆಯ ಬಗ್ಗೆ ಆತ್ಮೀಯ ಭಾವ ಸ್ಫುರಿಸಿತು. ಯಾಕವಳಿಗೆ ಯುವತಿಯ ಮುಖವನ್ನು ತನ್ನೊಂದಿಗೆ ಹೋಲಿಸುವಂತಾಯಿತೋ! ಈ ಇಬ್ಬರಲ್ಲಿ ಯಾವುದೋ ಸಂಬಂಧದ ಎಳೆ ಸೇರಿಕೊಂಡಿರಬಹುದೆ! ಅವಳು ಆ ಯುವಕನ ಕಡೆ ನೋಡಿದಳು....ಚೆಲುವಾದ ಬಲಿತ ಮುಖದಲ್ಲಿ ಏನನ್ನೋ ಕಳೆದುಕೊಂಡ ಭಾವ. ತುಸು ಉಬ್ಬಿದ ಗಲ್ಲ ಮಗುವಿನ ಮುಗ್ಧತೆಯನ್ನು ಪ್ರದರ್ಶಿಸುತ್ತಿತ್ತು. 'ಈ ಸಂಬಂಧ ಮಧುವಿನಂತೆ ಸವಿ ಅಥವಾ ಜೇಳಿನ ಕೊಂಡಿಯಂತೆ ವಿಷ. ಆಸಕ್ತಿಯಿಂದ ತಬ್ಬಿಕೊಳ್ಳಲೂಬಹುದು; ಅಥವಾ ವಿಷಮತೆಗೆ ತಳಮಳಿಸಲೂ ಬಹುದು....' ಅವಳ ಯೋಚನೆ ಮುಂದುವರೆಯಿತು. ಗಂಡು-ಹೆಣ್ಣಿನ ಈ ಸಾಮಾಜಿಕ ಸಂಬಂಧ ಎಷ್ಟು ಅನಿಶ್ಚಿತವಾದದ್ದೋ ಅಷ್ಟೇ ಬಿಗಿಯಾದದ್ದೂ ಕೂಡ.ಇದರಲ್ಲಿ ಪ್ರವೇಶಿಸದವನು ಒಬ್ಬಂಟಿಗ ಅನ್ನಿಸಿಕೊಂಡರೆ ಪ್ರವೇಶಿಸಿದವನು

ಉಳಿದ ಸಂಬಂಧಗಳನ್ನು ಕಳೆದುಕೊಳ್ಳುತ್ತಾನೆ.

ಪೇಟೆ ಹತ್ತಿರವಾಗುತ್ತ ಬಂತು. ಬಸ್ಸು ತರಕಾರಿ ಮಾರುಕಟ್ಟೆಯ ಮಾರ್ಗದಲ್ಲಿ ಮುಂದುವರಿಯುತ್ತಿದೆ. ಈ ಮಾರುಕಟ್ಟೆಯ ಒಂದು ಭಾಗದಲ್ಲಿ ಮಾಂಸ-ಮೀನುಗಳನ್ನು ಮಾರುತ್ತಿದ್ದಾರೆ. ಆ ವಾಸನೆ ಬಂದರೆ ಅವಳಿಗೆ ವಾಕರಿಸುವಂತಾಗುತ್ತಿತ್ತು.... ಆ ದುರ್ಗಂಧ ಸಹಿಸೋದೆ ಕಷ್ಟವಾಗಿದ್ದರೂ ಜನ ಅದನ್ನೇ ಎಷ್ಟು ರುಚಿ ಅಂತ ತಿನ್ನುವುದಿಲ್ಲವೆ? ಅವಳಿಗೆ ಈ ಜಾಗದ ಬಗ್ಗೆ ಬಹಳ ದುರಾಗ್ರಹ ಪೀಡಿತಳು. ಈ ಆಹಾರದ ವೈಚಿತ್ರ್ಯ ಕುರಿತಂತೆ ಸಹಜದೃಷ್ಟಿ ತಾಳಬೇಕೆಂದು ಎಷ್ಟೇ ಪ್ರಯತ್ನಿಸಿದ್ದರೂ ಅದರಲ್ಲಿ ಅವಳು ಯಶಸ್ವಿಯಾಗಿರಲಿಲ್ಲ.

ತರಕಾರಿ ಮಾರುಕಟ್ಟೆಯಿಂದ ಬಸ್ಸು, ಗೌರವಸ್ಥ ಬೊಹರಾ ಕುಟುಂಬಗಳು ವಾಸಿಸುವ ದೊಡ್ಡದೊಡ್ಡ ಬಂಗಲೆಗಳಿರುವ ರಸ್ತೆ ಪ್ರವೇಶಿಸಿತು. ಈ ಬೊಹರಾ ಜನಗಳು ಭಾಷೆ ಮತ್ತು ಆಲೋಚನೆಯಲ್ಲಿ ತಮ್ಮ ಧರ್ಮದ ಇತರರಿಗಿಂತ ಸ್ವಲ್ಪ ಭಿನ್ನತೆಯುಳ್ಳವರು. ಅವರ ರೂಪ-ಬಣ್ಣಗಳೇ ಈ ವ್ಯತ್ಯಾಸವನ್ನು ಪರಿಚಯಿಸುತ್ತವೆ.

ಸ್ವಲ್ಪ ಎತ್ತಿದ ಮೂಗು, ಎತ್ತರದ ಹಣೆ, ಹಳದಿ ಮಿಶ್ರಿತ ಬಿಳುಪಿನ ನಿಶ್ಚಲ ಮುಖ ಭಾವ. ತೆರೆದ ಟೆಂಪೋದಲ್ಲಿ ಓಡಾಡುತ್ತಿರುವ ಬುರಕಾ ಧರಿಸಿದ ಹೆಂಗಸರು, ಹಲವಾರು ಕಮೀಜ್ ತೊಟ್ಟ ಹುಡುಗಿಯರು. ಅವರು ಆಡುವ ಮಾತು ಅಷ್ಟೊಂದು ಸ್ಪಷ್ಟವಲ್ಲ. ಅವರಲ್ಲಿ ಮತಾಂಧರು ಕಡಿಮೆ. ತಮ್ಮ ಘನಯೋಗ್ಯತೆಗೆ ತಕ್ಕವರೊಂದಿಗೆ ಮಾತ್ರ ವೈವಾಹಿಕ ಸಂಬಂಧ ಬೆಳೆಸುತ್ತಾರೆ. ಹಾಗಾಗಿ ಹುಡುಗಿಯರ ಮದುವೆ ವಯಸ್ಸು ಏರುತ್ತಿದೆ. ಅಲ್ಲೊಬ್ಬರು ಇಲ್ಲೊಬ್ಬರು ಮದುವೆಯಾಗದ ಹುಡುಗಿಯರೂ ಇದ್ದಾರೆ. ಅವರ ಬದುಕಿನ ಬಗ್ಗೆ ಸರ್ವೆ ಮಾಡುತ್ತಿರುವ ಅವಳ ಗೆಳತಿಯೊಬ್ಬಳು ಇವನ್ನೆಲ್ಲಾ ತಿಳಿಸಿದ್ದಳು.

ಮುಚ್ಚಿದ ಕಿಟಕಿಯ ಒಳಗಿರುವ ಬಂಗಲೆಯ ಶ್ರೀಮಂತಿಕೆಯನ್ನು ನೋಡಿದಳು... ಇವರುಗಳಲ್ಲಿ ಎಷ್ಟು ಜನ ಏಕಾಕಿತನದ ಬದುಕನ್ನು ನಿರುದ್ದಿಶ್ಯವಾಗಿ ಸವೆಸುತ್ತಿರಬಹುದು! ಅವರಿಗೂ ತಮ್ಮದೇ ಆದ ಕಥೆ-ವ್ಯಥೆಗಳಿರಬಹುದು. ಆದರೆ ಮರ್ಯಾದೆಯ ಮುಸುಕಿನಲ್ಲಿ ಬಂಧಿಸಲ್ಪಟ್ಟ ಹೃದಯ ಅವುಗಳನ್ನು ಪ್ರಕಟಗೊಳಿಸುವ ಸಾಹಸವನ್ನು ಮಾಡದೆ ಇರಬಹುದು.

ಪೇಟೆಗೆ ಬಂದಾಗಿತ್ತು. ಎಲ್ಲೆಲ್ಲೂ ಥಳಕು ಬಳುಕು. ಎಲ್ಲ ಬಗೆಯ ಜನ, ಎಲ್ಲ ವಸ್ತುಗಳ ವ್ಯಾಪಾರಿಗಳೂ ಅಲ್ಲಿದ್ದರು. ಎಲ್ಲ ತರಹದ ಗಿರಾಕಿಗಳೂ ಅಲ್ಲಿಗೆ

ಧಾವಿಸುತ್ತಿದ್ದರು.... ಅವಳಿಗೆ ಏನನ್ನೂ ಕೊಳ್ಳಬೇಕಾಗಿರಲಿಲ್ಲ....ಅವಳು ಒಂದು ಪ್ರಯಾಣಕ್ಕಾಗಷ್ಟೆ ಹೊರಟಿದ್ದಳು....ಇಂತಹ ಪ್ರಯಾಣವನ್ನು ಅವಳು ಎಷ್ಟೋ ಬಾರಿ ಮಾಡಿದ್ದಳು....ಯಾಕಾಗಿ, ಏನನ್ನು ಹುಡುಕಲಿಕ್ಕೆ? ಅದು ದುರ್ಲಭವಾದದ್ದಾದರೂ ಯಾಕೆ....? ಹುಡುಕುತ್ತಿದ್ದೇನೆ....ಇನ್ನೂ ಹುಡುಕುತ್ತಲೇ ಇದ್ದೇನೆ.

ಕೆ. ಎಸ್. ಚಂದ್ರಮತಿ



ವಿಕಾಸವಾದ

ಮುಸಿಯುತಿಹ ಮತ್ಸರದ ನೆರೆಯೊಳಿರುವುದಕ್ಕಿಂತ ಹಸನವಿಲ್ಲದ ಹಾಳು ಗುಡಿಯೆ ಲೇಸು.

ಕೇಡು ನೆನೆಯಬೇಡ ನಂಬಿದವರ ಮೇಲೆ, ಕೆಡುವೆ ನೀನ್ ಎಚ್ಚರಿಕೆ.

—ಕನಕದಾಸರು

ದೇವರಲ್ಲಿ, ನೆರೆಯುವರಲ್ಲಿ ಇರುವ ಪ್ರೀತಿಯಿಂದ ದೊರೆವ ಸುಖವೇ ಜೀವನ.

—ಟಾಲ್‌ಸ್ಟಾಯ್

ಕೆಟ್ಟದ್ದನ್ನು ಅನುಸರಿಸುವುದಕ್ಕಿಂತ ಒಳ್ಳೆಯ ಮೇಲ್ಪಂಕ್ತಿ ಹಾಕುವುದು ಗೌರವಾರ್ಹ.

—ಥಾಮಸ್‌ಜಫರ್‌ಸನ್

ಪ್ರಾಮಾಣಿಕವಾದ ರೀತಿಯಲ್ಲಿ ಸಂಪಾದಿಸಿದ ಆಸ್ತಿ ಎಲ್ಲ ಗೌರವಕ್ಕೆ ಅರ್ಹವಾದದ್ದು. ಆಕಸ್ಮಿಕದಿಂದ ಗಳಿಸಿದ ಆಸ್ತಿಗೆ ಗೌರವ ಸಲ್ಲದು.

—ಡಬ್ಲ್ಯು. ಆರ್. ಇಂಗ್

ಹೈಚೆಂಗಿನಲ್ಲೊಂದು ಪವಾಡ

ಸ್ಥಳ, ಚೀನದ ಲಿಯಾವೋನಿಂಗ್ ಪ್ರಾಂತದ ಜನಭರಿತ ಜಿಲ್ಲೆ ಹೈಚೆಂಗ್. ಕಾಲ, ೧೯೭೫ ನೆ ಇಸವಿ ಫೆಬ್ರವರಿ ನಾಲ್ಕರ ಸಂಜೆ ೭ ಘಂ. ೩೬ ನಿಮಿಷ. ಬಯಲು ಸಿನಿಮಾ ಮಂದಿರವೊಂದರಲ್ಲಿ ಚಳಿಗಾಗಿ ಬಲವಾದ ಹೊದಿಕೆ ಹೊದ್ದು ಆಕಾಶ ಛಾಯಾಚಿತ್ರ ಮುದ್ರಣ ಕಾರ್ಮಿಕಳ್ಳಾಗಿ ಇಪ್ಪತ್ತೊಂದು ವರ್ಷದ ವಯಸ್ಸಿನ ರೈತ ಮಹಿಳೆ ಲಿಹಿಂಚುವಾನ್. ಇದ್ದಕ್ಕಿದ್ದಂತೆ ಆಕಾಶದಲ್ಲಿ ಕೆಂಪು ಹಳದಿ ನೀಲಿ ಮತ್ತು ಬಿಳಿ ಬಣ್ಣದ ಬೆಳಕುಗಳು ಕಣ್ಣು ಕೋರೈಸುವಂತೆ ಪ್ರಜ್ವಲಿಸುತ್ತವೆ. ಲಿಹಿಂಚುವಾನ್ ನೆನಪಿಸಿಕೊಳ್ಳುತ್ತಾಳೆ. "ಒಂದೇ ಒಂದು ಚಣ ಅಷ್ಟೇ. ಗುಡು ಗುಡು ಸದ್ದಾಯಿತು. ನೆಲದ ಕೆಳಗೆ ಬಹು ದೊಡ್ಡ ಬುಲ್‌ಡೋಜರ್ ಕೆಲಸ ಮಾಡುತ್ತಿರುವಂತಿತ್ತು" ಬಳಿಕ ಸುತ್ತ ಬೆಂಚುಗಳ ಮೇಲೆ ಕುಳಿತಿದ್ದ ಜನರೂ ಬೆಂಚುಗಳೂ ಸಹ ಒಂದು ಮೀಟರ್ ಎತ್ತರ ನೆಲ ಬಿಟ್ಟು ಎಗರಿದುವು. "ನಾವೆಲ್ಲ ಪಕ್ಷಿಗಳ ಹಾಗೆ ಹಾರುವವರಂತೆ" ಭಾವಿಸಿದೆವು! ಸ್ಕ್ರೀನು ಒಂದು ಕಡೆಗೆ ಜೋಲಾಡತೊಡಗಿತು. ಪಿಲ್ಲರು ಮುಚ್ಚಿಗೆಗಳಾಗೆಲ್ಲ ನೆಲ ಅದರುತ್ತ, ಕೆಳ ಬೀಳುತ್ತಿದ್ದ.

ಆಕೆಯ ಸುತ್ತಲಿನವರಲ್ಲಿ ಕೆಲವರು ಮೊಣಕಾಲೂರಿ ಪ್ರಾರ್ಥಿಸುತ್ತಿದ್ದರು. ಕೆಲವರು ಪ್ರಪಂಚದ ಅಂತ್ಯ ಬಂದಿತು ಎಂದು ಕೂಗಿಕೊಳ್ಳುತ್ತಿದ್ದರು. ಇಷ್ಟು ಒಂದು ನಿಮಿಷ ಕಾಲದಲ್ಲಿ ನಡೆದುಹೋಯಿತು. ಆದರೆ ಅಲ್ಲಿದ್ದವರಿಗೆ ಅದಕ್ಕೆ ಕೊನೆಯೇ ಇಲ್ಲವೇನೋ ಎನ್ನಿಸಿತು.

ಇಂಗ್ಲಿಷ್ ಭಾಷಾಂತರಕಾರ್ತಿ ಸೆಕೆನಿಂಗ್ ಕಂಬಳಿ ತರುವುದಕ್ಕಾಗಿ ತನ್ನ ಮನೆಗೆ ಹೋಗಿದ್ದಾಗ ಇದ್ದಕ್ಕಿದ್ದಂತೆ ಮನೆಯ ಕಿಟಕಿ ಗಾಜುಗಳು ಸಿಡಿದು ಬಿದ್ದುವು. ಬೀಗ ಹಾಕಿದ ಬಾಗಿಲುಗಳು ತಮ್ಮಷ್ಟಕ್ಕೆ ತಾವೇ ತೆರೆದುಕೊಂಡುವು. ಒಂದು ಗೋಡೆ ಮನೆಯ ಒಳಪಕ್ಕಕ್ಕೆ ಕುಸಿಯಿತು. ಭೀತಿಗೊಂಡ ಸೆಕೆನಿಂಗ್ ಮನೆಯ ಹೊರಗೆ ಓಡಿಬಂದರು. ಮರುಕ್ಷಣದಲ್ಲೇ ಮೇಲ್ಛಾವಣಿಯೂ ಬಿದ್ದು ಹೋಯಿತು. ಭೂಕಂಪ ಮುನ್ನೆಚ್ಚರಿಕೆ ಸಮಿತಿಯ ಕಾರ್ಯಕರ್ತ ಕ್ವಿಯಾವೋ ಷಿಯಿಗೆ ಅಲ್ಲಿನ ಅಂಗಡಿ ಕಟ್ಟಡಗಳೆಲ್ಲವನ್ನೂ ಖಾಲಿ ಮಾಡುವ ಕೆಲಸ ವಹಿಸಲಾಗಿತ್ತು. ಆತ ನೋಡುನೋಡುತ್ತಿದ್ದಂತೆಯೇ ಒಂದು ಡಿಪಾರ್ಟ್‌ಮೆಂಟ್ ಸ್ಟೋರು ಕ್ಷಣ ಮಾತ್ರದಲ್ಲಿ ಕುಸಿದು ಕಸದ ಗುಡ್ಡೆಯ ರೂಪ ತಾಳಿತು. ಇದರಿಂದ ಆತನಿಗೆ ಭಯಕ್ಕಿಂತ ವಿಸ್ಮಯವಾಯಿತಂತೆ.

ರಿಖ್ಟರ್ ಮಾನದಲ್ಲಿ ೭.೩ ಆಳತೆಯ ಈ ಭೂಕಂಪವು ದಟ್ಟ ಜನಸಾಂದ್ರತೆಯ ಆ ಪ್ರದೇಶದಲ್ಲಿನ ಕಟ್ಟಡಗಳಲ್ಲಿ ನೂರಕ್ಕೆ ತೊಂಬತ್ತರಷ್ಟನ್ನು ನುಚ್ಚು ನೂರು ಮಾಡಿತು. ಅಲ್ಲಿ ಸಾಮಾನ್ಯ ಅಂದಾಜಿನಂತೆ ಲಕ್ಷಕ್ಕೂ ಹೆಚ್ಚು ಜನ ಸಾಯ

ಬೇಕಿತ್ತು. ಆದರೆ ಅಲ್ಲಿ ಸತ್ತವರ ಸಂಖ್ಯೆ ಸಾವಿರಕ್ಕೂ ಕಡಿಮೆ ಇತ್ತು ! ಇಂಥದೇ ದಿನ ಭೂಕಂಪ ಆಗುವುದೆಂದು ಮೊದಲೇ ಭವಿಷ್ಯ ನುಡಿಯಲಾಗಿದ್ದುದೇ ಇದಕ್ಕೆ ಕಾರಣ. ಈ ಅನಾಹುತಕ್ಕೆ ಕೇವಲ ಐದೂವರೆ ಘಂಟೆಗಳ ಮೊದಲು ಅಲ್ಲಿದ್ದ ಪ್ರತಿಯೊಂದು ಕಟ್ಟಡವನ್ನು ಖಾಲಿ ಮಾಡಬೇಕೆಂದು ಅಧಿಕಾರಿ ವರ್ಗ ಅಪ್ಪಣೆ ಹೊರಡಿಸಿತ್ತು. ಪ್ರಕೃತಿಯ ವಿವಿಧ ದುರಂತಗಳಲ್ಲಿ ಅತ್ಯಂತ ಭಯಾನಕವಾದುವೆಂದರೆ ಭೂಕಂಪಗಳು. ಚರಿತ್ರೆಯಲ್ಲಿ ಮೊಟ್ಟ ಮೊದಲ ಬಾರಿ ಇಂಥದ್ದನ್ನು ಮೊದಲೇ ತಿಳಿದುಕೊಂಡು ಭಾರೀ ಅನಾಹುತವಾಗುವುದನ್ನು ತಪ್ಪಿಸಲಾಗಿತ್ತು. ಇದನ್ನು "ಒಂದು ವೈಜ್ಞಾನಿಕ ಪವಾಡ"ವೆಂದು ಕರೆದುದು ಅತಿ ಸೂಕ್ತವಾಗಿತ್ತು.

ಈ ಪವಾಡದ ಮೂಲವನ್ನು ೧೯೬೬ ರಲ್ಲಿ ಸಂಭವಿಸಿದ ೯೦೦೦೦ ಜನರನ್ನು ಬಲಿ ತೆಗೆದುಕೊಂಡ ಕ್ಸಿಂಗ್‌ತ್ರೈ ಭೂಕಂಪದಲ್ಲಿ ಕಾಣಬಹುದು. ಆಗ ಚೀನದ ಪ್ರಧಾನಿಯಾಗಿದ್ದ ಚೌಎನ್‌ಲೈರವರು ಮುಂದೆ ಸಂಭವಿಸಬಹುದಾದ ಭೂಕಂಪಗಳನ್ನು ಪತ್ತೆ ಹಚ್ಚುವಂಥ ಸಂಶೋಧನೆಗಳನ್ನು ವಿಜ್ಞಾನಿಗಳು ತೀವ್ರಗೊಳಿಸಬೇಕೆಂದು ಆಜ್ಞಾಪಿಸಿದರು. ಇದಕ್ಕಾಗಿ ಒಂದು ದೊಡ್ಡ ಕಾರ್ಯಕ್ರಮ ಹಾಕಲಾಯಿತು. ಭೂಕಂಪ ಶಾಸ್ತ್ರ ಕಾರ್ಯಾಲಯಗಳ ಜಾಲವನ್ನು ವಿಸ್ತರಿಸಲಾಯಿತು. ಹದಿನಾರು ಪ್ರಧಾನ ವೀಕ್ಷಣಾಲಯಗಳು ಮುನ್ನೂರೈವತ್ತು ಸುಶಿಕ್ಷಿತ ವೃತ್ತಿನಿರತ ಕೆಲಸಗಾರರಿರುವ ಭೂಕಂಪಮಾಪಕ ಕಾರ್ಯಾಲಯಗಳು, ಎಡೆಬಿಡದೆ ವೀಕ್ಷಣೆ ನಡೆಸುವಂತೆ ಹತ್ತುಸಾವಿರ ವೀಕ್ಷಕರು ಕೆಲಸ ಮಾಡುವ ಸ್ಥಳೀಯ ನಾಗರಿಕರೇ ನಡೆಸುವ ಅವಶ್ಯವಾದ ಅಂಶಗಳನ್ನು ದಾಖಲೆ ಮಾಡಿಡುವ ಆರು ಸಾವಿರ ಠಾಣೆಗಳು ಇದರಲ್ಲಿದ್ದುವು. ದೀರ್ಘಾವಧಿ, ಮಧ್ಯಮ ಅವಧಿ ಅಲ್ಪಾವಧಿ ಹಾಗೂ ತತ್‌ಕ್ಷಣದ್ದು. ಹೀಗೆ ನಾಲ್ಕು ವರ್ಗದ ಮುನ್ನೆಚ್ಚರಿಕೆ ಸೂಚನೆಗಳನ್ನು ಭೂಕಂಪಶಾಸ್ತ್ರ ತಜ್ಞರು ಹೊರಡಿಸಬೇಕೆಂದು ಗೊತ್ತುಪಡಿಸಲಾಯಿತು.

ಈ ಕಾರ್ಯಕ್ರಮ ಚೀನಕ್ಕೆ ಬಹು ಅವಶ್ಯಕವಾಗಿತ್ತು. ಏಕೆಂದರೆ ಚೀನ ಭೌಗರ್ಭಿಕ ದೃಷ್ಟಿಯಿಂದ ನೋಡಿದರೆ ಭೀತಿಕಾರಕವಾದ ಅಪಾಯ ಸ್ಥಳವಲ್ಲಿದೆ. ಹಿಮಾಲಯದ ಕೆಳಗಿನಿಂದ ಉತ್ತರಕ್ಕೆ ಒತ್ತರಿಸಿಕೊಂಡುಬರುತ್ತಿರುವ ಇಂಡೋ ಆಸ್ಟ್ರೇಲಿಯನ್ ಭೂಭಾಗದ ಅಂಚು, ಪೂರ್ವದಿಂದ ತಳ್ಳುತ್ತಿರುವ ಅಗಾಧವಾದ ಪೆಸಿಫಿಕ್ ಭೂಭಾಗದ ಅಂಚು, ಉತ್ತರದಿಂದ ದಕ್ಷಿಣಕ್ಕೆ ಒತ್ತರಿಸುತ್ತಿರುವ ಯೂರೇಷಿಯನ್ ಭೂಭಾಗದ ಅಂಚು, ಈ ಮೂರೂ ಒತ್ತಡಗಳ ಮಧ್ಯೆ ಇಕ್ಕಳಕ್ಕೆ ಸಿಕ್ಕಿದಂತಿರುವ ಚೀನದ ತಳಬಂಡೆಗಳಲ್ಲಿ ಆಳವಾದ ಸೀಳುಗಳಾಗಿವೆ. ಈ ಸೀಳು

ಗಳ ಅಂಚುಗಳು ವಿರುದ್ಧ ದಿಕ್ಕುಗಳಲ್ಲಿ ತಳ್ಳಲ್ಪಡುತ್ತಿವೆ. ಕ್ರಿ. ಪೂ. ೧೧೭೭ರಲ್ಲೇ ಚೀನೀಯರು ಭೂಕಂಪ ದಾಖಲೆಗಳನ್ನಿಡಲು ಮೊದಲಿಟ್ಟರು. ಅಂದಿನಿಂದ ಇಂದಿನವರೆಗೆ ಅವರ ತಾಯಿನಾಡು ಮೂರುಸಾವಿರ ವಿನಾಶಕಾರಿ ಭೂಕಂಪಗಳಿಂದ ಘಾಸಿ ಹೊಂದಿದೆ. ಈ ಶತಮಾನದಲ್ಲೇ ನಲ್ವತ್ತೈದು ಭೂಕಂಪಗಳು ಘಟಿಸಿ ಇಪ್ಪತ್ತು ಲಕ್ಷ ಜನರನ್ನು ಆಹುತಿ ತೆಗೆದುಕೊಂಡಿವೆ.

೧೯೬೬ ಮತ್ತು ೧೯೬೯ರ ನಡುವೆ ಮೂರು ಬಲವಾದ ಭೂಕಂಪಗಳು ಉತ್ತರ ಚೀನ ನೆಲದ ಕೆಳಗಿರುವ ತಾಸ್‌ಲು ಮತ್ತು ಕ್ಸಿಂಗ್‌ತೈ-ಹೆಜಿಯಾಂಗ್ ಸೀಳುಗಳ ಉದ್ದಕ್ಕೂ ಸಂಭವಿಸಿದುವು. ಪ್ರತಿ ಭೂಕಂಪವೂ ಅದರ ಹಿಂದಿನದಕ್ಕೆ ಈಶಾನ್ಯ ದಿಕ್ಕಿನಲ್ಲಿ ಆಯಿತು. ೧೯೭೦ ರಲ್ಲಿ ಬೀಜಿಂಗಿನಲ್ಲಿ ನಡೆದ ಚೀನದ ಪ್ರಥಮ ಭೂಕಂಪಶಾಸ್ತ್ರ ಸಮ್ಮೇಳನದಲ್ಲಿ ಇದರ ಮುಂದಿನ ಭೂಕಂಪ ಇನ್ನೂ ಉತ್ತರ ದಿಕ್ಕಿನಲ್ಲಿ ಆಗುವುದೆಂದು ತೀರ್ಮಾನಿಸಿ ಮುಂದಿನ ಹತ್ತು ವರ್ಷಗಳಲ್ಲಿ ಮಂಚೂರಿಯದ ಲಿಯಾವೊನಿಂಗ್ ಪ್ರಾಂತ (೩೫ ಮಿಲಿಯನ್ ಜನಸಂಖ್ಯೆ) ದಲ್ಲಿ ಮುಂದಿನ ಭಾರೀ ಭೂಕಂಪ ಸಂಭವಿಸುವುದೆಂದು ದೀರ್ಘಾವಧಿ ಎಚ್ಚರಿಕೆ ನೀಡಲಾಯಿತು. ಈ ಪ್ರಾಂತದಲ್ಲಿನ ಭೂಗರ್ಭದ ಸೀಳುಗಳನ್ನು ಪತ್ತೆಹಚ್ಚಿ ಅವುಗಳ ನಕಾಶೆ ತಯಾರಿಸುವುದಲ್ಲದೆ ಭೂಕಂಪಗಳಾಗುವ ಮುನ್ನ ಕಾಣಿಸಿಕೊಳ್ಳುವ ಸಣ್ಣ ಪ್ರಮಾಣದ ಭೂಚಲನೆಗಳ ಕಡೆ ನಿಗಾ ಇಟ್ಟಿರಲು ಎರಡು ಪ್ರಧಾನ ಭೂಭೌತಿಕ ವೀಕ್ಷಣಾ ಕೇಂದ್ರಗಳನ್ನೂ ಮುನ್ನೂರು ತಜ್ಞರಿರುವಂಥ ಇವುಗಳಿಗಿಂತ ಚಿಕ್ಕವಾದ ಹನ್ನೆರಡು ಭೂಕಂಪ ಕೇಂದ್ರಗಳನ್ನು ಅಲ್ಲಿ ಸ್ಥಾಪಿಸಲಾಯಿತು.

ಮೂರು ವರ್ಷ ಎಲ್ಲ ಶಾಂತವಾಗಿಯೇ ಇತ್ತು. ಆದರೆ ೧೯೭೪ರ ಮಧ್ಯಭಾಗದಲ್ಲಿ ಅಲ್ಲಿನ ಪ್ರಮುಖ ಸೀಳಿನಲ್ಲಿ ಬಂಡೆಗಳು ಅಡ್ಡಡ್ಡಲಾಗಿ ಹಾಗೂ ಮೇಲಕ್ಕೂ ಕೆಳಕ್ಕೂ ಚಲಿಸಲಾರಂಭಿಸಿದುವು. ಪ್ರಾಂತದ ದಕ್ಷಿಣ ಭಾಗದಲ್ಲಿರುವ ಲಿಯಾವೊಡಾಂಗ್ ಪರ್ಯಾಯ ದ್ವೀಪದ ಮಟ್ಟ ೧೯೫೦ ರಿಂದ ಮೇಲೇರುತ್ತಿತ್ತು. ಈಗ ಅದು ವಾಯುವ್ಯದ ಕಡೆಗೆ ಮೊದಲಿಗಿಂತ ಬೇಗ ಬೇಗ ವಾಲಲು ಆರಂಭಿಸಿತು. ಸಣ್ಣ ಸಣ್ಣ ಕಂಪನಗಳು ಗಮನಾರ್ಹವಾಗಿ ಹೆಚ್ಚಾದುವು. ಭೂಮಿಯ ಕಾಂತತೆಯ ಪ್ರಮಾಣವೂ ಹೆಚ್ಚು ಕಡಿಮೆಯಾಗಲಾರಂಭಿಸಿತು. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಆ ಪ್ರಾಂತದ ರಾಜಧಾನಿ ಷೆನ್‌ಯಾಂಗಿನ ಭೂಕಂಪ ಕಚೇರಿ ಭೂಕಂಪ ಎಚ್ಚರಿಕೆಯನ್ನು ದೀರ್ಘಾವಧಿ ಮುನ್ನೆಚ್ಚರಿಕೆಯಿಂದ ಮಧ್ಯಾವಧಿ ಮುನ್ನೆಚ್ಚರಿಕೆಗೆ ಬದಲಾಯಿಸಿತು. ಅಂದರೆ ಮುಂದಿನ

ಎರಡು ವರ್ಷಗಳಲ್ಲೇ ಭೂಕಂಪ ಘಟಿಸುವುದು ಎಂದು ಅರ್ಥ.

ತಕ್ಷಣ ಭೂಕಂಪ ಪ್ರತಿರೋಧ ಚಳುವಳಿಯೊಂದನ್ನು ಅತಿ ರಭಸದಿಂದ ಜಾರಿಗೆ ತರಲಾಯಿತು. ಸ್ಥಳೀಯವಾಗಿ ಗಮನಿಸಿ ಅಳತೆ ಅಂಕಗಳನ್ನು ವರದಿ ಮಾಡಲು ಷೆನ್‌ಯಾಂಗಿನ ಕಚೇರಿಯು ಐದುಸಾವಿರ ವೃತ್ತಿನಿರತರಲ್ಲದ ಸ್ವಯಂ ಸೇವಕರನ್ನು ನೇಮಕ ಮಾಡಿತು. ಪ್ರಾಂತ್ಯದಾದ್ಯಂತವೂ ಭೂಕಂಪಶಾಸ್ತ್ರಜ್ಞರು ಭಾಷಣಗಳನ್ನು ಮಾಡಿದರು. ಶಾಲೆಗಳಲ್ಲಿ ಭೂಕಂಪಗಳ ಬಗೆಗೆ ಮಾಹಿತಿ ಕೊಡುವ ಏರ್ಪಾಟಾಯಿತು. ಭೂಕಂಪಗಳಾಗುವ ಮೊದಲು ಕಾಣಿಸುವ ಮುನ್ಸೂಚನೆಗಳು ಮತ್ತು ಆಗ ಅನುಸರಿಸಬೇಕಾದ ಕ್ರಮಗಳನ್ನು ಕುರಿತು ಪ್ರಚಾರ ಪುಸ್ತಕಗಳು ಮತ್ತು ಸಚಿತ್ರ "ಕಾಮಿಕ್ಸ್"ಗಳನ್ನೂ ಮುದ್ರಿಸಿ ಎಲ್ಲೆಡೆ ಹಂಚಲಾಯಿತು. ಭೂಕಂಪದ ಆಘಾತ ಹೊಡೆದ ಕ್ಷಣದಲ್ಲಿ ಸರಿಯಾಗಿ ಏನೇನು ಕ್ರಮ ಅನುಸರಿಸಬೇಕೆಂದು ವಿವರಿಸುವ ಅಂಶಗಳನ್ನು ಪ್ರಾಸಬದ್ಧ ಚುಟುಕಗಳ ರೂಪದಲ್ಲಿ ಬರೆಯಿಸಿ ಮಡಿಸುವ ಕಾಗದದ ಬೀಸಣಿಗೆಗಳ ಮೇಲೆ ಮುದ್ರಿಸಿ ಆ ಬೀಸಣಿಗೆಗಳನ್ನೂ ಕಿರು ಹೊತ್ತಿಗೆಗಳ ಜೊತೆ ಹಂಚಲಾಯಿತು.

ವರ್ಷ ಕಳೆಯುತ್ತ ಬಂದಂತೆ ಎಲ್ಲ ಮುನ್ಸೂಚನೆ ಆ ಜಿಲ್ಲೆಯ ದಕ್ಷಿಣದಲ್ಲಿದ್ದ ಹೈಚೆಂಗ್ ಮತ್ತು ಯಿಂಗ್‌ಕುಗಳ ನಡುವಿನ ಪ್ರದೇಶವು ಮುಂಬರುವ ನೆಲ ದುಬ್ಬರದ ಕೇಂದ್ರವಾಗಲಿದೆ ಎಂದು ತೋರಿಸಿಕೊಟ್ಟವು. ೧೯೭೩ ರಲ್ಲಿ ಹೈಚೆಂಗ್ ಪಟ್ಟಣದ ಸುತ್ತಲಿನ ನೆಲ ಅರವತ್ತು ಸೆಂಟಿ ಮೀಟರುಗಳಷ್ಟು ಮೇಲಕ್ಕೆ ಉಬ್ಬಿತ್ತು. ೧೯೭೪ ರಲ್ಲಿ ಇದೇ ನೆಲ ನೂರ ಹದಿನಾರು ಸೆಂಟಿಮೀಟರುಗಳಷ್ಟು ಕೆಳಗಿಳಿದು ನೆಲ ತಗ್ಗಾಯಿತು. ಭೂಮಿಯ ಗುರುತ್ವಾಕರ್ಷಣ ಶಕ್ತಿ ಅಚ್ಚರಿಗೊಳ್ಳುವಂತೆ ಕೆಳಗಿಳಿಯಿತು. ವಿದ್ಯುತ್ ಪ್ರತಿರೋಧ ಶಕ್ತಿ ದಿನದಿಂದ ದಿನಕ್ಕೆ ಬದಲಾಯಿಸುತ್ತಿತ್ತು. ಭೂಮಿಯ ಒಳಗಿನ ನೀರಿನಲ್ಲಿ ಅಪರೂಪದ ಅನಿಲ ರ್ಯಾಡಾನಿನ ಪ್ರಮಾಣ ಹೆಚ್ಚಾಯಿತು ಮತ್ತು ಪ್ರಾಣಿಗಳು ವಿಚಿತ್ರವಾಗಿ ವರ್ತಿಸಲಾರಂಭಿಸಿದುವು. ಮನುಷ್ಯರ ಕಿವಿ ಮೂಗು ಚರ್ಮಗಳು ಗ್ರಹಿಸಲಾರದ ಶಬ್ದಗಳು, ವಾಸನೆಗಳು, ಕಂಪನಗಳು ಮತ್ತು ವಿದ್ಯುತ್‌ಶಕ್ತಿಯ ವ್ಯತ್ಯಾಸಗಳನ್ನು ಎಷ್ಟೋ ವೇಳೆ ಪ್ರಾಣಿಗಳು ಗ್ರಹಿಸಬಲ್ಲವು ಎಂಬ ಒಂದು ನಂಬಿಕೆ ಚೀನೀಯರಲ್ಲಿದೆ. ಪ್ರಾಣಿಗಳ ವಿಚಿತ್ರ ವರ್ತನೆಗಳೂ ಭೂಕಂಪಗಳ ಮುನ್ಸೂಚನೆಗಳು ಎಂದು ಅವರು ತಿಳಿಯುತ್ತಾರೆ.

೧೯೭೪ ರ ಡಿಸೆಂಬರಿನ ಹೊತ್ತಿಗೆ ಲಿಯಾಓನಿಂಗಿನ ಕೆಳಗೆ ಇದ್ದ ನೆಲ ಮೇಲಿಂದ ಮೇಲೆ ನಡುಗಲಾರಂಭಿಸಿತು. ಡಜನ್‌ಗಟ್ಟಲೆ ಭೂಕಂಪಗಳಾದವು.

ಒಂದು ಕಂಪನಾಂತರ ರಿಕ್ಟರ್ ಮಾನದಲ್ಲಿ ೪.೮ ಪ್ರಮಾಣ ಮುಟ್ಟಿತು. ಅಂದರೆ ಯಾವ ಉಪಕರಣದ ಸಹಾಯವೂ ಇಲ್ಲದೆ ಇದನ್ನು ತಿಳಿಯಬಹುದಾಗಿತ್ತು. ೧೯೭೫ರ ಜನವರಿ ೧೩ರಂದು ಪೆನ್ಯಾಂಗಿನ ಕಚೇರಿ ತನ್ನ ಮುನ್ಸೂಚನೆಯನ್ನು ಅಲ್ಪಾವಧಿ ಮುನ್ಸೂಚನೆಗೆ ಬದಲಾಯಿಸಿತು. ಅಂದರೆ ಆರು ತಿಂಗಳೊಳಗೆ ೫.೫ ರಿಂದ ೬ ಪ್ರಮಾಣದ ಭೂಕಂಪ ಆ ಪ್ರದೇಶವನ್ನು ಅಲುಗಾಡಿಸುವುದು ಎಂದರ್ಥ.

ಸರ್ಕಾರ ಈಗ ರಭಸದಿಂದ ಕಾರ್ಯಾಚರಣೆಗೆ ತೊಡಗಿತು. ಕಟ್ಟಡಗಳಿಲ್ಲದ ಬಯಲು ಪ್ರದೇಶಗಳಲ್ಲಿ ಮರದಕೋಲುಗಳು ಜೋಳದ ಕಡ್ಡಿ, ಹುಲ್ಲುಗೋಣಿ ತಟ್ಟು ಮತ್ತಿತರ ಹಗುರ ಸಾಮಾನುಗಳನ್ನು ಬಳಸಿ ಜನರಿಗೆ ಆಶ್ರಯಕ್ಕಾಗಿ ಹಂಗಾಮಿ ತಾಣಗಳನ್ನು ಕಟ್ಟಲಾಯಿತು. ಡೇರಾಗಳಲ್ಲಿ ತಾತ್ಕಾಲಿಕ ಆಸ್ಪತ್ರೆಗಳನ್ನು ಸ್ಥಾಪಿಸಿದರು. ಪ್ರತಿಯೊಂದು ಔದ್ಯಮಿಕ ಮತ್ತು ಕೃಷಿ ಕೇಂದ್ರಗಳಲ್ಲಿ ಹಾಗೂ ಹಳ್ಳಿ ಪಟ್ಟಣಗಳಲ್ಲಿ ತುರ್ತುದಳಗಳನ್ನು ನಿಯಮಿಸಲು ಆಜ್ಞೆ ಹೊರಟಿತು. ಭೂಕಂಪ ಮುನ್ನೆಚ್ಚರಿಕೆ ಸಲಹೆಗಳು ಪ್ರತಿಕುಟುಂಬವನ್ನು ಮುಟ್ಟಿವೆಯೆಂದು ಖಾತರಿ ಮಾಡಿಕೊಳ್ಳಲು ನಗರಗಳು ಹಳ್ಳಿಗಳು ಹಾಗೂ ಸಾಮೂಹಿಕ ಕೃಷಿ ಕ್ಷೇತ್ರಗಳಿಗೆ ಅಧಿಕಾರಿಗಳು ಭೇಟಿಕೊಟ್ಟರು.

ಮುಂದಿನ ಮೂರು ವಾರಗಳಲ್ಲಿ ನಿಜಕ್ಕೂ ಗಾಬರಿ ಹುಟ್ಟಿಸುವಂಥ ಸೂಚನೆಗಳು ಕಂಡು ಬಂದುವು. ಪೆನ್ಯಾಂಗ್ ವೀಕ್ಷಣಾಲಯದ ಮಾಪಕ ಉಪಕರಣಗಳು ಅಲ್ಲಿನ ಭೂಮಿಯು ಇಳಿಜಾರು ವಾಯುವ್ಯದಿಂದ ನೈರುತ್ಯಕ್ಕೆ ವಾಲಿದೆಯೆಂದು ತೋರಿಸಿಕೊಟ್ಟುವು. ಇದು ದೊಡ್ಡ ಬದಲಾವಣೆಯೇ ಸರಿ. ಭೂಮಿಯ ವಿದ್ಯುತ್ ನಿರೋಧ ಶಕ್ತಿಯನ್ನು ತೋರಬೇಕಿದ್ದ ಸೂಜಿಗಳು ಎಷ್ಟು ಅಲ್ಲಾಡುತ್ತಿದ್ದುವೆಂದರೆ ಅಲ್ಲಿ ಯಾವ ಅಳತೆಯನ್ನೂ ತೆಗೆದುಕೊಳ್ಳಲು ಸಾಧ್ಯವಾಗಲೇ ಇಲ್ಲ. ಹೈಚೆಂಗ್ ಸಮೀಪದ ತಿಳಿನೀರಿನ ಊಟೆಗಳಲ್ಲಿ ಬಗ್ಗಡವಾದ ನೀರು ಚಿಮ್ಮಿತು. ಎಣ್ಣೆ ಬಾವಿಗಳಲ್ಲಿನ ಎಣ್ಣೆ ಮಟ್ಟ ಗಮನಾರ್ಹವಾಗಿ ಏರಿತು. ಏಕೆಂದರೆ ಭೂಗರ್ಭದ ಬಂಡೆಗಳಲ್ಲಿ ಒತ್ತಡ ಹೆಚ್ಚಾಗುತ್ತಿತ್ತು: ಹೈಚೆಂಗಿನಲ್ಲಿದ್ದ ಹಿಂದೆಂದೂ ಬತ್ತದಿದ್ದ ಒಂದು ನೀರಿನ ಝರಿ ಒಣಗಿಹೋಯಿತು. ಪಂಪ್ ಮಾಡಿ ನೀರು ಹೊರ ತೆಗೆಯಬೇಕಿದ್ದ ಕೆಲವು ಬಾವಿಗಳಲ್ಲಿ ಆರ್ಟೀಸಿಯನ್ ಬಾವಿಗಳಂತೆ ನೀರು ಉಕ್ಕಿ ಹರಿಯಲಾರಂಭಿಸಿತು.

ಪ್ರಾಣಿಗಳು ವಿಚಿತ್ರವಾಗಿ ನಡೆದುಕೊಳ್ಳುತ್ತಿವೆಯೆಂದು ಏಳುನೂರು ವರದಿಗಳು ಬಂದುವು. ವನ ಹಂದಿಗಳು ಕೊಟ್ಟಿಗೆ ಬಾಗಿಲು ಮುರಿದು ಹೊರ

ಬಂದುವು. ಹಾವುಗಳು ಬಿಲದಿಂದ ಹೊರಗೆ ಹರಿದು ಬಂದು ಹಿಮದಲ್ಲಿ ಗೆಡ್ಡೆ ಕಟ್ಟಿ ಸತ್ತುಹೋದುವು. ಹಕ್ಕಿಗಳು ತಮ್ಮ ಪಂಜಗಳಲ್ಲಿ ಮೊಟ್ಟೆಗಳನ್ನೆತ್ತಿ ಕೊಂಡು ಗೂಡುಗಳ ಸುತ್ತಲೂ ಹಾರಿದುವು. ಮರಿಗಳನ್ನು ಬಾಯಲ್ಲಿ ಕಚ್ಚಿ ಕೊಂಡು ಇಲಿಗಳು ಅಲೆದಾಡತೊಡಗಿದುವು.

ಫೆಬ್ರುವರಿ ಮೂರರಂದು ಸಂಜೆ ೬–೩೦ ರಿಂದ ಹೈಚೆಂಗ್ ಸಮೀಪ ಆರು ಕಿಲೋಮೀಟರ್ ಪ್ರದೇಶದಲ್ಲಿ ಐನೂರು ಸಲ ಭೂಕಂಪಗಳಾಗಿ ಕಡೆಗೆ ಮಾರನೆ ಬೆಳಿಗ್ಗೆ ಎಂಟು ಗಂಟೆಗೆ ೪·೮ ಅಳತೆಯ ಭೂಕಂಪವಾಗಿ ಅಲ್ಲಿನ ಕಟ್ಟಡಗಳಲ್ಲಿ ಅಲುಗಾಡಿದುವು. ಪ್ರಧಾನ ಕಂಪದ ಮೊದಲು ಸಂಭವಿಸುವ ಸಣ್ಣ ಕಂಪಗಳು ಇವು ಎಂದು ನಿರ್ಧರಿಸಿ ಭೂಕಂಪ ಇಲಾಖೆ ಆ ಪ್ರಾಂತದ ಆಡಳಿತ ಸಮಿತಿಗೆ ರಿಖ್ಟರ್ ಮಾನದಲ್ಲಿ ೬ ಮಾನದ ಒಂದು ಭೂಕಂಪ ಹೈಚೆಂಗ್‌ನ ಹತ್ತಿರದಲ್ಲೇ ಅದೇ ದಿನ ಸಂಭವಿಸುವುದೆಂದು ಫೆಬ್ರುವರಿ ೪ ರಂದು ತಿಳಿಸಿತು.

ಆದರೆ ಸರ್ಕಾರೀ ಮುಖಂಡರು ಈ ಭವಿಷ್ಯ ವಾಕ್ಯವೇನಾದರೂ ಸುಳ್ಳಾದರೆ ತಮ್ಮ ಭವಿಷ್ಯಕ್ಕೂ ತೊಂದರೆ ಬರುವುದೆಂದು ಸಂಶಯಪಟ್ಟು ತಕ್ಷಣ ಏನು ಮಾಡಲೂ ಹಿಂದೆಗೆದರು. ಆದರೆ ೧–೩೦ರ ಹೊತ್ತಿಗೆ ಭೂಕಂಪ ಇಲಾಖೆ ಯಿಂದ ಮತ್ತೊಂದು ಕರೆ ಬಂದಿತು. ಅದುವರೆಗೆ ಆಗುತ್ತಿದ್ದ ಕಂಪಗಳೆಲ್ಲ ಇದ್ದಕ್ಕಿದ್ದಂತೆ ಪೂರ್ಣವಾಗಿ ನಿಂತು ಹೋಗಿರುವುದಾಗಿಯೂ ಎಷ್ಟೋ ವಾರ ಗಳ ನಂತರ ಉಪಕರಣಗಳ ಸೂಜಿಗಳು ಅಲುಗಾಡದೆ ಇವೆಯೆಂದೂ ಈ ಕರೆ ಯಲ್ಲಿ ತಿಳಿಸಲಾಯಿತು. ಭೂಗರ್ಭದೊಳಗಿನ ಶಿಲೆ ಒಡೆದುಹೋಗುವ ಮುಂಚೆ ಕಾಣಬರುವ ಶಾಂತಿ ಇದು ಎಂದು ಭೂಕಂಪ ತಜ್ಞರಿಗೆನಿಸಿತು.

ಮಧ್ಯಾಹ್ನ ಎರಡು ಘಂಟೆಗೆ ಅಪಾಯ ಕ್ಷೇತ್ರದಲ್ಲಿದ್ದ ಕಟ್ಟಡಗಳೆಲ್ಲವನ್ನೂ ಒಂದನ್ನೂ ಬಿಡದಂತೆ ಖಾಲಿಮಾಡಬೇಕೆಂದು ಆಜ್ಞೆ ಹೊರಟಿತು. ಸಣ್ಣ ಅಂಗಡಿಗಳವರು ನಾಜೂಕಾದ ಸಾಮಾನುಗಳನ್ನು ಹೊರ ಸಾಗಿಸಿದರು. ಅಮೂಲ್ಯವಾದ ಯಂತ್ರಗಳು, ರಾಸಾಯನಿಕ ವಿಷ ಪದಾರ್ಥಗಳು, ಅಸ್ತ್ರ ಗಳು ಮತ್ತು ಸ್ಫೋಟಕಗಳನ್ನು ಕಾರ್ಖಾನೆಗಳಿಂದ ಹೊರತಂದರು. ಗಣಿಗ ಳೊಳಗಿನಿಂದ ಕಾರ್ಮಿಕರು ಹೊರ ಬಂದರು. ಉಕ್ಕಿನ ಕಾರ್ಖಾನೆ ಕುಲುಮೆ ಗಳ ಬೆಂಕಿಯನ್ನು ಆರಿಸಿಬಿಟ್ಟರು. ಸಾಕು ಪ್ರಾಣಿಗಳನ್ನು ಕೊಟ್ಟಿಗೆ ಮತ್ತು ದೊಡ್ಡಿಗಳಿಂದ ಹೊರಗೆ ಬಿಟ್ಟುಬಿಟ್ಟರು. (ಅದೃಷ್ಟವಶಾತ್ ಆಗ ಚೀನೀ ಹೊಸ ವರುಷದ ರಜ ಇದ್ದುದರಿಂದ ಶಾಲೆಗಳಾವುವೂ ತೆರೆದಿರಲಿಲ್ಲ). ಓಡಾಡು ವಂಥ ರೋಗಿಗಳನ್ನು ಆಸ್ಪತ್ರೆಗಳಿಂದ ಕಳುಹಿಸಿದರು. ಅಪಾಯ ಸ್ಥಿತಿಯಲ್ಲಿದ್ದವ

ರನ್ನು ಡೇರೆಗಳಿಗೆ ತಂದರು. "ನಿಮ್ಮ ಆಶ್ರಯ ಸ್ಥಾನದಲ್ಲಿರಿ ಅಥವಾ ಬಯಲಿನಲ್ಲಿರಿ, ಎತ್ತರವಾದ ಕಟ್ಟಡಗಳಿಂದ ದೂರವಿರಿ" ಎಂದು ಧ್ವನಿವರ್ಧಕಗಳು ಮಧ್ಯಾಹ್ನವಿಡೀ ಸಾರುತ್ತಲಿದ್ದುವು. ಈ ಖಾಲಿ ಮಾಡುವ ಕಾರ್ಯ ಸಂಜೆ ಐದು ಘಂಟೆಗೆ ಮುಗಿಯಿತು.

ಆದರೆ ಜನಗಳು ತಮ್ಮ ಮನೆಗಳನ್ನು ಬಿಟ್ಟುಬರಲು ಸುಲಭವಾಗಿ ಒಪ್ಪುವುದಿಲ್ಲ. ಮೈದಾನದಲ್ಲಿ ಉಷ್ಣಾಂಶ ಕೇವಲ ಶೂನ್ಯ ಡಿಗ್ರಿಯಷ್ಟಿದ್ದು ನೆಲದ ಮೇಲೆ ಹಿಮ ಇತ್ತು. ಸ್ಥಳೀಯ ಸಮಿತಿಗಳ ಸದಸ್ಯರು ಮನೆಗಳನ್ನು ಖಾಲಿ ಮಾಡಿಸಿದ ಮೇಲೆ ಸಹ ಕೆಲವರು ಕಳ್ಳತನದಲ್ಲಿ ನುಸುಳಿ ಮನೆಗಳಿಗೆ ಹೋದರು. ಜನರು ಹೊರಗೇ ಇರುವಂತೆ ಮಾಡಲು ಯಿಂಗ್‌ಕೌ ಮತ್ತು ಹೈಚೆಂಗಿನ ಸಮಿತಿಗಳವರು ಸಾರ್ವಜನಿಕ ಚೌಕಗಳಲ್ಲಿ ಆರು ಘಂಟೆಗೆ ಮುಫತ್ತಾಗಿ ಸಿನಿಮಾ ತೋರಿಸುವುದಾಗಿ ತಿಳಿಸಿದರು.

ತಂತ್ರಜ್ಞ ಲಾವೋಯಿಜೆನ್ ಭೂಕಂಪಮಾಪಕ ಯಂತ್ರವನ್ನು ವೀಕ್ಷಿಸುತ್ತಿದ್ದಾಗಲೇ ಭೂಮಿ ಕಂಪಿಸಲಾರಂಭಿಸಿತು. ಆಕೆಯಿದ್ದ ಕಟ್ಟಡ ತೂಗಾಡತೊಡಗಿತು. ಅಲ್ಲಿದ್ದ ಯಂತ್ರಗಳೂ ಉರುಳಿ ಹೋದುವು. ಆಕೆಗೆ ಮತ್ತು ಆಕೆಯ ಸಹೋದ್ಯೋಗಿಗಳಿಗೆ ತಿರುಗಿ ನಿಲ್ಲಲು ಸಾಧ್ಯವಾದಾಗ ಹೇಗೋ ಏನೋ ಘಾಸಿಯಾಗದಿದ್ದ ಒಂದು ಭೂಕಂಪ ಮಾಪಕವನ್ನು ಹೊರಗಡೆ ಎಳೆದುಕೊಂಡು ಹೋಗಿ ಅಲ್ಲಿ ವಿದ್ಯುತ್ ಬ್ಯಾಟರಿಗಳಿಗೆ ಅದನ್ನು ಲಗತ್ತಿಸಿ ಒಂದು ಟಾರ್ಚಿನ ಬೆಳಕಿನಲ್ಲಿ ಅದನ್ನು ವೀಕ್ಷಿಸತೊಡಗಿದರು.

ಅಂಥ ಸಮಯದಲ್ಲಿ ಅಲ್ಲಿ ಎಲ್ಲರಿಗಿಂತ ಸಮಾಧಾನಚಿತ್ತನಾಗಿದ್ದವರೆಂದರೆ ಅಲ್ಲಿಯ ಪ್ರಧಾನ ಭೂಕಂಪ ಶಾಸ್ತ್ರಜ್ಞ ಗುಹಾಪ್ರೊಡಿಂಗ್, ಭೂಕಂಪದ ಹೊಡೆತ ಪ್ರಾರಂಭವಾಗುವ ಮುನ್ನವೇ ವೀಕ್ಷಣಾಸ್ಥಳವನ್ನು ಸೇರಿಕೊಳ್ಳಬೇಕೆಂದು ಇವರು ಜೀಪಿನಲ್ಲಿ ಧಾವಿಸುತ್ತಿದ್ದರು. ಜೀಪು ಇದ್ದಕ್ಕಿದ್ದಂತೆ ಕುಪ್ಪಳಿಸಿತು. ಅಕ್ಕಪಕ್ಕದ ಮನೆಗಳೆಲ್ಲ ಡೊಮಿನೊಗಳಂತೆ ಕುಸಿದುವು. ತಕ್ಷಣ ಇವರು ತಮ್ಮ ಗಡಿಯಾರ ನೋಡಿದರು. ಇಂಥವೇ ಸಮಯಕ್ಕೆ ಭೂಕಂಪ ಆಗುತ್ತದೆ ಮತ್ತು ಅದರ ಆಘಾತ ಊಹಿಸಿದಕ್ಕಿಂತ ಹೆಚ್ಚಾಗಿರುತ್ತದೆ ಎಂದು ತಾವು ನುಡಿದಿದ್ದ ಭವಿಷ್ಯ ನಿಜವಾದುದಕ್ಕೆ ಅವರಿಗೆ ಆನಂದವಾಯಿತೆಂದು ಅವರು ಸ್ಮರಿಸಿಕೊಳ್ಳುತ್ತಾರೆ. ಭೂಕಂಪ ೬ರ ಪ್ರಮಾಣದ್ದಾಗಿರುತ್ತದೆ ಎಂದು ಊಹಿಸಲಾಗಿತ್ತು. ಆದರೆ ಅದರ ನಿಜ ಪ್ರಮಾಣ ೭.೩ ಆಗಿತ್ತು. ಅಂದರೆ ಊಹಿಸಿದ್ದುದಕ್ಕಿಂತ ೩೦ ಪಟ್ಟು ಹೆಚ್ಚು ವಿನಾಶಕಾರಿ.

ಆ ರಾತ್ರಿಯೆಲ್ಲ ಏಳುನೂರಕ್ಕೂ ಹೆಚ್ಚು ಭೂಕಂಪಗಳು ನೆಲವನ್ನು ನಡುಗಿಸುತ್ತಿದ್ದುವು. ಸುಸ್ತಾಗಿದ್ದ ಅಲ್ಲಿಯ ಜನ ಬೆಳಕು ಹರಿದಾಗ ತಮ್ಮ ಪಟ್ಟಣವನ್ನು ತಾವೇ ಗುರುತಿಸದಾದರು. ಅಲ್ಲಿದ್ದ ಸೇತುವೆಗಳು ಮತ್ತು ಫ್ಯಾಕ್ಟರಿ ಚಿಮಣಿಗಳೆಲ್ಲ ಪುಡಿಪುಡಿಯಾಗಿದ್ದುವು. ಭೂಕಂಪ ಕೇಂದ್ರದಿಂದ ಇಪ್ಪತ್ತು ಕಿಲೋಮೀಟರ್ ಫಾಸಲೆಯಲ್ಲಿದ್ದ ಮನೆಗಳು ಮತ್ತು ಫ್ಯಾಕ್ಟರಿಗಳಲ್ಲಿ ಶೇಕಡಾ ೯೦ ರಷ್ಟು ಅವುಗಳಿಂದ ಇಪ್ಪತ್ತು ಕಿಲೋಮೀಟರ್ ಸುತ್ತಳತೆಯಲ್ಲಿದ್ದವು. ಶೇಕಡಾ ೫೦ ರಷ್ಟು ಕುಸಿದಿದ್ದುವು ಅಥವಾ ಅವುಗಳಿಗೆ ಬಹಳ ಜಖಮಾಗಿತ್ತು. ನೀರಿನ ಕೊಳವೆಗಳು ಒಡೆದುಹೋಗಿದ್ದುವು. ರೈಲು ಕಂಬಿಗಳು ಬಗ್ಗಿಹೋಗಿದ್ದುವು. ಒಂದು ಮೀಟರ್ ಅಗಲವಿದ್ದು ೧೫೦೦ ಮೀಟರ್‌ಗಳವರೆಗೆ ಉದ್ದವಿದ್ದ ಸೀಳುಗಳು ಭೂಮಿಯಲ್ಲಿ ಹೊಲಗಳು ಹಳ್ಳಿಗಳಲ್ಲಿ ಅಂಕುಡೊಂಕಾಗಿ ಹಬ್ಬಿದ್ದುವು. ಒಂಟಿಬೆಟ್ಟವೆನ್ನುವಹಳ್ಳಿಯಲ್ಲಿ ಭೂಕಂಪದ ಕೇಂದ್ರಬಿಂದುವಿನ ಬಳಿ ಸುಣ್ಣಕಲ್ಲಿನ ಭೂಮಿಯಲ್ಲಿ ಕುದುರೆಗಳು ಟ್ರಾಕ್ಟರುಗಳು ೧೫ ಮೀಟರ್ ಎತ್ತರದ ಮನೆಗಳು ಏಕೆ ಇಡಿ ಮನೆಗಳನ್ನೇ ಒಳಕೊಳ್ಳುವಂಥ ಹಳ್ಳಿಗಳು ಕಾಣಿಸಿಕೊಂಡಿದ್ದುವು.

ಇಷ್ಟೆಲ್ಲ ಹಾನಿಯಾದರೂ ಒಂದು ಕಡೆ ಸಹ ಬೆಂಕಿ ಅಪಘಾತವಾಗಲಿಲ್ಲ. ಎಲ್ಲಿಯೂ ಜನರು ಲೂಟಿ ಹೊಡೆದ ಪ್ರಸಂಗ ಕಾಣಲಿಲ್ಲ. ಆಘಾತ ಪ್ರದೇಶದಲ್ಲಿ ಒಟ್ಟು ಐದು ಲಕ್ಷಕ್ಕೂ ಹೆಚ್ಚು ಜನ ವಾಸಿಸುತ್ತಿದ್ದರೂ ಇದುವರೆಗೆ ಗೊತ್ತಿರುವಂತೆ ಸಾವಿರಕ್ಕಿಂತ ಕಡಿಮೆ ಜನ ಸತ್ತರು. ಇವರಲ್ಲಿ ಕೆಲವರು ಕಟ್ಟಡಗಳ ಹೊರಗಿದ್ದಾಗ್ಯೂ ಬೀಳುತ್ತಿರುವ ಕಟ್ಟಡಗಳು ಬಡಿದು ಸತ್ತರು. ಉಳಿದವರು ಬೇರೆ ಬೇರೆ ಕಾರಣಗಳಿಂದ ತಮ್ಮ ಮನೆಗಳಿಗೆ ಹಿಂದಿರುಗಿದ್ದವರು ಮನೆಗಳು ಕುಸಿದಾಗ ಸತ್ತರು.

ಮುನ್ನೆಚರಿಕೆ ಸಿಗದಿದ್ದಲ್ಲಿ ಎಷ್ಟು ಜನ ಸತ್ತಿರುತ್ತಿದ್ದರು? ಇದಾದ ಒಂದೂವರೆ ವರ್ಷದ ಬಳಿಕ ಇದರ ಸಮೀಪದ ಟಾಂಗ್‌ಷಾನ್ ನಗರದಲ್ಲಿ ಆದ ೭·೮ ರಿಖ್ಟರ್ ಮಾನದ ಭೂಕಂಪದ ಭೀಕರ ಪರಿಣಾಮಗಳನ್ನು ಗಮನಿಸಿದರೆ ಇದಕ್ಕೆ ಉತ್ತರ ಸಿಗುತ್ತದೆ. ಅಲ್ಲಿ ಆರು ಲಕ್ಷ ಜನ ಸತ್ತರು ಮತ್ತು ಎಂಟೂವರೆ ಲಕ್ಷ ಜನ ಗಾಯಗೊಂಡರು. ಅಲ್ಲಿ ಅನೇಕ ವರ್ಷ ಸರಿಯಾಗಿ ಮಳೆಯಾಗಿರಲಿಲ್ಲ. ಭೂಕಂಪಕ್ಕೆ ಮೊದಲು ಅನೇಕವಾರ ಒಂದೇ ಸಮನೆ ಮಳೆ ಬೀಳುತ್ತಲೇ ಇತ್ತು. ಹೀಗಾಗಿ ಭೂಮಿಯ ಪದರಗಳ ಸ್ಥಿತಿ ಭೂಗರ್ಭಜಲದ ಮಟ್ಟ, ರೇಡಾನ್ ಅನಿಲದ ಹೊರಹೊಮ್ಮುವಿಕೆ, ಭೂಮಿಯ ವಿದ್ಯುತ್ ಪ್ರತಿರೋಧ

ದಲ್ಲಿ ವ್ಯತ್ಯಾಸಗಳು ಇವುಗಳೆಲ್ಲದರ ಬಗ್ಗೆ ಸರಿಯಾದ ಮಾಹಿತಿ ಸಿಗುವುದು ಕಷ್ಟವಾಯಿತು. ಬರುತ್ತಿದ್ದ ವರದಿಗಳನ್ನು ನೋಡಿ ಗಾಬರಿಗೊಂಡ ಭೂಕಂಪ ಇಲಾಖೆ ಅಲ್ಲಿಗೆ ಐವರು ತಜ್ಞರನ್ನು ತನಿಖೆ ಮಾಡಲು ಕಳುಹಿಸಿತು. ಅವರು ಟಾಂಗ್‌ಷಾನಿಗೆ ಬಂದ ರಾತ್ರಿಯೇ ಭೂಕಂಪವಾಗಿ ಅವರೆಲ್ಲ ತಾವಿಳಿದಿದ್ದ ಹೋಟೆಲಿನಲ್ಲಿಯೇ ಮರಣಹೊಂದಿದರು.

ಟಾಂಗ್‌ಷಾನಿನಲ್ಲಿ ಹೀಗೆ ಸೋತರೂ ಹೈಚೆಂಗ್ ಕಂಪದಿಂದೀಚೆಗೆ ಚೀನಿಯರು ಇದೇ ವಿಷಯದಲ್ಲಿ ಹಲವು ಬಾರಿ ಯಶಸ್ವಿಗಳಾಗಿದ್ದಾರೆ. ಚೀನದ ದಕ್ಷಿಣ ಸರಹದ್ದಿನಲ್ಲಿರುವ ಲಾಂಗ್‌ಲಿಂಗನ್ನು ೧೯೭೬ರಲ್ಲಿ ಒಂದಾಗುತ್ತಲೊಂದರಂತೆ ಎರಡು ಭೂಕಂಪಗಳು ನುಚ್ಚುನೂರುಮಾಡಿದುವು. ಇದಕ್ಕೆ ಸ್ವಲ್ಪವೇ ಸಮಯ ಮೊದಲು ಅಲ್ಲಿಯ ಜನರಿಗೆ ಮುನ್ನೆಚ್ಚರಿಕೆಕೊಟ್ಟು ಮನೆಗಳಿಂದ ಹೊರ ಹೊರಡಿಸಲಾಯಿತು. ಇದಾಗಿ ಮೂರು ತಿಂಗಳ ಮೇಲೆ ಸೋಂಗ್‌ಪಾನ್-ಪಿಂಗ್‌ವು ಜಿಲ್ಲೆಯಲ್ಲಿ ೭·೨ ಅಳತೆ ಭೂಕಂಪವಾಯಿತು. ಇದಕ್ಕೆ ಕೆಲವು ದಿನ ಮೊದಲು ಅಲ್ಲಿಯ ನಿವಾಸಿಗಳನ್ನು ಹೊರಗೆ ಕಳುಹಿಸಲಾಯಿತು. ಅದಾಗ ಒಂದು ವಾರದ ಮೇಲೂ ಅವರೆಲ್ಲ ಹೊರಗೇ ವಾಸಿಸುತ್ತಿದ್ದರು. ತಿರುಗ ಬಂದು ಅಷ್ಟೇ ಭಾರೀ ಭೂಕಂಪವಾಗಿ ಹಿಂದಿನ ಭೂಕಂಪ ಬಿಟ್ಟು ಹೋಗಿದ್ದನ್ನೆಲ್ಲ ನೆಲಸಮ ಮಾಡಿತು. ಇದುವರೆಗೂ ಏಳುಸಲ ಭೂಕಂಪ ಕುರಿತು ನುಡಿದ ಭವಿಷ್ಯ ನಿಜವಾಗಿದೆ. ಕೆಲವು ವೇಳೆ ಸುಳ್ಳಾಗಿಯೂ ಇದೆ. ಅಮೇರಿಕ ಸಂಯುಕ್ತ ಸಂಸ್ಥಾನಗಳು, ಸೋವಿಯತ್ ಒಕ್ಕೂಟ ಮತ್ತು ಜಪಾನುಗಳಲ್ಲಿ ಇವುಗಳಿಗಿಂತ ಚಿಕ್ಕ ಭೂಕಂಪಗಳನ್ನು ಮೊದಲೇ ಗುರುತಿಸಲು ಸಾಧ್ಯವಾಗಿದೆ.

ಇಷ್ಟಾದರೂ ಚೀನೀಯರು ತಾವು ಯಶಸ್ವಿಗಳಾದಾಗ ಬಡಾಯಿಕೊಚ್ಚುವುದೂ ಇಲ್ಲ, ಸೋತಾಗ ನಾಚಿಕೊಳ್ಳುವುದೂ ಇಲ್ಲ. ಈ ವಿಷಯವಾಗಿ ಭೂಕಂಪ ಇಲಾಖೆಯ ಅಧಿನಿರ್ದೇಶಕ ಹೇಳುವುದನ್ನು ಕೇಳಿ. "ಭೂಕಂಪದ ವಿಷಯ ಭವಿಷ್ಯ ನುಡಿಯುವುದೂ ಒಂದು ಕಲೆ. ನಮಗೆ ಗೊತ್ತಾದ ವಿಷಯಗಳನ್ನೆಲ್ಲ ಕಂಪ್ಯೂಟರ್ ಒಳಗೆ ತೂರಿಸಿ ಅದರಿಂದ ನಿಷ್ಕೃಷ್ಟ ಉತ್ತರ ಪಡೆಯುವ ಮಟ್ಟಕ್ಕೆ ಬರಲು ಇನ್ನೂ ಬಹುದೂರವಿದೆ. ನಾವು ಇನ್ನೂ ತಡಕಾಡುತ್ತಿದ್ದೇವೆ ಅಷ್ಟೆ. ಚಿಹ್ನೆಗಳನ್ನೆಲ್ಲ ಪರೀಕ್ಷಿಸಿ ಅನುಮಾನದ ಮೂಲಕ ಊಹೆ ಮಾಡುವುದು ಮಾತ್ರ ಈಗ ಸಾಧ್ಯ. ಅದು ನಿಜವಾದಾಗ ದೊಡ್ಡ ಅದೃಷ್ಟ ಎಂದುಕೊಳ್ಳಬೇಕು."

ಹೌದು, ಹೈಚೆಂಗ್‌ನ ಪವಾಡದ ಫಲವಾಗಿ ಬದುಕಿ ಉಳಿದ ಜನರ ಅದೃಷ್ಟವಷ್ಟೇ ದೊಡ್ಡ ಅದೃಷ್ಟ.

ಯಮುನಾಬಾಯಿ ಆರ್. ರಾವ್

ಪುಸ್ತಕ ವಿಮರ್ಶೆ

ತುಳಸಿ ; ತೆಲುಗು ಮೂಲ : ಯಂಡಮೂರಿ ವೀರೇಂದ್ರನಾಥ್ ; ಕನ್ನಡಕ್ಕೆ : ವಂಶಿ ; ಪ್ರಕಾಶಕರು : ಹೇಮಂತ ಸಾಹಿತ್ಯ, ಭಾಷ್ಯಂ ರಸ್ತೆ, ಬೆಂಗಳೂರು-೫೩ ; ಮೊದಲ ಮುದ್ರಣ : ಜನವರಿ, ೧೯೮೪ ; ಬೆಲೆ : ೨೨ ರೂ ; ಪುಟಗಳು ೪೧೩.

ಯಂಡಮೂರಿ ವೀರೇಂದ್ರನಾಥರ ತೆಲುಗು ಕಾದಂಬರಿಯ ಕನ್ನಡ ಅನುವಾದ. "ತುಳಸಿ" ರೋಚಕ ಕಥಾವಸ್ತುವನ್ನು ಹೊಂದಿದೆ.

ಬಿಸ್ರಾ ಗ್ರಾಮದ ಮಹಾಮಾಂತ್ರಿಕ ಕಾದ್ರಾ, ತಂತ್ರಶಾಸ್ತ್ರದ ಪರಮೋನ್ನತ ಶಕ್ತಿಯಾದ ಕಾಷ್ಮೋರಾವನ್ನು ವಶಪಡಿಸಿಕೊಳ್ಳುತ್ತಿದ್ದಾಗ ಕೊಲೆಯಾಗುತ್ತಾನೆ. ಇದರಿಂದ ಕಂಗಾಲಾದ ಕಾದ್ರಾನ ತಂದೆ ಪಿಶಾಚಿ ಹತ್ತು ವರ್ಷದ ಮುಗ್ಧ ಬಾಲಕ ದಾಕ್ಷಾ ಸಾಹುವನ್ನು ಶಿಷ್ಯನನ್ನಾಗಿ ಸ್ವೀಕರಿಸಿ, ತನ್ನ ಸಮಸ್ತ ಮಂತ್ರವಿದ್ಯೆಯನ್ನೂ ಧಾರೆಯೆರೆದು—ತನ್ನ ಮಗನನ್ನು ಬಲಿ ತೆಗೆದುಕೊಂಡವರ ಬಲಿಯೇ ತನಗೆ ಗುರುದಕ್ಷಿಣೆಯೆನ್ನುತ್ತಾನೆ. ದಾಕ್ಷಾ ಮಂತ್ರಲೋಕದಿಂದ ನಾಗರೀಕ ಜಗತ್ತನ್ನು ಪ್ರವೇಶಿಸಿ, ಅಲ್ಲಿ ತನ್ನ ಗುರುವಿನ ಬಯಕೆಯನ್ನು ಪೂರೈಸಲು ಪಡುವ ಸಾಹಸಗಳ ಸರಮಾಲೆಯೇ "ತುಳಸಿ".

ಕಾದಂಬರಿಯಲ್ಲಿನ ಭಾಷೆ ಆಕರ್ಷಕವಾಗಿದ್ದರೂ ಕೆಲವೆಡೆ ಸೈನ್ಸ್, ಟ್ರೀಟ್‌ಮೆಂಟೂ (ಪುಟ ೯೪) ; ಸ್ಪೆಷಲಿಸ್ಟ್, ಡಿಗ್ರಿಗಳು, ಛಾನ್ಸ್ (೯೫) ; ಪೇಷಂಟು (೩೯೨) ; ಪಾಪ್ಯುಲಾರಿಟಿ, ಸೆನ್ಸೇಷನ್ (೪೦೨) : ಲಿಂಕು (೪೧೧)—ಮೊದಲಾದ ಆಂಗ್ಲಭಾಷೆಯ ಪದಗಳನ್ನು ಕನ್ನಡದಲ್ಲಿ ಪರ್ಯಾಯ ಪದಗಳಿದ್ದಾಗ್ಯೂ ಬಳಸಿರುವುದು ಅಷ್ಟೊಂದು ಹಿತವೆನಿಸುವುದಿಲ್ಲ.

"ತುಳಸಿ" ಯಲ್ಲಿ ಸಂಭಾಷಣೆ ಜೀವಂತವಾಗಿದೆ. ಆದರೆ ದಾಕ್ಷಾ ತನ್ನ ಗುರುವನ್ನೇ ಏಕವಚನದಲ್ಲಿ ಸಂಬೋಧಿಸುವುದು ವಿಚಿತ್ರವೆನಿಸುತ್ತದೆ.

ಕಠೋರ ನಿಯಮಗಳಿಗೆ ಗುರಿಪಡಿಸುವ ಪಿಶಾಚಿಯ ನಿಷ್ಠೆಯಿಂದಾಗಿ ಇನ್ನೊಬ್ಬರ ಕೇಡೇ ಪರಮಸುಖವೆಂದು ಭ್ರಮಿಸಿದ್ದು, "ತನ್ನ ಉಳಿವಿನಿಂದ ಮಾನವ ಜಾತಿಗೇ ಮೇಲು ಮಾಡುವವನೇ ನಿಜವಾದ ಮಾಂತ್ರಿಕ" ಎಂದ ಆಚಾರ್ಯರ ಮಾತಿನಿಂದ ಪ್ರಭಾವಿತನಾದ ದಾಕ್ಷಾ ; ನಾಗರೀಕತೆಯ ಮುಸುಕಿನಲ್ಲಿ ಮೋಸ, ಕುತಂತ್ರ, ಕುಟಿಲತೆಗಳ ವ್ಯೂಹವನ್ನೇ ಸೃಷ್ಟಿಸುವ ಶ್ರೀನಿವಾಸಪಿಳ್ಳೆ ; ಮಂತ್ರ ಶಕ್ತಿ, ಮನೋವಿಕಲ್ಪ, ವಾಸ್ತವತೆ—ಇವುಗಳ ನಡುವೆ ತೂಗುಯ್ಯಾಲೆಯಾಡುವ ತುಳಸಿ—ಮೊದಲಾದವರ ಪಾತ್ರ ಪರಿ

ಪೋಷಣೆಯನ್ನು ಅನುವಾದಕ ಪಂಶೀಯವರು ಸೊಗಸಾಗಿ ಮಾಡಿದ್ದಾರೆ.

ಕಪಟ ಬಾಬಾಗಳು ನಡೆಸುವ ಶೂನ್ಯದಿಂದ ವಸ್ತುವಿನ ಸೃಷ್ಟಿ; ಕಣ್ಮುಚ್ಚಿಕೊಂಡೇ, ದೂರದಲ್ಲಿ ಕಾಣದಂತೆ ಬರೆದ ಪ್ರಶ್ನೆಗಳಿಗೆ ಉತ್ತರಿಸುವುದು; ತಂತ್ರ ನಿಪುಣರ ಅರತ್ಯಂಗ ವಿದ್ಯೆ (ಕಣ್ಣಿನ ನೋಟ ಮಾತ್ರದಿಂದಲೇ ವಸ್ತು-ಜೀವಿಗಳನ್ನು ಭಸ್ಮ ಮಾಡುವ ಕುಶಲತೆ); ಹೆಂಗಸರಿಗಷ್ಟೇ ದೆವ್ವ (?) ಹಿಡಿಯುವುದು—ಇವುಗಳ ಕುರಿತಾಗಿ ವೈಜ್ಞಾನಿಕ-ಮನೋವೈಜ್ಞಾನಿಕ ಕಾರಣಗಳನ್ನು ಕೊಟ್ಟು ಕಾದಂಬರಿಕಾರರು ಓದುಗರನ್ನು ಚಕಿತಗೊಳಿಸುತ್ತಾರೆ.

ಘಟನೆಗಳನ್ನು ಚಕಚಕನೆ ಹೆಣೆಯುವುದರಲ್ಲಿ ಲೇಖಕರು ಸಿದ್ಧಹಸ್ತರೆನಿಸುತ್ತಾರೆ. ವಾಮಾಚಾರ, ವೈಜ್ಞಾನಿಕ, ಮನೋವೈಜ್ಞಾನಿಕ ನೆಲಗಟ್ಟನ್ನು ಕಾದಂಬರಿ ಪಡೆದಿದ್ದು ಓದುವಾಗ ಎಲ್ಲಿಯೂ ಬೇಸರವಾಗುವುದಿಲ್ಲ. ಕಾದಂಬರಿಯು ಮೊದಲ ಭಾಗ "ತುಳಸಿದಳ"ದಂತೆ ಇಲ್ಲಿಯೂ ಕುತೂಹಲವನ್ನು ಕೊನೆಯವರೆಗೂ ಕಾಪಾಡಿಕೊಂಡು ಬರಲಾಗಿದೆ ಆದರೂ ಮನುಷ್ಯನ ದಶವಿಧ ನಾಡಿಗಳ ಕುರಿತು ಪಿಶಾಚಿ ದಾಕ್ತರ್‌ನಿಗೆ ಹೇಳುವಾಗ (ಪುಟ: ೧೬) ಕೇವಲ ಎಂಟು ನಾಡಿಗಳ ಬಗ್ಗೆಯಷ್ಟೇ ಹೇಳುವುದು; ಮಾನವ ಶರೀರದ ಪಂಚವಾಯು ಕುರಿತಂತೆ ದಾಕ್ತರ್ ಸಿದ್ದೇಶ್ವರಿಗೆ ಹೇಳುವಾಗ (ಪುಟ: ೧೨೮) ನಾಲ್ಕರ ಬಗ್ಗೆ ಪ್ರಸ್ತಾಪಿಸಿ, ಉದಾನಾ ವಾಯುವನ್ನೇ ಮರೆಯುವುದು ವಶೀಕರಿಸಲ್ಪಟ್ಟ ವ್ಯಕ್ತಿ (ಪಂಡಿತ್), ವಶೀಕರಿಸಿದವರ (ಪ್ರೊ| ಜಯದೇವ್) ನೆರವಿಲ್ಲದೆಯೇ ವಾಸ್ತವ ಸ್ಥಿತಿಗೆ ಹಿಂತಿರುಗುವುದು (ಪುಟ: ೪೯೧): ಮುಂತಾದ ದೋಷಗಳು ನಿರೂಪಣೆಯಲ್ಲಿ ಕಂಡುಬರುತ್ತವೆ.

ಮುದ್ರಣ ಕಾರ್ಯ ಅದ್ಭುತ ಎಂದು ಹೇಳಲಾಗದಿದ್ದರೂ ಉತ್ತಮ ಎನ್ನಲು ಅಡ್ಡಿಯೇನಿಲ್ಲದ "ತುಳಸಿ", ಕನ್ನಡದಲ್ಲಿ ಒಂದು ಒಳ್ಳೆಯ ಪ್ರಯತ್ನ.

ವೆಂ. ವೆಂಕಟಸುಬ್ಬಯ್ಯ

* * *

ಗುಡ್ಡಾಪುರ ದಾನಮ್ಮದೇವಿ (ಜೀವನ ಚರಿತ್ರೆ) : ಲೇಖಕರು: ಶ್ರೀ ಮಲ್ಲಿಕಾರ್ಜುನ ಶಿ. ಲಠ್ಠೆ. ಪ್ರಕಾಶಕರು : ಶ್ರೀ ಗುರುಸಿದ್ದಪ್ಪ ಪುಟ್ಟಪ್ಪ ಸಿಂಧೂರ, ಸವಣೂರು, ಪುಟ : ೩೭, ಬೆಲೆ : ಮೂರು ರೂಪಾಯಿ.

ಮನುಷ್ಯ ಜೀವನದಲ್ಲಿ ಬಹುದೊಡ್ಡ ಪಾತ್ರವಹಿಸುವ ಹೆಣ್ಣನ್ನು ಕನಿಷ್ಠ ಕೆಂದು, ದಾಸಿಯೆಂದು ಧರ್ಮದಿಂದ ದೂರವಿರಿಸಿದ ನಿದರ್ಶನಗಳಿದ್ದಾಗ್ಯೂ

ಪುರುಷರಷ್ಟೇ ಸಮಾನವಾದ ಸ್ಥಾನ ನೀಡಿ ದೈವತ್ವಕ್ಕೇರಿಸಿ ಗೌರವಿಸಿದ ಘನತೆ ೧೨ನೆಯ ಶತಮಾನದ ಶರಣರದು. ಅಂಥವರ ಆದರ್ಶತತ್ವಗಳ ಮೂರ್ತಸ್ವರೂಪ ರಾಗಿ ಇದ್ದ ಆ ದಿನಗಳಲ್ಲಿಯ ಅನೇಕ ಮಹಿಳಾಮಣಿಗಳಲ್ಲಿ ಗುಡ್ಡಾಪುರದ ದಾನಮ್ಮ ಪ್ರಮುಖಳು. ಶಿವಶರಣೆಯಾಗಿ ಸ್ವಧರ್ಮರಕ್ಷಣೆಗಾಗಿ ಋಷಿ ಹೃದಯ ದೊಂದಿಗೆ ರಣಧೀರೆಯೂ ಆಗಿ ಕಾದಾಡಿದ ವೀರವನಿತೆಯಾಗಿ ಮೆರೆದ ಇವಳ ಜೀವನ ಚರಿತ್ರೆಯನ್ನು ಶ್ರೀ ಮಲ್ಲಿಕಾರ್ಜುನ ಲಠ್ಠೆಯವರು ಸ್ವಧರ್ಮಿಯರು ಎದೆಯುಬ್ಬಿಸಿ ಅಭಿಮಾನಪಡುವ ರೀತಿಯಲ್ಲಿ ಪರಧರ್ಮಿಯರು ಮೆಚ್ಚಿ ಸಂತಸ ಪಡುವ ಹಾಗೆ ಬರೆದು ದಿವ್ಯ ಜೀವಿಗೆ ಗೌರವ ಸಲ್ಲಿಸಿದ್ದಾರೆ. ಲೇಖಕರೇ ಹೇಳು ವಂತೆ ಪುರಾಣ ಹಾಗೂ ಐತಿಹಾಸಿಕ ಕಾವ್ಯಗಳಲ್ಲಿ ಬರುವ ಮೂಲಕತೆಯ ಆಧಾರದೊಂದಿಗೆ ಶರಣ ಸಂಸ್ಕೃತಿಯ ಹಿನ್ನೆಲೆಯಲ್ಲಿ ಪ್ರಸ್ತುತ ದಾನಮ್ಮ ದೇವಿಯ ಜೀವನ ದರ್ಶನ ಮಾಡಿಸಿದ್ದಾರೆ.

ಶರಣರ ಲೋಕದಲ್ಲಿ ಎಲೆಯ ಮರೆಯ ಹೂವಿನಂತಿರುವ ದಾನಮ್ಮನ ಬಾಲ್ಯಜೀವನ ಆಧ್ಯಾತ್ಮ ಲೋಕದ ಕಡೆಗಿದ್ದ ಒಲವು, ಆ ದಿಸೆಯಲ್ಲಿ ಅನುಭವ ಮಂಟಪ ಸೇರಿಕೊಂಡು ನಡೆಸಿದ ಸಾಧನೆ ಶರಣನೇ ಆಗಿದ್ದ ಪತಿ ಸೋಮನಾಥನ ಸಕ್ರಿಯ ಸಹಾಯ ಸಹಕಾರಗಳಿಂದ ಅವಳು ಧರ್ಮಪ್ರಸಾರ ಹಾಗೂ ತತ್ವಗಳ ಆಚರಣೆಯಲ್ಲಿ ತೊಡಗಿದ್ದ ರೀತಿ ಪದ್ಧತಿಯಂತೆ ಚರಿತ್ರೆಯಲ್ಲಿ ನಿರೂಪಿತವಾಗಿವೆ. ವಚನಗಳ ಉದಾಹರಣೆಗಳೊಂದಿಗೆ ಅವಳ ಆದರ್ಶ ವ್ಯಕ್ತಿತ್ವವನ್ನು ಲೇಖಕರು ಬಿಂಬಿಸಿದ್ದಾರೆ.

ಧರ್ಮದ ಉಳಿವಿಗಾಗಿ ಶರಣರ ಮಾನರಕ್ಷಣೆಗಾಗಿ ಬಿಜ್ಜಳನ ಸೈನ್ಯದೊಂದಿಗೆ ಹೋರಾಡಿದ ಗಣಾಚಾರಿ ಇವಳು. ಅಲ್ಲದೆ ಆಲಂಪುರದಲ್ಲಿ ಅನ್ಯಮತೀಯರು ಶಿವಲಿಂಗವನ್ನು ಕಿತ್ತೊಗೆದು ವೀರನಾರಾಯಣನ ಮೂರ್ತಿಯನ್ನು ಪ್ರತಿಷ್ಠಾ ಪಿಸಿದಾಗ ಸಿಡಿದೆದ್ದ ಇವಳು ಮರಳಿ ಬ್ರಹ್ಮೇಶ್ವರ ಲಿಂಗವನ್ನು ಅದೇ ಸ್ಥಳದಲ್ಲಿ ಸ್ಥಾಪಿಸಿದ ಸ್ವಧರ್ಮಾಭಿಮಾನಿ. ಈ ಎರಡೂ ಪ್ರಸಂಗಗಳು ಅವಳ ಘನ ವ್ಯಕ್ತಿತ್ವದ ಪರಿಚಯ ನೀಡುತ್ತವೆ. ಅವಳ ವೀರಶೈವಧರ್ಮ ಪ್ರಚಾರದ ವೈಖರಿ, ಅವಳ ದೈವೀಗುಣಗಳನ್ನು, ಆದರ್ಶ ಸದ್ಗುಣಗಳನ್ನು ಮೆಚ್ಚಿದ ಭಕ್ತರು ದೇವಾ ಲಯ ನಿರ್ಮಿಸಿ ದಿನನಿತ್ಯವೂ ಪೂಜೆ ಸಲ್ಲಿಸುವ ವೈಭವ, ಅವಳ ವ್ಯಕ್ತಿತ್ವವನ್ನು ಅಮರವಾಗಿಸುವ ಉದ್ದೇಶದಿಂದ ಆ ಕಾಲದ ಮಾಂಡಲೀಕರು ಕೆತ್ತಿಸಿದ್ದ ಶಾಸನಗಳ ವಿವರ ಎಲ್ಲವೂ ಲೇಖಕರ ಲೇಖನಿಯಿಂದ ವಿವರವಾಗಿ ನಿರೂಪಿತ ವಾಗಿವೆ.

ಪ್ರಪಂಚದಲ್ಲಿದ್ದು ಪಾರಮಾರ್ಥ ಸಾಧಿಸಿದ ಮಾನವಳಾಗಿ ದೈವತ್ವಕ್ಕೇರಿದ ಸಾಧ್ವಿಯ ಜೀವನ ಸಂಪೂರ್ಣ ಚರಿತ್ರೆಯನ್ನು ಈ ಕಿರುಹೊತ್ತಿಗೆಯಲ್ಲಿ ಲೇಖಕರು ಮಾಡಿಕೊಟ್ಟಿದ್ದಾರೆ. ವೀರಶೈವಧರ್ಮ ಶಿರೋಮಣಿ, ಮಹಿಳಾಕುಲ ಮಣಿಯೋರ್ವಳ ಪುಣ್ಯಜೀವನ ಚರಿತ್ರೆಯನ್ನು ಲೇಖಕರು ಅರ್ಥವತ್ತಾಗಿ ನಿರೂಪಿಸಿದ್ದಾರೆ. ಸರಳವಾದ ಶೈಲಿ, ಕ್ಲಿಷ್ಟವಲ್ಲದ ಪದಗಳ ಬಳಕೆ, ನೇರ ನಿರೂಪಣೆ, ಸಮಂಜಸ ವಸ್ತುವಿನ ಆಯ್ಕೆಯಲ್ಲಿ ಲೇಖಕರ ನಿರೂಪಣಾ ಶಕ್ತಿಯ ಅಗಾಧತೆ ಅಡಗಿದೆ. ಕೊನೆಯಲ್ಲಿ ದಾನಮ್ಮನ ಶರಣ ಜೀವನವನ್ನು ಸಾತ್ವಿಕ ವ್ಯಕ್ತಿತ್ವವನ್ನು ಹಾಡಿಹರಸುವ ಪದಗಳಿವೆ.

ಗುರುದೇವಿ ಹೆಚ್. ಮಠ

ಉತ್ಸಾಹವಿಲ್ಲದ, ದೀನನಾದ, ದುಃಖ ವ್ಯಾಕುಲವಾದ ಮನಸ್ಸುಳ್ಳವನ ಯಾವ ಕಾರ್ಯವೂ ಸಫಲವಾಗುವುದಿಲ್ಲ.

—ವಾಲ್ಮೀಕಿ

ಯಾವನು ಕಾನೂನಿಗೆ ಪೂರ್ಣ ಮರ್ಯಾದೆ ಕೊಡುವನೋ ಅವನು ಕಾನೂನು ಭಂಗ ಚಳುವಳಿಗೆ ಅತ್ಯಂತ ಅರ್ಹ.

—ಗಾಂಧೀಜಿ

ಅನೇಕರು ಇತರರ ಮೇಲೆ ಅಧಿಕಾರ ನಡೆಸಬಲ್ಲರು. ಆದರೆ ತಮಗೆ ತಾವೇ ವಿಧೇಯರಾಗಿರಲಾರರು.

—ಜಾರತುಷ್ಟ

ಆತ್ಮಪ್ರಶಂಸೆಯಲ್ಲಿ ಬಾಯಿಬಡುಕರಾದವರು ಮತ್ತೊಬ್ಬರ ಪ್ರಶಂಸೆ ಮಾಡಬೇಕಾದಾಗ ಮೌನ ತಾಳುತ್ತಾರೆ.

—ಭಾರವಿ

ಲೋಕದಲ್ಲಿ ಸಂಪತ್ತಿನ ಬಲದಿಂದ ದುಷ್ಟರು ಸುಖಪಟ್ಟರೂ ಅವಸಾನದಲ್ಲಿ ದುರಂತಕ್ಕೀಡಾಗುತ್ತಾರೆ.

—ಜಯದೇವ

ಲೇಖಕರು ಮತ್ತು ಲೇಖನಗಳು

ಪ್ರತಿಯೊಂದು ಹೆಸರಿನ ಮುಂದೆ ಶ್ರೀ ಅಥವಾ ಶ್ರೀಮತಿ ಎಂದು ಸೇರಿಸಿಕೊಂಡು ಓದಿಕೊಳ್ಳಬೇಕಾಗಿ ವಿನಂತಿ.

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಬಿಡಿ ಪ್ರತಿ: ಒಂದು ರೂಪಾಯಿ

ವಾರ್ಷಿಕ ಚಂದಾ: ೧೦ ರೂಪಾಯಿ

ಸಾರ್ವಜನಿಕ ವಿದ್ಯಾವಂತರ ಉಪಯೋಗಕ್ಕಾಗಿ, ಮುಖ್ಯವಾಗಿ ಗ್ರಾಮಸ್ಥರ ಮತ್ತು ಗ್ರಾಮ ಪುಸ್ತಕ ಭಂಡಾರಗಳ ಅಧಿಕಾರಿಗಳ ಉಪಯೋಗಕ್ಕಾಗಿ ಈ ಪತ್ರಿಕೆ ಪ್ರಕಟವಾಗುತ್ತಿದೆ.

(ಅ) ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಮತ್ತು ಲೇಖನಗಳ ಸಾರಾಂಶಗಳನ್ನು ಪ್ರಕಟಿಸಿ ಅವುಗಳ ಪರಿಚಯವನ್ನು ಮಾಡಿಕೊಡುವುದು.

(ಆ) ಆಯಾ ತಿಂಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಮತ್ತು ಮುಖ್ಯ ಕನ್ನಡ ಲೇಖನಗಳನ್ನು ಪ್ರಕಟಿಸುವುದು.

(ಇ) ಕನ್ನಡದಲ್ಲಿ ಪ್ರಕಟವಾಗಿರುವ ಉತ್ತಮ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುವುದು.

(ಈ) ಪುಸ್ತಕ ಭಂಡಾರ ವ್ಯವಸ್ಥೆ ವಿಚಾರವಾಗಿ ಲೇಖನಗಳನ್ನು ಪ್ರಕಟಿಸುವುದು.

(ಉ) ಒಬ್ಬ ಲೇಖಕರ ಎಲ್ಲ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು. ಒಂದು ವಿಷಯದ ಮೇಲೆ ಬರೆದಿರುವ ಅನೇಕ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು.

(ಊ) ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಕಥೆಗಳು, ಕವಿತೆಗಳು, ಪ್ರಬಂಧಗಳ ಮತ್ತು ವ್ಯಕ್ತಿ ಚಿತ್ರಗಳನ್ನು ಪ್ರಕಟಿಸುವುದು.

(ಋ) ಕಲಾಚಿತ್ರಗಳನ್ನು ಅಚ್ಚು ಮಾಡುವುದು.

(ೠ) ಕನ್ನಡದಲ್ಲಿ ಪ್ರಕಟವಾದ ಅತಿ ಮುಖ್ಯ ಲೇಖನದ ಸಾರಾಂಶವನ್ನು ಪ್ರಕಟಿಸುವುದು.

(ಎ) ಗ್ರಾಮಸ್ಥರಿಗೆ ರುಚಿಸುವ ವಿಷಯಗಳ ಮೇಲೆ ಸುಲಭ ಶೈಲಿಯಲ್ಲಿ ಲೇಖನಗಳನ್ನು ಪ್ರಕಟಿಸುವುದು.

ಪ್ರಧಾನ ಕಾರ್ಯದರ್ಶಿ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಕೃಷ್ಣಮೂರ್ತಿಪುರಂ : : ಮೈಸೂರು-೪

Reg. No. KRNN. 29 / WPP 6
LICENSE No. 21
LICENSED TO POST WITHOUT PREPAYMENT

ನೀವು ಓದಲೇಬೇಕಾದ ಪುಸ್ತಕಗಳು....

Edited by R. Boraiah, Printed by H. G. Ramaswamy Iyengar Manager, Karnataka State Adult Education Council Press and Published by Karnataka State Adult Education Council Mysore city (India)